# ನೀನಾಸಮ್ ರಂಗಶಿಕ್ಷಣ ಕೇಂದ್ರ

ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭

## ಡಿಪ್ಲೋಮಾ ಇನ್ ಥಿಯೇಟರ್ ಆರ್ಟ್ಸ್

ಪ್ರಕಟಣೆ

ಕರ್ನಾಟಕ ರಾಜ್ಯ ಸರ್ಕಾರದ ಮಾನ್ಯತೆ ಪಡೆದಿರುವ ನೀನಾಸಮ್ ರಂಗಶಿಕ್ಷಣ ಕೇಂದ್ರ ೨೦೦೩ -೨೦೦೪ನೇ ಸಾಲಿನ ಪ್ರಶಿಕ್ಷಣಕ್ಕೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತದೆ. ಪ್ರವೇಶಕ್ಕೆ ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ. ಇರಬೇಕು. ಪದವೀಧರರಿಗೆ ಆದ್ಯತೆ ಇರುತ್ತದೆ. ರಂಗಭೂಮಿಯಲ್ಲಿ ಆಸಕ್ತಿಯಿದ್ದು, ಸ್ವಲ್ಪಮಟ್ಟಿನ ಅನುಭವ ಇರಬೇಕಾದ್ದು ಅಗತ್ಯ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಊಟ, ವಸತಿ ವ್ಯವಸ್ಥೆಯಿದೆ. ಎಲ್ಲರಿಗೂ ವಿದ್ಯಾರ್ಥಿವೇತನ ದೊರೆಯುತ್ತದೆ.

ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ರಂಗಕಲ್ಪನೆ, ರಂಗಇತಿಹಾಸ, ನಾಟಕ ಇತಿಹಾಸ, ರಂಗನಟನೆ, ರಂಗಸಿದ್ಧತೆ, ರಂಗವ್ಯವಸ್ಥೆ ಮುಂತಾಗಿ ವಿಸ್ತಾರವಾದ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಶಿಕ್ಷಣ ನೀಡಲಾಗುತ್ತದೆ. ಕೇಂದ್ರದ ನುರಿತ ಅಧ್ಯಾಪಕರುಗಳಲ್ಲದೆ ಹೊರಗಿನ ತಜ್ಞರನ್ನು ಕರೆಸಿ ಸಾಕಷ್ಟು ಪ್ರಬುದ್ಧ ಶಿಕ್ಷಣ ಕೊಡಲಾಗುತ್ತದೆ. ಒಳ್ಳೆಯ ಗ್ರಂಥಭಂಡಾರ ಹಾಗೂ ದೃಶ್ಯಶ್ರವ್ಯ ಪರಿಕರಗಳ ಅನುಕೂಲತೆಯಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರು ಪ್ರತಿದಿನ ಸುಮಾರು ೧೨ ಗಂಟೆಗಳಷ್ಟು ಅಭ್ಯಾಸದಲ್ಲಿ ತೊಡಗಿರಬೇಕಾಗುತ್ತದೆ.

ಪ್ರಾಸ್ಪೆಕ್ಟಸ್ ಮತ್ತು ಪ್ರವೇಶ ಪತ್ರಕ್ಕೆ ರೂ. ೫೦-೦೦ ಕಳಿಸಿ ಬರೆದುಕೊಳ್ಳಬಹುದು. ಪ್ರವೇಶ ಪತ್ರವನ್ನು ಭರ್ತಿಮಾಡಿ ೨೧-೬-೨೦೦೩ ಶನಿವಾರದ ಒಳಗೆ ನೀನಾಸಮ್ ರಂಗಶಿಕ್ಷಣ ಕೇಂದ್ರ, ಹೆಗ್ಗೋಡು, ಸಾಗರ, ಶಿವಮೊಗ್ಗ ೫೭೭ ೪೧೭ ಈ ವಿಳಾಸಕ್ಕೆ ತಲುಪುವಂತೆ ಕಳಿಸಬೇಕು. ದಿನಾಂಕ ೨೯-೬-೨೦೦೩ ಭಾನುವಾರ ಬೆಳಿಗ್ಗೆ ೯ ಗಂಟೆಗೆ ಅಭ್ಯರ್ಥಿಗಳು ತಮ್ಮ ವೆಚ್ಚದಲ್ಲೇ ಆಯ್ಕೆಯ ಸಂದರ್ಶನಕ್ಕಾಗಿ ಹೆಗ್ಗೋಡಿಗೆ ಬಂದು ಹಾಜರಾಗಬೇಕು. ಸಂದರ್ಶನಕ್ಕೆ ಪ್ರತ್ಯೇಕ ಕರೆಯೋಲೆ ಕಳಿಸುವುದಿಲ್ಲ.

ಹೆಗ್ಗೋಡು

ಪ್ರಾಂಶುಪಾಲರು
ನೀನಾಸಮ್ ರಂಗಶಿಕ್ಷಣ ಕೇಂದ್ರ

# ಕಾಡುವ ಭವಿಷ್ಯಕಾಲದ ಭ್ರೂಣಗೂಢಗಳು

ಶಿವ ವಿಶ್ವನಾಥನ್

*ನೀನಾಸಮ್ ಸಂಸ್ಕೃತಿ ಶಿಬಿರ - ಅಕ್ಟೋಬರ್ ೨೦೦೨ ರ ಮುಖ್ಯ ಆಶಯ 'ಭವಿಷ್ಯಚಿಂತನೆ'ಯಾಗಿತ್ತು. ಅದರ ಕುರಿತು ನಡೆದ ಕೆಲವು ಉಪನ್ಯಾಸಗಳನ್ನು ಇಲ್ಲಿ ನೀಡುತ್ತಿದ್ದೇವೆ. ಆಶಯ ಭಾಷಣ ಮಾಡಿದ, ನಮ್ಮ ಶ್ರೇಷ್ಠ ಚಿಂತಕರಲ್ಲೊಬ್ಬರಾದ ಶ್ರೀ ಶಿವ ವಿಶ್ವನಾಥನ್ ನವದೆಹಲಿಯ ಸೆಂಟರ್ ಫಾರ್ ಸ್ಟಡಿ ಆಫ್ ಡೆವಲಪಿಂಗ್ ಸೊಸೈಟೀಸ್‌ನ ಪ್ರಮುಖ ಸದಸ್ಯರು.*
*ಸಂಗ್ರಹ - ಅನುವಾದ : ಜಶವಂತ ಜಾಧವ್*

ಮೂಲತಃ ಸಮಾಜ ಶಾಸ್ತ್ರಜ್ಞನಾದ ನಾನು ಇಲ್ಲಿ ಈಗ ಕಥೆಗಾರರ ನಾಡಿನಲ್ಲಿನಿಂತಿದ್ದೇನೆ. ಸಮಾಜ ವಿಜ್ಞಾನಿಗಳು ಸಾಮಾನ್ಯವಾಗಿ ಕಥನ ಪ್ರತಿಭೆಯ ಭಾಗ್ಯವನ್ನು ಪಡೆಯದಿರುವವರು. ಆದರೂ ಅವರು ಪರಿಶ್ರಮದಿಂದಾದರೂ ಅದನ್ನು ಗಳಿಸಲು ಪ್ರಯತ್ನಿಸಬೇಕೆಂದು ನಂಬಿರುವವನು ನಾನಾದುದರಿಂದ ಈ ಉಪನ್ಯಾಸವನ್ನು ಮೂರು ಕಥೆಗಳೊಂದಿಗೇ ಪ್ರಾರಂಭಿಸುತ್ತೇನೆ. ಈ ಕಥೆಗಳು ಒಂದೆಡೆ ಈ ಸಂಸ್ಕೃತಿ ಶಿಬಿರದ ಮುಖ್ಯ ಆಶಯವಾದ 'ಭವಿಷ್ಯ ಚಿಂತನೆ' ಗೆ ಪ್ರವೇಶವೊಂದನ್ನು ದೊರಕಿಸಿ ಕೊಡುವಂಥವು; ಇನ್ನೊಂದೆಡೆ 'ಭವಿಷ್ಯ' ದ ಕುರಿತು ನನಗಿರುವ ಆಶೆ-ಆತಂಕಗಳ ಆಟಕ್ಕೊಂದು ಸ್ಥೂಲ ಚೌಕಟ್ಟನ್ನು ಒದಗಿಸುಕೊಡುವಂಥವು.

ಮೊದಲನೆಯ ಕಥೆ ಇದು: ಅಮೆರಿಕೆಯ ಅನಾಧುನಿಕ ರೆಡ್ ಇಂಡಿಯನ್ ಓರ್ವನೂ ಅತ್ಯಾಧುನಿಕ ಟೆಕ್ಸಾಸ್ ಪ್ರಾಂತ್ಯದ ಬಿಳಿಯನೋರ್ವನೂ ಪರಸ್ಪರ ಭೇಟಿಯಾದರಂತೆ. ಟೆಕ್ಸಾಸ್‌ನ ಮನುಷ್ಯ ರೆಡ್ ಇಂಡಿಯನ್ ಆದಿವಾಸಿಗೆ 'ನಾವು ತುಂಬಾ ಪ್ರಗತಿ ಸಾಧಿಸಿದ್ದೇನೆ; ನಿಮಗಿಂತ ಬಹಳ ಮುಂದೆ ಹೋಗಿದ್ದೇವೆ. ತಿಳಿದಿದೆಯೆ ? ಎಂದನಂತೆ. ಅದಕ್ಕೆ ಆದಿವಾಸಿ ಇಂಡಿಯನ್ 'ಹೌದೋ ? ತುಂಬಾ ಸಂತೋಷ. ನಾವಿಬ್ಬರೂ ನಮನಮಗೆ ಎಲ್ಲೆಲ್ಲಿರಬೇಕೆಂಬ ಆಸೆಯಿದೆಯೊ ಅಲ್ಲಲ್ಲಿಯೆ ಇದ್ದಂತಾಯಿತಲ್ಲ' ಎಂದು ಉತ್ತರಿಸಿದನಂತೆ. ಈ ಪ್ರಸಂಗ, ಒಂದು ರೀತಿಯಲ್ಲಿ ಇಪ್ಪತ್ತನೆಯ ಶತಮಾನದ ಪ್ರಮುಖ ವಿಷಯಗಳಾದ ಆಯ್ಕೆ, ಸ್ವಾತಂತ್ರ್ಯ ಹಾಗೂ

ವೈವಿಧ್ಯತೆಗಳ ಕುರಿತಾದ ಪ್ರಶ್ನೆಗಳನ್ನು ಧ್ವನಿಸುತ್ತದೆ; ಎಲ್ಲಕ್ಕಿಂತ ಹೆಚ್ಚಾಗಿ, ನಮ್ಮ ಕಾಲದ ಅತಿಮುಖ್ಯ ವಿದ್ಯಮಾನವಾದ ಹಿಂಸೆಯ ಸಮಸ್ಯೆಯನ್ನು ಪ್ರಸ್ತಾಪಿಸುತ್ತದೆ. ಸಮುದಾಯವೊಂದು ತನಗಿಂತ ಹಿಂದುಳಿದದ್ದೆಂದೂ ವರ್ಗೀಕರಿಸಿಕೊಂಡು, ತನ್ನ 'ಪ್ರಗತಿ'ಯ ಕಲ್ಪನೆಯನ್ನು ಪರರ ಮೇಲೆ ಹೇರುವುದು ಎಷ್ಟು ಸಾಧು ಎನ್ನುವುದು ಇಂದು ನಮ್ಮನ್ನು ತೀವ್ರವಾಗಿ ಬಾಧಿಸುತ್ತಿರುವ ಪ್ರಶ್ನೆಯಾಗಿದೆ. ಇಂಥ ಸನ್ನಿವೇಷದಲ್ಲಿ, ಪ್ರಗತಿ-ಅಪ್ರಗತಿಗಳ ಪರಿಕಲ್ಪನೆಗಳು ಆಧುನಿಕ-ಅನಾಧುನಿಕಗಳೆಂಬ ಕಾಲಭೇದದ ಪರಿಕಲ್ಪನೆಗಳಾಗಿ ಬೆಳೆಯುವುದಷ್ಟೆ ಅಲ್ಲದೆ ಸ್ಮೃತಿ ರೀತಿಗಳ ನಡುವೆಯೂ ಭೇದಭಾವ ಕಲ್ಪಿಸುವ ಮಾಪಕಗಳಾಗಿ ಮಾರ್ಪಡುತ್ತವೆ; ಅಂತಿಮವಾಗಿ ಜನಾಂಗೀಯ ದಮನಕಾಂಡಗಳ ಅಸ್ತ್ರಗಳಾಗಿಯೂ ರೂಪು ಪಡೆಯುತ್ತವೆ. ಇಂಥದೊಂದು ಆತ್ಯಂತಿಕ ಸಂದರ್ಭದಲ್ಲಿ ತನ್ನನ್ನು ಪ್ರಗತಿಪರವೆಂದು ತಿಳಿದ ವರ್ಗವೊಂದು ತನ್ನ ಆಯ್ಕೆಯನ್ನೇ ಇತರರ ಮೇಲೆ ಹೇರುವ ಅವರ ಸ್ವಾತಂತ್ರ್ಯವನ್ನು ಕಸಿಯುವ, ಒಟ್ಟು ಜಗತ್ತಿನ ವೈವಿಧ್ಯ-ವಿಸ್ತಾರಗಳನ್ನು ಕುಗ್ಗಿಸುವ ಯಜಮಾನಿಕೆಯಲ್ಲಿ ತೊಡಗಿ, ಅದಕ್ಕೆ ಪ್ರತಿರೋಧ ಬಂದಲ್ಲಿ ಪ್ರತ್ಯಕ್ಷವೊ ಪರೋಕ್ಷವೊ ಆದ ಹಿಂಸಾತ್ಮಕ ಕ್ರಮಗಳನ್ನು ಕೈಗೊಳ್ಳಬಹುದು. ಹಲವು ಧೀಮಂತರು ಈಗಾಗಲೆ ಗುರುತಿಸುರುವಂತೆ, ಇಂಥ ಅಂಥ ಶ್ರೇಷ್ಠತೆಯ ಶಕ್ತಿಗಳು ನಮ್ಮ ಭೂತಕಾಲವನ್ನು ಆಳಿದ್ದಷ್ಟೆ ಅಲ್ಲದೆ, ನಮ್ಮ ವರ್ತಮಾನವನ್ನು ನಿಯಂತ್ರಿಸುತ್ತಿರುವುದಷ್ಟೆ ಅಲ್ಲದೆ, ಈಗ ನಮ್ಮ ಭವಿಷ್ಯಗಳನ್ನೂ ತಾವೆ ನಿರ್ಧರಿಸುತ್ತಿವೆ. ಭವಿಷ್ಯವೆನ್ನುವುದು ಇಂದು ನಾವು ನಮ್ಮ ನಮ್ಮ ಇಷ್ಟಾನಿಷ್ಟಗಳ ಪ್ರಕಾರ ಕಟ್ಟಿಕೊಳ್ಳಬಹುದಾದ ಬಹುರೂಪಿ ಭವ-ಭಾವ-ವಲಯವಾಗಿ ಇಳಿದಿಲ್ಲ. ಅದು 'ಅಭಿವೃದ್ಧರು' ನಮಗೆಂದು ಇಂದಾಗಲೇ ತಯಾರಿಸಿಟ್ಟಿರುವ ಬಯಲು ಬಂದೀಖಾನೆಯಂತಾಗಿದೆ. ಇಂಥ ಪ್ರಕ್ರಿಯೆಯನ್ನು ಬಯಸುವ ಹಾಗೂ ಬೆಂಬಲಿಸುವ ಸಂಕುಚಿತ ಮನೋಭಾವದ ಆಧುನಿಕ ವಿಜ್ಞಾನ ಸಾಮಾಜಿಕ ಹಿಂಸೆಯಾಗಿ ಪ್ರಕಟಗೊಳ್ಳುತ್ತದೆ.

ಇದೆಲ್ಲಾ ಪ್ರಗತಿವಿರೋಧಿಗಳ ಗೋಳುಗೀಳು ಎಂದು ಮೂಗು ಮುರಿಯುವವರು ಈ ಕೆಳಕಂಡ ವಾಸ್ತವಾಂಶಗಳನ್ನಷ್ಟೆ ಗಮನಿಸಿದರೂ ಸಾಕು:

ಕಳೆದ ಒಂದು ಶತಮಾನದಲ್ಲಿಯೆ ಆಧುನಿಕ ರಾಷ್ಟ್ರಪ್ರಭುತ್ವ ವ್ಯವಸ್ಥೆ ಜಗತ್ತಿನಾದ್ಯಂತ ಅಭಿವೃದ್ಧಿಯ ಹೆಸರಿನಲ್ಲಿ ಒಂದು ನೂರು ಮಿಲಿಯನ್‌ಗೂ ಹೆಚ್ಚು ಜನರನ್ನು ಹತ್ಯೆಗೈದಿದೆ. ಪ್ರಗತಿದೇವರ ಪ್ರೀತ್ಯರ್ಥವಾಗಿ ಸರ್ಕಾರಗಳು ತಮ್ಮ ಪ್ರಜೆಗಳನ್ನೆ ಕೋಟಿಗಟ್ಟಲೆ ಸಂಖ್ಯೆಯಲ್ಲಿ ಬಲಿ ನೀಡಿವೆ. ಇಂಥ ಪ್ರಗತಿರಥ ಎಷ್ಟು ಬಲಾಢ್ಯವೂ ನಿರ್ದಯವೂ ಆಧುದೆಂದರೆ ತನ್ನ ಬುಡದಲ್ಲಿ ಸಿಕ್ಕವರ ಬಗ್ಗೆ ಅದರ ಕಣ್ಣೇ ಹಾಯದು.



ಉದಾಹರಣೆಗೆ, ದಕ್ಷಿಣ ಅಮೆರಿಕೆಯ ಬ್ರೆಜಿಲ್ ಮತ್ತು ಪರಾಗ್ವೆ ಸರ್ಕಾರಗಳು ಕೆಲವು ವರ್ಷಗಳ ಹಿಂದೆ ಅಭಿವೃದ್ಧಿ ಯೋಜನೆಗಳಿಗೆಂದು ಸಾವಿರಾರು ವರ್ಷಗಳಿಂದ ಒಂದೆಡೆ ಬಾಳುತ್ತಬಂದಿದ್ದ ಅಸಂಖ್ಯಾತ ಆದಿವಾಸಿಗಳನ್ನು ಒಕ್ಕಲೆಬ್ಬಿಸಿದವು; ಅವರು ದಿಕ್ಕುದೆಸೆಯಿಲ್ಲದೆ. ನರಳಲೊ, ಜೀವ ಕಳೆದುಕೊಳ್ಳಲೊ ಕಾರಣವಾದುವು. ಇದರಿಂದ ಆಘಾತಗೊಂಡ ಕೆಲವು ಸಮಾಜ ವಿಜ್ಞಾನಿಗಳು ಆ ಎರಡೂ ಸರ್ಕಾರಗಳ ವಿರುದ್ಧ ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ದೂರಿತ್ತರು. ಆ ವಿಷಯ ಚರ್ಚೆಗೆ ಬಂದಾಗ ಬ್ರೆಜಿಲ್‌ದೇವದ ಪ್ರತಿನಿಧಿ ತಣ್ಣಗೆ ನುಡಿದ: 'ಹೌದು, ಅವರೆಲ್ಲ ನಾಶವಾಗುತ್ತಿರುವುದು ನಿಜ. ಆದರೆ ಪ್ರಗತಿಯ ತರ್ಕದ ಪ್ರಕಾರ ಅಂಥದೆಲ್ಲ ಅನಿವಾರ್ಯ ತಾನೆ?'

ನನ್ನ ಎರಡನೆಯ ಕಥೆ ಗಾಂಧಿಯನ್ನು ಕೇಂದ್ರವಾಗಿ ಹೊಂದಿರುವಂಥದು. ಇದು, ಭವಿಷ್ಯದ ಕುರಿತಾದ ನಮ್ಮ ಚರ್ಚೆಯಲ್ಲಿ ಎಲ್ಲ ಘನಗಾಂಭೀರ್ಯ ಹಾಗೂ ತೀವ್ರ ಕಾಳಜಿಗಳ ಜೊತೆಗೆಯೆ ನಾವು ತುಸುವಾದರೂ ತೋರಲೇಬೇಕಾದ ಹಾಸ್ಯಪ್ರಜ್ಞೆಯ ಮಹತ್ವವನ್ನು ಮನಗಾಣಿಸುವಂಥದು. ಅನೇಕ ಜನ ಗಾಂಧಿಯನ್ನು ವಿನೋದಹೀನ ವ್ಯಕ್ತಿಯೆಂದು ತಿಳಿಯುವುದುಂಟು. ಆದರೆ ನನ್ನ ಮಟ್ಟಿಗೆ ಆತ ಅತಿಶ್ರೇಷ್ಠ ವಿನೋದಶೀಲರಲ್ಲಿ ಒಬ್ಬಾತ. ಇಂಥ ಗಾಂಧಿಯನ್ನು ಬ್ರಿಟಿಷ್ ಪತ್ರಕರ್ತನೋರ್ವ ಒಮ್ಮೆ 'ಮಾನ್ಯ ಗಾಂಧಿಯವರೆ, ಪಾಶ್ಚಾತ್ಯ ನಾಗರಿಕತೆಯ ಬಗೆಗೆ ನಿಮಗೇನನಿಸುತ್ತದೆ?' ಎಂದು ಕೇಳಿದನಂತೆ. ಅದಕ್ಕೆ ಗಾಂಧಿ ನಕ್ಕು 'ಅದು ಚಂದಾವಾದೊಂದು ಕಲ್ಪನೆಯಾಗಬಲ್ಲದು' ಎಂದುತ್ತರಿಸಿದರಂತೆ. ಇದಿಷ್ಟು ನಿಜಪ್ರಸಂಗವಾದರೆ ಕಥೆಯ ಮುಂದಿನ ಭಾಗ ಕಲ್ಪನಾವಲಯದ್ದು. ನಾನು ಇತ್ತೀಚೆಗೆ ನೋಡಿದ ವ್ಯಂಗ್ಯಚಿತ್ರ ವೊಂದರಲ್ಲಿ, ಗಾಂಧಿ ಭೂಮಿಗೆ ಮರಳಿ ಬರುತ್ತಾರೆ; ಮತ್ಯಾರೋ ಪತ್ರಕರ್ತನೋರ್ವ ಅವರನ್ನು ಪ್ರಶ್ನಿಸುತ್ತಾನೆ: 'ಗಾಂಧಿಯವರೆ, ಭಾರತೀಯ ನಾಗರಿಕತೆಯ ಬಗೆಗೆ ನಿಮಗೇನನಿಸುತ್ತದೆ?' ಗಾಂಧಿ ನಸುನಕ್ಕು ಉತ್ತರಿಸುತ್ತಾರೆ; 'ಅದೂ ಕೂಡ ಚಂದದ ಒಂದು ಕಲ್ಪನೆಯಾಗಬಲ್ಲದು'.

ಗಾಂಧಿಗೆ ಸಂಬಂಧಿಸಿದ ಈ ಅರೆಸತ್ಯ-ಅರೆಕಲ್ಪನೆಯ ನಿದರ್ಶನ ಕಾಣಿಸಿ ಕೊಡುವುದು ಇದು: ನಾವಿಂದು ನಮ್ಮ ಭೂತಸ್ಮೃತಿಗಳನ್ನಷ್ಟೆ ಅಲ್ಲ, ನಮ್ಮ ಭವಿಷ್ಯಕಲ್ಪನೆಗಳನ್ನೂ ಕಳೆದುಕೊಂಡಿದ್ದೇವೆ. ಭವಿಷ್ಯವೆನ್ನುವುದು ಅನ್ಯರಾರೋ ನಮ್ಮ ಮೇಲೆ ಹೇರುವಂತಹ ಭಾರವಾಗಬಾರದು; ಅದು ನಮ್ಮೆಲ್ಲ ಬುದ್ಧಿ-ಭಾವಶಕ್ತಿಗಳ ಆಟದ ಅಂಕಣವಾಗಿರಬೇಕು. ಅಲ್ಲಿ ಕಾಯಕಕರ್ಮಕ್ಕೆಷ್ಟೊ ಕಲ್ಪನಾವಿಲಾಸಕ್ಕೂ ಅಷ್ಟೆ ಆಸ್ಪದವಿರಬೇಕು. ಅಲ್ಲಿ ಎಲ್ಲ ರೀತಿಯ ಪ್ರಯೋಗಗಳಿಗೂ ಅವಕಾಶವಿರಬೇಕು. ತರ್ಕ-ಕುತರ್ಕಗಳೂ ಸತ್ಯ-ಸುಳ್ಳುಗಳೂ ವಾಸ್ತವಿಕತೆ-ಕಲ್ಪಕತೆಗಳೂ ಸಮಾನವಾಗಿ

ಸಲ್ಲುವಂತಹ ವಿಶ್ವವಿಶಾಲ ರಂಗಭೂಮಿಯಾಗಿರಬೇಕು ಅದು. ಹೀಗೆ ಕಲೆ-ವಿಜ್ಞಾನ-ಸಮಾಜಶಾಸ್ತ್ರಗಳೆಲ್ಲದರ ಪ್ರತಿಭಾಸಂಗಮವಾದಾಗಲಷ್ಟೆ ಭವಿಷ್ಯ ನಿಜವಾಗಿಯೂ ಜೀವಂತಿಕೆಯಿಂದ ಕಡಿರಬಲ್ಲುದು.

ಮೂರನೆಯ ಕಥೆ ಇದು: ಇತ್ತೀಚೆಗೆ ನಾನು, ಕೆಲವು ವರ್ಷಗಳ ಹಿಂದೆ ಒರಿಸ್ಸಾ ರಾಜ್ಯದ ಮೇಲೆರಗಿದ ಭೀಕರ ಚಂಡಮಾರುತದ ಬಗೆಗೆ ಅಧ್ಯಯನವೊಂದನ್ನು ನಡೆಸಿದೆ. ಕ್ಷೇತ್ರಕಾರ್ಯಕ್ಕೆಂದು ಅಲ್ಲಿಗೆ ಹೋಗುವ ಮೊದಲು, ದೆಹಲಿಯಲ್ಲಿ ಹಲವು ದಿನ, ಅದೆ ವಿಷಯದ ಕುರಿತು ವಿವಿಧ ಬಗೆಯ ಮಾಹಿತಿಯನ್ನು ಹುಡುಕುತ್ತ, ಹತ್ತಾರು ಸರ್ಕಾರಿ ಇಲಾಖೆಗಳಲ್ಲಿ ಸುತ್ತಾಡಿದೆ. ಆಗ ನಾನು ಸಂದರ್ಶಿಸಿದ ಬಹುಪಾಲು ಅಧಿಕಾರಿಗಳು ಮತ್ತು ವಿಜ್ಞಾನಿಗಳು ಒಂದು ಮಾತನ್ನು ಒತ್ತಿಯೊತ್ತಿ ಹೇಳಿದರು: 'ಇಲ್ಲ, ನಮ್ಮ ಹವಾಮಾನ ತಜ್ಞರು ಚಂಡಮಾರುತದ ಬಗ್ಗೆ ಬಹುನಿಖರವಾದ ಮುನ್ಸೂಚನೆಗಳನ್ನೆ ನೀಡಿದ್ದರು. ಅದನ್ನು ಬಲುದೊಡ್ಡ ಸಾಧನೆಯೆಂದೆ ಪರಿಗಣಿಸಬೇಕು.' ಅಮೇಲೆ ನಾನು ಒರಿಸ್ಸಾದಲ್ಲಿ ಸುಮಾರು ಎರಡು ತಿಂಗಳುಗಳ ಕಾಲ ಹಳ್ಳಿಹಳ್ಳಿಗೂ ಭೇಟಿ ನೀಡುತ್ತ ನನ್ನ ಅಧ್ಯಯನವನ್ನೂ ಮುಂದುವರೆಸಿದೆ. ಅಲ್ಲಿ ಅತಿದೊಡ್ಡ ಅಚ್ಚರಿಯೊಂದು ಕಾದಿತ್ತು. ಹೋದೆಡೆಯೆಲ್ಲ ನಾನು 'ಚಂಡಮಾರುತದ ಬಗ್ಗೆ ನಿಮಗೆ ಯಾರಾದರೂ ಮುನ್ನೆಚ್ಚರಿಕೆ ನೀಡಿದ್ದರೊ? ' ಎಂದು ಹಳ್ಳಿಗರನ್ನು ಕೇಳುತ್ತಿದ್ದೆ; ಅವರು 'ಹೌದು ಸ್ವಾಮಿ, ಮುನ್ನೆಚ್ಚರಿಕೆ ನೀಡಿದ್ದರು' ಎಂದು ತುಂಬು ವಿಶ್ವಾಸದೊಂದಿಗೆ ಉತ್ತರಿಸು ತ್ತಿದ್ದರು. ಮೊದಮೊದಲು ನಾನು ಮರುಳನಂತೆ, ಹಳ್ಳಿಗರು ಹೇಳಿದ್ದು ಪೂರ್ವಸೂಚನೆ ನೀಡಿದವರು ವಿಜ್ಞಾನಿಗಳು ಎಂದೇ ನಂಬಿಕೊಂಡುಬಿಟ್ಟೆ. ಎಷ್ಟೋ ದಿನಗಳು ಹೀಗೆಯೆ ಕಳೆದಮೇಲೆ ತುಸು ಸಂದೇಹ ಕೆರಳಿ ನಾನು, ಮುನ್ಸೂಚನೆ ಕೊಟ್ಟವರು ಯಾರೆಂದು ನಿರ್ದಿಷ್ಟವಾಗಿ ಹಳ್ಳಿಗರನ್ನುಕೇಳಿದಾಗ, ಅವರು ಹೇಳಿದರು: 'ಅಯ್ಯೋ, ನಿಮಗೆ ತಿಳಿದಿಲ್ಲವೆ? ಹನ್ನರಡನೆಯ ಶತಮಾನದಲ್ಲಿ ಇಲ್ಲೊಬ್ಬ ಸಂತನಿದ್ದ. ಆತ ಗ್ರಂಥವೊಂದರಲ್ಲಿ ಅಷ್ಟೆಲ್ಲ ಮುಂಚಿತವಾಗಿಯೆ ಮೊನ್ನಿನ ವಿಕೋಪದ ಬಗ್ಗೆ ಅತ್ಯಂತ ನಿಖರವಾಗಿ ಭವಿಷ್ಯ ನುಡಿದಿದ್ದ. ಆ ಗ್ರಂಥವೆ ನಮ್ಮ ಮಾಹಿತಿಮೂಲ.'

ಇದನ್ನು ಕೇಳಿ ಥಟ್ಟನೆ ನನಗನಿಸಿತು - ಈ ಗ್ರಾಮೀಣದಲ್ಲಿ ಅತ್ಯಾಧುನಿಕ ವಿಜ್ಞಾನಿಗಿಂತ ಪುರಾತನ ಕಾಲಜ್ಞಾನಿಗೆಯೆ ಹೆಚ್ಚು ಮಾನ್ಯತೆ, ಆತನ ಶಕ್ತಿಯ ಬಗ್ಗೆಯೆ ಹೆಚ್ಚು ವಿಶ್ವಾಸ, ಇಂಥ ಗ್ರಾಮಜಗತ್ತು ನಮ್ಮ ಆಧುನಿಕ ಜಗತ್ತಿನ ಜೊತೆಗೆಯೆ ಇರುವಂಥದು; ಹಾಗಿದ್ದೂ ತನ್ನತನವನ್ನು ಉಳಿಸಿಕೊಂಡಿರುವಂಥದು. ಅದು ಸಾಧಿಸಿಕೊಂಡಿರುವ ಇಂಥ ಸಹಬಾಳ್ವೆಯ ರೀತಿಯನ್ನು ನೋಡುತ್ತ ನನಗೆ ಮತ್ತೂ



ಅನಿಸಿತು: ಭವಿಷ್ಯಜ್ಞಾನ ವಿಜ್ಞಾನಿ-ತಂತ್ರಜ್ಞಾನಿಗಳ ಏಕಸ್ವಾಮ್ಯದ ಸಂಗತಿಯೇನಲ್ಲ; ಅವರಿಗಿಂತ ಭಿನ್ನವಾಗಿ, ಅವರಷ್ಟೆ ಆಳವಾಗಿ, ಆದರೆ ಕಥೆಗಾರರೂ ಸಾಧುಸಂತರೂ ಹಳ್ಳಿಯ ಹಿರಿಯರೂ ಅದನ್ನು ಕಾಣಬಲ್ಲರು.

ನಾನು ಇಂಥ ಮೂರು ಕಥೆಗಳೊಂದಿಗೆ ಪ್ರಾರಂಭಿಸಿದ್ದರ ಉದ್ದೇಶವಿಷ್ಟೆ: ಭವಿಷ್ಯವೆನ್ನುವುದು ಅವರವರ ಭಾವಭವಗಳಾಗಿ ಅರಳಬೇಕಾಗಿರುವಾಗ ಮತ್ತು ಹಾಗೆಯೇ ಉಳಿಯಬೇಕಾಗಿರುವಾಗ, ಅದು ಇಂದು ಕೆಲವು ಪಟ್ಟಭದ್ರ ಹಿತಾಶಕ್ತಿಗಳ ಸ್ವತ್ತಾಗಿಯಷ್ಟೆ ಬೆಳಯುವ ಅಪಾಯಕಾರಿ ಸನ್ನಿವೇಶ ಗೋಚರಿಸುತ್ತಿದೆ. ನಮ್ಮ ನಮ್ಮ ಇಷ್ಟಾನಿಷ್ಟಗಳನ್ನು ಆಧರಿಸಿ ರೂಪುತಳೆಯಬೇಕಾದ ಭವಿಷ್ಯ ಇಂದು ನಮಗೆ ಇಷ್ಟವಿರಲಿ ಬಿಡಲಿ ನಿಸ್ಸಹಾಯಕರಾಗಿ ಒಪ್ಪಿಕೊಳ್ಳಬೇಕಾದಂತಹ ವಿಧಿಬರೆಹದ ರೂಪು ತಾಳುತ್ತಿದೆ. ಹೀಗೆ 'ವೈಜ್ಞಾನಿಕ ವಿಧಿ'ಯ ಕಪಿಮುಷ್ಟಿಯಲ್ಲಿ ಸಿಲುಕಿಕೊಂಡಿರುವ ನಮ್ಮ ಭವಿಷ್ಯಗಳನ್ನು ನಾವಿಂದು ಮರಳಿ ನಮ್ಮ ನಮ್ಮ ಕೈಗಳಿಗೆ ತಂದುಕೊಳ್ಳಬೇಕಾಗಿದೆ. ಖ್ಯಾತ ಮಾನವ ಶಾಸ್ತ್ರಜ್ಞೆ ಮಾರ್ಗರೆಟ್ ಮೀಡ್ ಒಮ್ಮೆ ಹೇಳಿದ್ದುಂಟು: 'ನಾವು ಇತಿಹಾಸವನ್ನು ಕಲಿಸುವುದನ್ನು ನಿಲ್ಲಿಸಿ ಭವಿಷ್ಯವನ್ನು ಕಲಿಸಬಾರಂಬಿಸಬೇಕು; ಭವಿಷ್ಯ ಅಧ್ಯಯನವನ್ನು ಶಾಲಾ-ಕಾಲೇಜುಗಳಲ್ಲಿ ತರಬೇಕು. ಅದು ಕಥೆಗಾರಿಕೆಯ ಹೊಚ್ಚಹೊಸ ಮಾದರಿಯೊಂದನ್ನು ನೀಡುವುದು ಮಾತ್ರವಲ್ಲದೆ ನಮ್ಮ ಕಲ್ಪನಾಪ್ರತಿಭೆಗೂ ಹೊಸತೊಂದು ಹರಹನ್ನು ತಂದುಕೊಡುವುದು.' ಈ ಮಾತು ಬಹಳ ನಿಜ. ಮಾನವ ಸಮುದಾಯದ ಕಲ್ಪನಾಪ್ರತಿಭೆ ಸಾಹಿತ್ಯಕ-ವೈಜ್ಞಾನಿಕ-ಸಮಾಜಶಾಸ್ತ್ರೀಯಗಳೆಂಬ ಖಂಡಗಳಾಗಿ ಒಡೆದುಹೋಗಿರುವುದು ಇಪ್ಪತ್ತನೆಯ ಶತಮಾನತ ಅತಿದೊಡ್ಡ ದುರಂತಗಳಲ್ಲೊಂದಾಗಿದೆ. ಈ ಬಿರುಕನ್ನು ತುಂಬದಿದ್ದಲ್ಲಿ ನಮ್ಮ ಭವಿಷ್ಯ ಭಯಕಾರಕವಾಗಿಯೆ ಉಳಿಯುವುದು ನಿಶ್ಚಿತ.

ಮೇಲೆ ಪ್ರಸ್ತಾಪಿಸಿದ ಅಂಶ ಇಡಿಯ ಜಗತ್ತಿಗೆ ಅನ್ವಯವಾಗುವುದಾದರೆ, ಅದು ಭಾರತದ ಸಂದರ್ಭದಲ್ಲಿ ಇನ್ನೊಂದು, ವಿಶಿಷ್ಟವಾದ ರೂಪವನ್ನು ತಳೆಯುತ್ತದೆ. ನಾವು ಭಾರತೀಯರ ದುರಂತದೋಷವೆಂದರೆ, ನಾವು ನಮ್ಮನ್ನು ನಾಗರಿಕತೆಯೆಂದೆ ಹೆಚ್ಚಾಗಿ ಪರಗಣಿಸಿಕೊಳ್ಳುತ್ತ, ಸಮುದಾಯ ಕಲ್ಪನೆ ಎಷ್ಟೆ ಘನವಾದುದಾದರೂ ಕೆಲವು ಸ್ತರಗಳಲ್ಲಿ ಅದು ಸಮುದಾಯದ ಜೀವಂತಿಕೆಯನ್ನು ಸರಿಗಟ್ಟಲಾರದು. ಇದಕ್ಕೊಂದು ಸಣ್ಣ ನಿದರ್ಶನವನ್ನು ನೋಡಬಹುದು: ಕೆಲವು ದಶಕಗಳ ಹಿಂದೆ ಆಸ್ಟ್ರೀಯಾ ದೇಶದಲ್ಲಿ ಅಣುಶಕ್ತಿಯ ಪರ ಪಾಗೂ ವಿರೋಧವಾಗಿ ದೊಡ್ಡ ವಾಗ್ವಾದವೊಂದು ಪ್ರಾರಂಭ ವಾಯಿತು. ಆ ಸಮಯದಲ್ಲಿ ಯಾರೋ ಒಬ್ಬರು ನೀಡಿದ ಸಲಹೆಯ ಮೇರೆಗೆ ಅಲ್ಲಿಯ ಅಧಿಕಾರಿಗಳು ಹೊಸದೊಂದು ಪ್ರಯೋಗವನ್ನು ನಡೆಸಿದರು. ಆ ಪುಟ್ಟ ದೇಶದ ಒಟ್ಟೂ

ಜನತೆ ಸಣ್ಣಸಣ್ಣ ಸ್ಥಳೀಕ ಸಮುದಾಯಗಳ ಸ್ತರದಲ್ಲಿ ಕೂಡಿ ಕುಳಿತು, ಪ್ರತಿಯೊಬ್ಬರೂ ತಮ್ಮತಮ್ಮ ಬಯಕೆಯ ಭವಿಷ್ಯದ ಬಗೆಗೆ ಕಥೆಗಳನ್ನು ಕಟ್ಟಿ, ಅವುಗಳನ್ನು ಪರಸ್ಪರ ಹೇಳಿಕೊಳ್ಳುವುದೆ ಆ ಪ್ರಯೋಗದ ಮುಖ್ಯಭಾಗವಾಗಿತ್ತು. ಇಂಥ ಪುಟ್ಟ ಪುಟ್ಟ ವ್ಯಷ್ಟಿ ಕಥನಗಳು ಲಕ್ಷಗಟ್ಟಲೆ ಸೇರಿ ಸೃಷ್ಟಿಯಾದ ಸಮಷ್ಟಿ ಕಥನ ಕೊನೆಗೆ ದೇಶದ ಆಳರಸರನ್ನೆ ಅವಾಕ್ಕಾಗಿಸುವಂತಿತ್ತು. ಅಲ್ಲಿಯ ಒಟ್ಟೂ ರಾಷ್ಟ್ರಸಮುದಾಯದ ಭವಿಷ್ಯ ಕಥನದಲ್ಲಿ ಅಣುಶಕ್ತಿಗೆ ಅಲ್ಪವೂ ಜಾಗವಿರಲಿಲ್ಲ; ಆ ಪ್ರಕ್ರಿಯೆಯಲ್ಲಿ ಕಲೆ-ವಿಜ್ಞಾನ-ರಾಜಕಾರಣಗಳ ನಡುವೆ ಯಾವುದೆ ಕೃತಕ ಕಂದರವಿರಲಿಲ್ಲ. ಇದರ ಅಂತಿಮ ಪರಿಣಾಮವೆಂಬಂತೆ, ಯಾವುದೆ ರೂಪದ ಅಣುಶಕ್ತಿಯನ್ನು ಸಂಪೂರ್ಣವಾಗಿ ನಿಷೇಧಿಸಿದ ಮೊತ್ತಮೊದಲ ದೇಶಗಳಲ್ಲಿ ಆಸ್ಟ್ರಿಯಾ ಒಂದಾಯಿತು.

ಸಮುದಾಯ ಕಥನಗಳ ಕಥೆ ಇಲ್ಲಿಗೆಯೆ ನಿಲ್ಲುವಂಥದಲ್ಲ. ಇಂದು ಭೂಗೋಳದ ಮೂಲೆಮೂಲೆಯನ್ನೂ ಹೋಗುತ್ತಿರುವ ಜಾಗತೀಕರಣದ ಪ್ರಕ್ರಿಯೆಯ ವಿರುದ್ಧವಾಗಿ ಅಲ್ಲಲ್ಲಿ ಅನೇಕಾನೇಕ ಪುಟ್ಟ ಸಮುದಾಯಗಳು ತಮ್ಮದೇ ರೀತಿಯ ಹೋರಾಟವನ್ನು ನಡೆಸುತ್ತಿವೆ; ತಮ್ಮ ಜೀವನಕ್ರಮ-ಜೀವನೋಪಾಯ-ಜೀವನದರ್ಶನಗಳನ್ನು ಉಳಿಸುಕೊಳ್ಳಲು ಸೆಣಸುತ್ತಿವೆ. ಈ ಪ್ರತಿರೋಧದಲ್ಲಿ ಒಂದಿಷ್ಟು ನಿಸ್ಸಹಾಯಕತೆಯೂ ಒಂದಿಷ್ಟು ಸಿನಿಕತೆಯೂ ಒಂದಿಷ್ಟು ಹತಮಾರಿತನವೂ ಇರುವುದು ನಿಜ. ಆದರೆ ಇವನ್ನೆಲ್ಲ ಮೀರಿದ ಆಶಾದಾಯಕ ಶಕ್ತಿಯೂ ಅದರಲ್ಲಿದೆ. ಅದು ಸ್ವಾತಂತ್ರ್ಯದ, ಸ್ವಯಂನಿರ್ಣಯದ ಹಾಗೆಯೆ ಸ್ವಗೌರವದ ಶಕ್ತಿ. ರಾಷ್ಟ್ರ ಪ್ರಭುತ್ವಗಳು ತಮ್ಮ ಪ್ರಜೆಗಳನ್ನು ಪಾಲಿಸುವುದನ್ನು ಬಿಟ್ಟು ಅಂತಾರಾಷ್ಟ್ರೀಯ ವಾಣಿಜ್ಯ ಪ್ರಭುಗಳನ್ನು ಲಾಲಿಸುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ, ಜಗತ್ತಿನ ಸಮುದಾಯಗಳು ಹೀಗೆ ತಮ್ಮ ತಮ್ಮ ಸ್ವಂತಿಕೆಯನ್ನು ಸಂರಕ್ಷಿಸಿಕೊಳ್ಳುವುದು ಪ್ರಜಾಪ್ರಭುತ್ವವನ್ನು ಕಾಪಾಡಿಕೊಳ್ಳುವ ಕ್ರಮವೂ ಆಗುತ್ತದೆ; ಅದು ಅಂತಹ ಏಕೈಕ ಕ್ರಮವೂ ಹೌದು.

ಪ್ರಜಾಪ್ರಭುತ್ವದ ತತ್ವವೂ ಅಂದು ಬಹುಕಠಿಣ ಸವಾಲುಗಳನ್ನು ಎದುರಿಸುತ್ತಿದೆ. ಆ ವ್ಯವಸ್ಥೆ ಒಮ್ಮೆ ಕಂಡ ಕನಸುಗಳು ಹಲವಾರು ಇಂದು ಬರಿಯೆ ಹಳವಂಡಗಳಾಗಿದ್ದು, ಸರ್ಕಾರಿಯಂತ್ರಗಳೇ ಪ್ರಜಾಪೀಡಕವಾಗಿ ಬೆಳೆದುನಿಂತಿವೆ. ಜನಸಾಮಾನ್ಯರ ಭವಿಷ್ಯವನ್ನು ನಿರ್ಧರಿಸುವುದನ್ನು ತಮ್ಮ ಹಕ್ಕಾಗಿ ಮಾರ್ಪಡಿಸಿಕೊಂಡಿರುವ ರಾಷ್ಟ್ರಾಧಿಕಾರ ವ್ಯವಸ್ಥೆಗಳು ತಮ್ಮದೆ ಪ್ರಜೆಗಳ ಮೂಲಭೂತ ಹಕ್ಕುಗಳನ್ನೂ ಕಿತ್ತುಕೊಳ್ಳುತ್ತಿವೆ. ಇವತ್ತು ನಮ್ಮ ಭವಿತವ್ಯದ ನಕಾಶೆ ತಯಾರಾಗುವುದು ನಮ್ಮ ಹಳ್ಳಿ-ಪಟ್ಟಣ-ನಗರಗಳಲ್ಲಲ್ಲ, ರಾಜಧಾನಿ ದಿಲ್ಲಿಯಲ್ಲಿಯೂ ಅಲ್ಲ; ಬದಲಿಗೆ ಭೂಗೋಳದ ಇನ್ನೊಂದು ಬದಿಯಲ್ಲಿ, ಅಮೆರಿಕೆಯ ವಾಣಿಜ್ಯಸಂಸ್ಥೆಗಳ



ಕಚೇರಿಗಳಲ್ಲಿ; ನಾವು ಆರಿಸಿದ ನಮ್ಮ ನಾಯಕರ ಸಮ್ಮತಿಯೊಂದಿಗೆ, ಇಲ್ಲ ನಿಷ್ಕ್ರಿಯ ಜಡಮತಿಯೊಂದಿಗೆ. ಪ್ರಜಾಪ್ರಭುತ್ವವೆನ್ನುವುದು ಕೇವಲ ಮತಚಲಾವಣೆಗೆ ಸೀಮಿತವಾದುದಲ್ಲ, ಚುನಾವಣೆಗಳ ಶಾಸ್ತ್ರಕ್ಕಷ್ಟೆ ಸಂಬಂಧಿಸಿದ್ದುದಲ್ಲ ಎನ್ನುವುದನ್ನು ನಾವು ಅರಿಯಬೇಕಾಗಿದೆ. ಪ್ರಜಾತಂತ್ರ ವ್ಯವಸ್ಥೆ ಪ್ರಜೆಗಳ ಕಲ್ಪನಾಶೀಲತೆಯಿಂದಲೆ ಸೃಷ್ಟಿಯಾಗುವಂಥದು, ರೂಪು ತಳೆಯುವಂಥದು. ಅದು ಜೀವಂತವಾಗಿ ಉಳಿಯಬೇಕಾದಲ್ಲಿ ತನ್ನನ್ನೆ ತಾನು ಮತ್ತೆಮತ್ತೆ ಸೃಜಿಸಿಕೊಳ್ಳುತ್ತಿರಬೇಕು. ಮೋಹನದಾಸ ಕರಮಚಂದ ಗಾಂಧಿ'ತನ್ನನ್ನು ಪದೇಪದೆ ಪುನರ್‌ಕಲ್ಪಿಸಿಕೊಳ್ಳುತ್ತಿರುವವನೆ ನಿಜವಾದ ನಾಗರಿಕ, ನಿಜವಾದ ಪ್ರಜೆ' ಎಂದು ನುಡಿದಾಗ ಅವರು ಪ್ರಜಾಪ್ರಭುತ್ವದ ವ್ಯಾಖ್ಯಾನವನ್ನೂ ನೀಡಿದರು. ಹಾಗಾಗಿ, ನಾವು ನಮ್ಮನ್ನು ಶ್ರೇಷ್ಠ ನಾಗರಿಕತೆಯೆಂದೂ ಶಕ್ತಿಶಾಲಿಯಾಗಿ ಬೆಳೆಯುತ್ತಿರುವ ಆಧುನಿಕ ರಾಷ್ಟ್ರಪ್ರಭುತ್ವವೆಂದೂ ಅಹಮಿಕೆಯಲ್ಲಿ ಪರಿಗಣಿಸಿಕೊಳ್ಳುವುದರಲ್ಲಿ ಹೆಚ್ಚೇನೂ ಅರ್ಥವಿಲ್ಲ (ಇವೆರಡೂ ನಂಬಿಕೆಗಳು ಅಂತಿಮವಾಗಿ ಮಧ್ಯಮ ವರ್ಗದ ಪ್ರಿಯ ಭ್ರಮಾ ಪರಿಕಲ್ಪನೆಗಳು) ನಾವಿಂದು ನಮ್ಮನ್ನು ಸಮುದಾಯಗಳಾಗಿ ಪುನರ್‌ಸೃಷ್ಟಿಸಿಕೊಳ್ಳಬೇಕಾಗಿದೆ.

ಇಂಥ ನಿತ್ಯನವೀಕರಣದ ಬಹುಮುಖ್ಯ ಭಾಗಗಳಲ್ಲೊಂದೆಂದರೆ ನಾವು ನಮ್ಮ ಭವಿಷ್ಯವನ್ನು ಪ್ರತಿದಿನ ಹೊಸದಾಗಿ ಕಲ್ಪಿಸಿಕೊಳ್ಳುತ್ತಲೂ ಕಥಿಸಿಕೊಳ್ಳುತ್ತಲೂ ನಡೆಯುವುದು; ಅದನ್ನು ಪರರ ವಶವಾಗಲು ಬಿಡದೆ, ಅದನ್ನು ಸ್ವಂತದ, ಸ್ವಂತಿಕೆಯ ಸೀಮೆಯಾಗಿ ಬೆಳೆಸುವುದು; ಭವಿಷ್ಯದ ಈ ಕಲ್ಪನಾಕಥನ ಸಂಕಥನವಾಗಿಯೂ ಪರಿಕಲ್ಪನಾಕಥನವಾಗಿಯೂ ಪುಷ್ಟಿಗೊಳ್ಳುವಂತೆ ಅದನ್ನು ಪಾಲಿಸುವುದು. ಭವಿಷ್ಯದ ಇಂಥ ಪರಿಕಥನ ಭಿನ್ನಭಿನ್ನ ಜ್ಞಾನಶಾಖೆಗಳನ್ನು ಬೆಸೆಯುವಂಥದಾಗಿರಬೇಕು, ವಿಭಿನ್ನ ಭಾಷೆಗಳನ್ನು ಬಳಸುವಂಥಾದಾಗಿರಬೇಕು. ಜೊತೆಗೆ ಅದು ಒಂದಿಷ್ಟು ದಿವ್ಯವಿವೇಕವುಳ್ಳದ್ದೂ ಒಂದಿಷ್ಟು ವಕ್ರಚೇಷ್ಟೆಯುಳ್ಳದ್ದೂ ಆಗಿರಬೇಕು. ಅಲ್ಲಿ ಕಡು ಶೀಲಕ್ಕೆಷ್ಟೋ ಕ್ರೀಡಾಶೀಲತೆಗೂ ಅಷ್ಟೇ ಬೆಲೆಯಿರಬೇಕು. ಇದೆಲ್ಲದರ ಅರ್ಥ - ನಮ್ಮ ಭವಿಷ್ಯ ಏಕಮುಖಿ ಏಕಕಾರಿ ಏಕೈಕ 'ಭವಿಷ್ಯ'ವಾಗಿರದೆ ಬಹುಮುಖಿ ಬಹುರೂಪಿ 'ಭವಿಷ್ಯಗಳು' ಆಗಿರಬೇಕು.

ಕಥೆಗಳು ಭೂತ-ವರ್ತಮಾನಗಳನ್ನು ಪ್ರತಿಬಿಂಬಿಸುವುದಷ್ಟೆ ಅಲ್ಲದೆ ಹೀಗೆ ಭವಿಷ್ಯವನ್ನು ಪ್ರಭಾವಿಸಲೂ ಬಲ್ಲವು ಎನ್ನುವುದಕ್ಕೆ ಕಥಾ ಜಗತ್ತಿದೆ ಒಂದು ಉದಾಹರಣೆಯನ್ನು ನೋಡಬಹುದು. ವಿಜ್ಞಾನ ಕಥೆಗಳ ಬೇಖಕ ರೈ ಬ್ರಾಡ್ ಬರಿಯವರ ಖ್ಯಾತ ಕೃತಿ 'ಫ್ಯಾರನ್‌ಹೀಟ್ ೪೫೧' ನಲ್ಲಿ, ಸಮಾಜವೊಂದರಲ್ಲಿ ಸರ್ಕಾರ

ಪುಸ್ತಕಗಳ ಮೇಲೆ ನಿಷೇಧ ಹೇರಿರುತ್ತದೆ. ಎಲ್ಲೇ ಯಾವುದೇ ಪುಸ್ತಕ ಕಂಡುಬಂದಲ್ಲಿ ಅಧಿಕಾರಿಗಳು ಅದನ್ನು ಸುಟ್ಟು ಬೂದಿ ಮಾಡುತ್ತಿರುತ್ತಾರೆ. ಇಂಥ ಸರ್ವಾಧಿಕಾರಿ ಕ್ರಮವನ್ನು ನಿಷ್ಫಲಗೊಳಿಸಲು ಜನ ವಿಶಿಷ್ಟ ತಂತ್ರವೊಂದನ್ನು ಬಳಸತೊಡಗುತ್ತಾನೆ, ಅಂದರೆ, ಆ ಇಡೀ ಪುಸ್ತಕವನ್ನು ತನ್ನ ಸ್ಮೃತಿಯಲ್ಲಿಟ್ಟುಕೊಂಡು ತಾನೆ ಆ ಪುಸ್ತಕವಾಗುತ್ತಾನೆ. ಒಬ್ಬ 'ಮಹಾಭಾರತ' ವಾದರೆ ಇನ್ನೊಬ್ಬ 'ರಾಮಾಯಣ', ಮತ್ತೊಬ್ಬ 'ಮ್ಯಾಕ್‌ಬೆತ್', ಮಗದೊಬ್ಬ 'ಸಂಸ್ಕಾರ' - ಹೀಗೆ ಅವರು ಬೇರೆ ಬೇರೆ ಕೃತಿಗಳನ್ನು ತಮ್ಮ ತಮ್ಮೊಳಗೆ ಹುದುಗಿಸಿಟ್ಟುಕೊಳ್ಳುತ್ತಾರೆ. ಆ ಉಪಾಯ ಕೊನೆಗೆ, ಜೀವನವನ್ನು ಸಂರಕ್ಷಿಸಿಟ್ಟುಕೊಳ್ಳುವುದಷ್ಟೆ ಅಲ್ಲದೆ ಜೀವನದ ಸಾತತ್ಯವನ್ನು ಸೃಷ್ಟಿಕೊಳ್ಳುವ ಹಾಗೂ ಕಾಪಾಡಿಕೊಳ್ಳುವ ಉಪಾಯವೂ ಆಗಿ ಬೆಳೆಯುತ್ತದೆ.

ಪುಸ್ತಕ ಸನ್ನಿವೇಶದಲ್ಲಿ ಮೇಲೆ ಪ್ರಸ್ತಾಪಿಸಿದ ಜೀವರಕ್ಷಕ ತಂತ್ರದ ಪ್ರಸ್ತುತತೆ ಎಷ್ಟೆಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ಇಂದಿನ ಜಾಗತಿಕ ವಿದ್ಯಮಾನಗಳು ಎಷ್ಟು ಜೀವಮಾರಕವಾಗಿವೆ ಎನ್ನುವುದು ಎಲ್ಲರಿಗೂ ತಿಳಿದಿರುವ ಸಂಗತಿಯೆ. ಆಧುನಿಕ ಯುಗದಲ್ಲಿ ಪ್ರಕೃತಿ ಹಾಗೂ ಸಂಸ್ಕೃತಿಗಳೆರಡೂ ದಿಗಿಲು ಹುಟ್ಟಿಸುವಂತಹ ತ್ವರಿತಗತಿಯಲ್ಲಿ ನಾಶಹೊಂದಿತ್ತಿವೆ. ಇಲ್ಲಿ ಪ್ರತಿ ಗಂಟೆಗೆ ಒಂದು ಜೀವಪ್ರಭೇದ, ಪ್ರತಿ ಹದಿನೈದು ದಿನಗಳಿಗೆ ಒಂದು ಭಾಷೆ ಕಣ್ಮರೆಯಾಗುತ್ತಲಿವೆ. ಈ ವಿನಾಶ ಪ್ರಕ್ರಿಯೆ ಕೊನೆಗೆ ನಮ್ಮನ್ನೂ ನುಂಗಿನೊಣೆಯುವಂತಹ ವಿಲಕ್ಷಣ ಸಂದಿಗ್ಧವೊಂದನ್ನು ನಾವೇ ಸೃಷ್ಟಿಸಿಕೊಂಡಿದ್ದೇವೆ.

ಇಂಥ ಪರಿಸ್ಥಿತಿಯಲ್ಲಿ, ನಾವು ಭೂತದ ಕಾವಲುಗಾರರಾಗುವ ಮೂಲಕ ಮಾತ್ರವೆ ಭವಿಷ್ಯದ ವಾರಸುದಾರರಾಗಬಲ್ಲೆವು. ಮನುಕುಲದಷ್ಟೆ ಅಲ್ಲ, ಒಟ್ಟೂ ಜಾವಸಂಕುಲದ ಭೂತ-ಭವಿಷ್ಯಗಳ ಬಗ್ಗೆಯೂ ನಾವಿಂದು ಹೊಣೆಯನ್ನು ಹೊರಬೇಕಾಗಿದೆ; ನಾಶಕ್ಕೀಡಾಗಿರುವ ಹಾಗೂ ನಾಶದ ಅಂಚಿನಲ್ಲಿರುವ ಜೀವರೂಪಗಳನ್ನೂ ಜೀವನಕ್ರಮಗಳನ್ನೂ ಪುನರುಜ್ಜೀವನಗೊಳಿಸಿ, ಹೊಸ ಭವಿಷ್ಯ ಸಂಸ್ಥೆಗಳನ್ನು ಕಟ್ಟಬೇಕಾಗಿದೆ. ನನ್ನ ಸ್ನೇಹಿತರಾದ ಡೆನ್‌ಮಾರ್ಕಿನ ಮಾನವಶಾಸ್ತ್ರಜ್ಞರೋರ್ವರು ನನಗೊಮ್ಮೆ ಹೇಳಿದರುಃ 'ನೋಡಿ, ಇಂದು ಜಾಗತಿಕ ಯುದ್ಧವೇನಾದರೂ ನಡೆದಲ್ಲಿ ಜಗತ್ತು ಅಪಾರ ಭೌತಿಕ ನಷ್ಟವನ್ನೂ ಅಗಾಧ ಸ್ಮೃತಿನಾಶವನ್ನೂ ಅನುಭವಿಸುವುದು ನಿಶ್ಚಿತ. ಅಂಥದೊಂದು ಅಣ್ವಸ್ತ್ರ ಪ್ರಳಯ ಘಟಿಸಿದ ಮೇಲೆ, ಹಿಂದೊಮ್ಮೆ ಕುಶಲಕರ್ಮಿಗಳು ಯಾವ ರೀತಿ ಉತ್ಪಾದನೆ ಮಾಡುತ್ತಿದ್ದರು, ಕಥೆಗಾರರು ಯಾವ ರೀತಿ ಕಥಿಸುತ್ತಿದ್ದರೂ ಹಾಡುತ್ತಿದ್ದರು ಎನ್ನುವುದನ್ನು ಜಗತ್ತಿಗೆಲ್ಲ ನೆನಪಿಸಿಕೊಡಲೂ ಮತ್ತೆ ಕಲಿಸಿಕೊಡಲೂ ನಿಮ್ಮ ಭಾರತಕ್ಕೆ ಮಾತ್ರ ಸಾಧ್ಯ. ನಿಮ್ಮಲ್ಲಿ ಅಷ್ಟೊಂದು



ವೈವಿಧ್ಯವಿದೆ; ಒಂದು ವಿಧ ನಾಶವಾಗಿಹೋದರೂ ಅದನ್ನು ತುಂಬಿಕೊಡಬಲ್ಲ ನೆನಪಿಗೆ ತಂದುಕೊಡಬಲ್ಲ ಇನ್ನೂ ಹತ್ತು ವಿಧಗಳಿವೆ.

ನಿಜ. ನಮ್ಮ ದೇಶದ ವೈವಿಧ್ಯಪೂರ್ಣತೆಯೇ ನಮ್ಮ ಬಹುದೊಡ್ಡ ಶಕ್ತಿಯಾಗಿದೆ. ಅದೆ ನಮ್ಮ ಸಂಸ್ಕೃತಿಯ ಪ್ರಕೃತಿಯೂ ಆಗಿದೆ. ಒಂದೇ ಒಂದು ದೈನಂದಿನ ನಿದರ್ಶನವನ್ನು ನೀಡುವುದಾದರೆ – ನಮ್ಮದು ೪೦,೦೦೦ ಭಿನ್ನ ಭಿನ್ನ ಭತ್ತದ ತಳಿಗಳ ನಾಡು. ನಲವತ್ತು ಸಾವಿರ ತಳಿಗಳೆಂದರೆ ನಲವತ್ತು ಸಾವಿರ ವಿಭಿನ್ನ ಅಡಿಗೆ ಕ್ರಮಗಳು, ನಲವತ್ತು ಸಾವಿರ ಅಡಿಗೆ ಕ್ರಮಗಳೆಂದರೆ ನಲವತ್ತು ಸಾವಿರ ಬೇರೆಬೇರೆ ಊಟದ ವಿಧಾನಗಳು.... ವಿಶಿಷ್ಟ ಕೃಷಿ ಪದ್ಧತಿಗಳು. ರುಚಿ-ಅಭಿರುಚಿಗಳು ಜೀವಿಸುವ ಕ್ರಮಗಳು... ಕನಸುವ ವಿಧಗಳು. ಇಂದು ಕೇಲವು ಏಕಾಧಿಪತ್ಯಪ್ರಿಯ ಶಕ್ತಿಗಳು ಇಡಿಯ ಜಗತ್ತನ್ನು ಏಕಕಾಲಕ್ಕೆ ಏಕರುಚಿಗೆ ಭಟ್ಟಿಯಿಳಿಸಹೋರಟಿರುವಾಗ ನಾವು ನಮ್ಮ ೪೦,೦೦೦ ಭತ್ತದ ತಳಿಗಳನ್ನೂ ಅವುಗಳೆಂದಿಗೆ ಬೆಸೆದ ನಲವತ್ತು ಸಾವಿರ ವಿಧಗಳ ಕನಸು-ಮನಸುಗಳನ್ನೂ ಉಳಿಸಿಕೊಳ್ಳುವುದು ಹೇಗೆ? ಹಾಗೆ ಉಳಿಸಿಕೊಳ್ಳಲೆಬೇಕೆ?

ಇದೆ ಇಂದು ನಮ್ಮ ಮುಂದಿರುವ ಸವಾಲು. ಏಕೆಂದರೆ ಭತ್ತವೆಂದರೆ ಬರಿಯೆ ಭತ್ತವಲ್ಲ, ತಳಿಯೆಂದರೆ ಬರಿಯೆ ತಳಿಯಲ್ಲ; ಅದನ್ನು ಬೆಳೆಯುವ ರೈತನೆಂದರೆ ಬರಿಯೆ ರೈತನಲ್ಲ. ಬದಲಾಗಿ, ಒಂದೊಂದು ತಳಿಯೂ ಒಂದೊಂದು ಕಥೆ, ಪ್ರತಿಯೊಬ್ಬ ರೈತನೂ ವಿಶಿಷ್ಟ ಕಥೆಗಾರ. ಈ ದೃಷ್ಟಿಯಲ್ಲಿ ನೋಡಿದಾಗ, ಪ್ರತಿಯೊಂದು ಕೃಷಿ ಪದ್ಧತಿಯೂ ಒಂದು ತತ್ವಶಾಸ್ತ್ರವಾಗಿರುತ್ತದೆ, ಅನನ್ಯವಾದುದೊಂದು ಸ್ಮೃತಿಕೋಶವೂ ಚಿಂತಾಕ್ರಮವೂ ಆಗಿರುತ್ತದೆ. ಹಾಗಾಗಿ, ಭತ್ತದ ತಳಿಯೊಂದನ್ನು ಉಳಿಸಿಕೊಳ್ಳುವುದೆಂದರೆ ನಮ್ಮ ನೆನಪುಗಳಲ್ಲೊ ಸಾಹಿತ್ಯಕೃತಿಗಳಲ್ಲೊ ಉಳಿಸಿಕೊಳ್ಳುವುದು ಮಾತ್ರವಲ್ಲದೆ, ಅದನ್ನು ಸರ್ವಾಂಗಸಂಪೂರ್ಣ ಜೀವನಶೈಲಿಯಾಗಿಯೂ ಕಾಪಾಡಿಕೊಳ್ಳಬೇಕಾಗುತ್ತದೆ.

ಹೀಗೆ ನಮ್ಮ ಭವಿಷ್ಯವನ್ನು ನಮ್ಮದಾಗಿಯೆ ಉಳಿಸಿಕೊಳ್ಳುವಲ್ಲಿ ಭೂತ-ವರ್ತಮಾನಗಳ ಸಂರಕ್ಷಣೆ ಎಷ್ಟು ಮಹತ್ವದ್ದೋ ಹೊಸತರ ಸೃಷ್ಟಿಯೂ ಅಷ್ಟೆ ಮಹತ್ವದ್ದು. ಈ ಹೊಸತು ಒಂದೆಡೆ ನಾವೇ ಇಷ್ಟಪಟ್ಟು ಸೃಷ್ಟಿಸಿಕೊಂಡ ಶಕ್ತಿರೂಪಗಳಾಗಿರಬಹುದು, ಇನ್ನೊಂದೆಡೆ ನಮ್ಮ ಅಪೇಕ್ಷೆಯನ್ನು ಮೀರಿ ಮೂಡಿದ ಅನಿಷ್ಟಗಳನ್ನು ಸೂಕ್ತವಾಗಿ ಗ್ರಹಿಸುವ ಹಾಗೂ ಎದುರಿಸುವ ಪ್ರತಿಶಕ್ತಿರೂಪಗಳಾಗಬಹುದು. ನಮ್ಮ ಪ್ರಜಾಪ್ರಭುತ್ವ ಸತ್ವಯುತವಾಗಿ ಬೆಳಯಬೇಕೆಂದಲ್ಲಿನಾವು ಹೊಚ್ಚಹೊಸ ಜ್ಞಾನಗಳನ್ನೂ ಕಲ್ಪಕತೆಗಳನ್ನೂ ಕಂಡುಕೊಳ್ಳುತ್ತ ಸಾಗಬೇಕು

ಮಾತ್ರವಲ್ಲ, ಹೊಚ್ಚಹೊಸ ಭಾಷೆಗಳನ್ನೂ ಗ್ರಹಿಕೆಯ ಮಾಧ್ಯಮಗಳನ್ನೂ ಸೃಜಿಸಿಕೊಳ್ಳಬೇಕು. ಉದಾಹರಣೆಗೆ, ಇತ್ತೀಚೆಗೆ ಗುಜರಾತ್‌ನಲ್ಲಿ ನಡೆದ ಹಿಂಸಾಚಾರವನ್ನು ಪ್ರಸ್ತುತ ಲಭ್ಯವಿರುವ ಹಿಂಸೆಯ ಬಗೆಗಿನ ಯಾವ ಭಾಷೆಯನ್ನು ಬಳಸಿಯೂ ಗ್ರಹಿಸಲು ಸಾಧ್ಯವಿಲ್ಲ. ಪ್ರಚಲಿತ ನಾಜಿ, ಫ್ಯಾಸಿಸ್ಟ್ ಎಂಬಿತ್ಯಾದಿ ಪದಗಳಿಂದ ಅದನ್ನು ಅರ್ಥವಿಸಲು ಸಾಧ್ಯವಿಲ್ಲ. ಲ್ಲಿ ಪ್ರಜಾರಕ್ಷಣೆಯ ರಾಜಧರ್ಮವನ್ನು ಕೈಬಿಟ್ಟು ಕುಕೃತ್ಯಗಳಿಗೆ ಪ್ರೋತ್ಸಾಹ ನೀಡಿದ ನರೇಂದ್ರ ಮೋದಿಯಲ್ಲಿ ಹೊಸತೊಂದು ರೀತಿಯ ಖೂಳತನವಿತ್ತು. ಅಲ್ಲಿ ಅನ್ಯಧರ್ಮೀಯ ಹೆಂಗಸರ ಮೇಲೆ ಅತ್ಯಾಚಾರಗೈಯಲು ತಮ್ಮ ಗಂಡಸರನ್ನು ಉತ್ತೇಜಿಸಿದ ಹೆಂಗಸರಲ್ಲಿ ಬೇರೆಯೇ ರೀತಿಯದೊಂದು ಕೆಡುಕು ತುಂಬಿಕೊಂಡಿತ್ತು. ಅದು ೧೯೪೭-೪೮ರ ದೇಶವಿಭಜನೆಯ ಕಾಲದ ಗಲಭೆಗಿಂತಲೂ ೧೯೮೪ರ ದೆಹಲಿಯ ಸಿಖ್-ವಿರೋಧಿ ದಂಗೆಗಿಂತಲೂ ೧೯೯೨ರಮುಂಬಯಿ ಕೋಮುಘರ್ಷಣೆಗಿಂತಲೂ ತೀರಾ ಭಿನ್ನವಾದ ಹಿಂಸೆಯಾಗಿತ್ತು. ಕೆಡುಕಿನ ಈ ಹೊಸ ರೂಪ, ಖ್ಯಾತ ಚಿಂತಕಿ ಹ್ಯಾನಾ ಅರೆಂಡ್ ಹಿಂದೆಯೇ ಗುರುತಿಸಿದಂತೆ, ತೀರಾ ಕ್ಷುಲ್ಲಕವಾದದು, ಚಿಲ್ಲರೆ ಗುಮಾಸ್ತರ ಸ್ಥರದ್ದು, ಮತ್ತು ಆಕಾರಣದಿಂದಲೆ ನಮ್ಮ ಅರಿವಿಗೆ ಸಂಪೂರ್ಣ ನಿಲುಕದಿರುವಂಥದು. ಈ ಹೊಸ ಕೆಡುಕು, ಹೊಸ ಖೂಳತನ ಹಳೆಯ ಪರಿಭಾಷೆಗೆ ಗ್ರಾಹ್ಯವಾಗುವಂಥದಲ್ಲ. ಅದಕ್ಕಾಗಿ ನಾವು ಹೊಸತೊಂದು ಪರಿಭಾಷೆಯನ್ನೆ ಸೃಷ್ಟಿಸಿಕೊಳ್ಳಬೇಕಿದೆ. ನಮ್ಮ ಸಮುದಾಯ ಪ್ರತಿಭೆ ಇಂಥ ಸವಾಲೂಗಳನ್ನು ಸ್ವೀಕರಿಸದೆ, ಸದ್ಯದ ಸಮಾಜವಿಜ್ಞಾನಗಳ ಸಂಕುಚಿತವೂ ಅಪ್ರಸ್ತುತವೂ ಆದ ಪರಿಕಲ್ಪನೆಗಳನ್ನೆ ನೆಚ್ಚಕೂತಲ್ಲಿ ಅದಕ್ಕಿಂತ ಘೋರ ವಿಪತ್ತು ಮತ್ತೊಂದಿರಲಾರದು. ಈ ರೀತಿ ಭವಿಷ್ಯದ ಸವಾಲೆಂದರೆ ಹೊಸ ಭಾಷೆಗಳ ಸೃಷ್ಟಿಯ ಸವಾಲೂ ಹೌದು.

••• ••• •••

ಅದೆ ರೀತಿ, ಭವಿಷ್ಯವೆನ್ನುವುದು ಸಂವೈಧಾನಿಕವಾದೊಂದು ವಿದ್ಯಮಾನವೂ ಆಗಬೇಕು. ನಾವು ಮನುಷ್ಯರೆಲ್ಲರೂ, ನಮ್ಮ ನಮ್ಮ ಮಟ್ಟಿಗೆಯಾದರೂ, ಒಂದಲ್ಲ ಒಂದು ರೀತಿಯ ವಿಧಿ-ವಿಧಾನವನ್ನು ವ್ಯವಸ್ಥೆಯ ಚೌಕಟ್ಟನ್ನು ಕಟ್ಟಿಕೊಳ್ಳುವವರು. ಹಾಗೆಯೆ ನಾವು ರಾಷ್ಟ್ರಗಳಾಗಿ ಅನೇಕ ಆಧುನಿಕ ಸಂವಿಧಾನಗಳನ್ನೂ ರಚಿಸಿಕೊಂಡಿದ್ದೇವೆ. ಆದರೆ ಈಯೆಲ್ಲ ರಾಷ್ಟ್ರಸಂವಿಧಾನಗಳು 'ಆಧುನಿಕತೆ'.ನ್ನೆ ಮುಖ್ಯ ಆಧಾರವಾಗಿಟ್ಟು — ಕೊಂಡಿರುವುದರಿಂದ ಅವು 'ಆಧುನಿಕತೆ'ಯ ಸಮಸ್ಯಾತ್ಮಕತೆಯನ್ನೆ ಪ್ರತಿಫಲಿಸುತ್ತವೆ. ಉದಾಹರಣೆಗೆ, ಆಧುನಿಕತೆಯು 'ಕಾಲ'ವನ್ನು ಪರಿಕಲ್ಪಿಸಿಕೊಳ್ಳುವ ಪರಿ



ಏಕಮುಖಿಯೂ ಏಕರೂಪಿಯೂ ಆದುದು. ಇಂಥ ಸೀಮಿತ ಕಾಲ ಪರಿಕಲ್ಪನೆಯನ್ನು ಸಾರಾಸಗಟಾಗಿ ಆಮದು ಮಾಡಿಕೊಳ್ಳುವ ನಮ್ಮ ಆಧುನಿಕ ರಾಷ್ಟ್ರಸಂವಿಧಾನಗಳು ಅದನ್ನು ತಮ್ಮೊಳಗೆ ಏಕಮಾನಕದ ಪ್ರಜತ್ವವನ್ನಾಗಿ ಪರಿವರ್ತಿಸಿಕೊಳ್ಳುತ್ತವೆ; ಅರ್ಥಾತ್ ತಮ್ಮ ಪ್ರಜೆಗಳೆಲ್ಲರೂ ಒಂದೆ ಕಾಲಮಾನದ್ಲಿಲ ಬದುಕಬೇಕೆಂದು ಅಪೇಕ್ಷಿಸುತ್ತವೆ ಹಾಗೂ ಒತ್ತಾಯಿಸುತ್ತವೆ. ಇಂಥ ಕ್ರಮ, ತಿರುಗಿ, ಎಲ್ಲ ಮಾನವರ ಮೇಲೆ ಏಕರಾಪತೆಯನ್ನು ಹೇರುವ ಪ್ರಯತ್ನವಲ್ಲದೆ ಬೇರೆನೂ ಅಲ್ಲ. ಇದು ಆಧುನಿಕ ವಿಜ್ಞಾನದ ಆಧುನಿಕ ರಾಜಕೀಯ ರೂಪಿ ಅವತಾರವಲ್ಲದೆ ಮತ್ತೇನೂ ಅಲ್ಲ.

ಇದೆಲ್ಲದಕ್ಕೆ ವ್ಯತಿರಿಕ್ತವಾಗಿ, ನಮ್ಮ ಬಯಕೆಯ ಭವಿಷ್ಯ ಸಂವಿಧಾನ ಕಾಲದಭಿನ್ನ ಭಿನ್ನ ಪರಿಕಲ್ಪನೆಗಳನ್ನೆಲ್ಲ ತನ್ನಲ್ಲಿ ಅಂತರ್ಗತಗೊಳಿಸಿಕೊಂಡಿರಬೇಕು; ಏಕೆಂದರೆ ಇಂಥ ಕಾಲಭಿನ್ನತೆಗಳು ಮೂಲಭೂತವಾಗಿ ಜನಮನ ವೈವಿಧ್ಯತೆಯ ಪ್ರತೀಕಗಳಾಗಿರುವಂಥವು. ನಮ್ಮ ಕನಸಿನ ನವಸಂವಿಧಾನ ಸತ್ಯಖಾಗಿ ಸರ್ವಸಮಾನ ಸ್ವಾತಂತ್ರ್ಯದ ತತ್ವವನ್ನು ಆಚರಿಸುವುದಾದಲ್ಲಿ ಅದು ಇಂತಹಯದೆಲ್ಲ ವಿವಿಧ ಕಾಲಕಲ್ಪನೆಗಳನ್ನು ಸಮಾನವಾಗಿ ಆಧರಿಸಬೇಕು. ಅಲ್ಲಿ ಪುರಾತನ ಆಧಿವಾಸಿ ಕಾಲಕಲ್ಪನೆಯಿರಬೇಕು, ರೈತ ಕಾಲಕಲ್ಪನೆಯಿರಬೇಕು, ಬೇರೆ ಬೇರೆ ಸಂಗೀತಪ್ರಭೇದಗಳ ಬೇರೆಬೇರೆ ಕಾಲಪರಿಕಲ್ಪನೆಗಳಿರಬೇಕು... ಇವೆಲ್ಲವುಗಳ ನಡುವೆ ಆಧುನಿಕ ವಿಜ್ಞಾನದ ಕಾಲಕಲ್ಪನೆಯೂ ಇರಬೇಕು. ಕಾಲದ ಇಂಥ ಬಹುರೂಪಿ ಪರಿಕಲ್ಪನೆಗಳೆ ಮನುಕುಲದ ಬಹುರೂಪತೆಯನ್ನು ಕಾಪಾಡಬಲ್ಲವು.

ಇತ್ತೀಚೆಗೆ ಅಂತಾರಾಷ್ಟ್ರೀಯ ಸಮಾವೇಶವೊಂದರಲ್ಲಿ ನನ್ನ ಗೆಳೆಯನೊಬ್ಬ ರೋಮಾಂಚಕವಾದ ವಾದವೊಂದನ್ನು ಮಂಡಿಸಿದ. ಮಾನವ ಸ್ವಾತಂತ್ರ್ಯ ಮತ್ತು ಹಂಕ್ಕುಗಳ ಕುರಿತಾದ ಆ ಚರ್ಚೆಯಲ್ಲಿ ಆತ ಬದಲಿ ಬೆಳೆ ಪದ್ಧತಿಯನ್ನು ಅನುಸರಿಸುವ ರೈತರ ಹಕ್ಕನ್ನು ರಕ್ಷಿಸುವುದೂ ಅತಿಮುಖ್ಯ ಎಂದು ಘೋಷಿಸಿದ. ಆತ ಪೂರಕವಾಗಿ ನೀಡಿದ ಮಾಹಿತಿ ಅಚ್ಚರಿಗೊಳಿಸುವಂತಿತ್ತು: ಆಧುನಿಕ ಕೈಗಾರಿಕಾವಲಯ ಕೇವಲ ಎರಡು ಕಾಲ ಪ್ರಭೇದಗಳನ್ನು ಪರಿಗಣಿಸುತ್ತದೆ; ಅದೆ ಒಂದು ಕೃಷಿಕ್ಷೇತ್ರದಲ್ಲಿ ಬೆಳೆಗಳನ್ನು ಅದಲುಬದಲು ಮಾಡುತ್ತ ಹೋಗುವ ಪರ್ಯಾಯ ಕೃಷಿಪದ್ಧತಿ ಇಪ್ಪತ್ತೆರಡು ಬಗೆಯ ಕಾಲಮಾನಗಳನ್ನು ಹೊಂದಿದೆ. ಈ ಬಗೆಗಳು ಭಿನ್ನ ಭಿನ್ನ ಭೌಗೋಲಿಕ ಪರಿಸರಗಳನ್ನೂ ಋತುಪರಿವರ್ತನೆಯ ಗತಿಗಳನ್ನೂ ಬೇರೆ ಬೇರೆ ಬೆಳವಣಿಗೆಯ ಕ್ರಮಗಳನ್ನು ಲಕ್ಷಿಸಿ ರೂಪುಗೊಂಡಿರುವಂಥವು. ಇಂಥ ವೈವಿಧ್ಯಮಯ ಕಾಲಗಳನ್ನು ಅನುಸರಿಸುವ ಕೃಷಿಕರ ಹಕ್ಕುಗಳನ್ನೂ ಗೌರವಿಸುವುದು ಅವರ ಸ್ವಾತಂತ್ರ್ಯವನ್ನು ಉಳಿಸಿಕೊಡುವ ರಾಜಕೀಯಾತ್ಮಕ ಕ್ರಮವಾಗುತ್ತದೆಯಷ್ಟೆ ಅಲ್ಲದೆ,

ಆಧುನಿಕ ಔದ್ಯೋಗಿಕ ನಾಕರಿಕತೆಗೆ ಅದು ಮರೆತುಬಿಟ್ಟಿರುವ ಇನ್ನೂ ಇಪ್ಪತ್ತು ಭಿನ್ನ ಕಾಲಪ್ರಭೇದಗಳನ್ನು ಮತ್ತೆ ನೆನಪಿಸಿಕೊಡುವ ಸಾಂಸ್ಕೃತಿಕ ಹಾಗೂ ತಾತ್ವಿಕ ಕ್ರಮವೂ ಆಗುತ್ತದೆ. ಹೀಗೆ ಜನರು ತಮಗೆ ಸಹಜವೂ ಅನುಕೂಲಕರವೂ ಆದ ವಿಭಿನ್ನ ಕಾಲಮಾನಗಳನ್ನು ಅನುಸರಿಸುವ ಹಕ್ಕನ್ನು ಉಳಿಸಿಕೊಳ್ಳಲು ಸಾಧ್ಯಮಾಡಿ ಕೊಡುವುದರ ಮೂಲಕ ಪೌರತ್ವದ ವೈವಿಧ್ಯಮಯ ರೂಪಗಳನ್ನು ಗೌರವಿಸುವಂತಹ ಸಂವಿಧಾನ ಮಾತ್ರ ದಿಟವಾಗಿ ಪ್ರಜಾಪ್ರಭುತ್ವವಾದಿಯಾಗಬಲ್ಲುದು. ಇಲ್ಲದಿದ್ದಲ್ಲಿ ನಮ್ಮ ಚರ್ಚೆಯೆಲ್ಲ ಪ್ರಗತಿ ಹಾಗೂ ಆಧುನಿಕತೆಗಳ ಕುರಿತಾದ ಏಕಮೇವಮಾನದ ಪರಿಭಾಷೆಯಲ್ಲಿ ಸಿಕ್ಕಿಕೊಂಡು ತೊಳಲಾಡುವಂತಾಗುತ್ತದೆ.

ಪ್ರಗತಿ ಮತ್ತು ಆಧುನಿಕತೆಗಳ ಈ ಪರಿಭಾಷೆಅತೀವ ಹಿಂಸ್ರಕವಾದದು. ಇತಿಹಾಸದಲ್ಲಿ ಈಯೆರಡು ಪರಿಕಲ್ಪನೆಗಳು ನಡೆಸಿದಂತಹ ನರಮೇಧಗಳನ್ನು ಇನ್ಯಾವುವೂ ನೆಡಸಿಲ್ಲ. ಖ್ಯಾತ ಚಿಂತಕ-ಸಾಹಿತಿ ಆಕ್ಟೇವಿಯೊ ಪಾಜ್ ಇದನ್ನು ಮಾರ್ಮಿಕವಾಗಿ ಸೂತ್ರೀಕರಿಸಿ ಕೆಲವು ಶಬ್ದಗಳಿಗೆ ಸಮೂಹನಾಶಕ ಶಕ್ತಿಯಿದೆ. ಅದರಲ್ಲೂ ವಿಶೇಷವಾಗಿ ಸಮಾಜವಿಜ್ಞಾನದ ಪದಗಳಿಗೆ ವಿಶೇಷವಾದ ಸಮೂಹ ನಾಶಕ ಶಕ್ತಿಯಿದೆ' ಎಂದು ಹೇಳಿದ. ಅಂಥ ಇಂಗಿತಾರ್ಥದ ಶಬ್ದಗಳನ್ನು ವರ್ಣಿಸಲು ಆತ 'ನಿಗಮನ ತರ್ಕದ ಚೂರಿ - ( ) ಎಂಬ ಹೊಸ ಪದಪುಂಜವನ್ನು ಸೃಷ್ಟಿಸಿದ. ಅದನ್ನು ವಿವರಿಸುತ್ತಾ ಆತ ನುಡಿದ: ಇಂದು ಸಮಾಜ ವಿಜ್ಞಾನಗಳಲ್ಲಿ ಪ್ರಚಲಿತ ವಾಗಿರುವ ಯಾವುದೆ ಮುಖ್ಯ ಪಾರಿಭಾಷಿಕ ಪದವನ್ನು ತೆಗೆದುಕೊಳ್ಳಿ; ಅದು ಅಭಿವೃದ್ಧಿ, ಪ್ರಗತಿ, ಕಾರ್ಯಕ್ಷಮತೆ, ಉತ್ಪಾದನಾಶೀಲತೆ ಇತ್ಯಾದಿಗಳಲ್ಲಿ ಯಾವುದಾದರೂ ಆಗಿರಬಹುದು. ಅಂಥದೊಂದು ಪದದ ತರ್ಕವನ್ನು ಭವಿಷ್ಯದುದ್ದಕ್ಕೂ ವಿಸ್ತರಿಸಿ. ಆಗ ಅದರ ಸಮೂಹನಾಶಕ ಸಾಮರ್ಥ್ಯದ ಲೆಕ್ಕ ಸಿಗುತ್ತದೆ. ಪಾಜ್‌ನ ಸಮೀಕರಣ ಸತ್ಯಾಂಶವನ್ನೊಳಗೆಂಡಿರುವದೆ ಹೌದು. ಉದಾಹರಣೆಗೆ 'ಪ್ರಗತಿ' ಎನ್ನುವ ಪದವನ್ನು ತೆಗೆದುಕೊಳ್ಳಿ ; ಅದರ ವಿನಾಶಕಮೌಲ್ಯ ಒಂದು ನೂರು ಮಿಲಿಯನ್ ಮನುಷ್ಯರು. 'ಕಾರ್ಯದಕ್ಷತೆ'ಯೆಂಬ ಪದದ ಬಲಿಶಕ್ತಿ ಸುಮಾರು ಎಪ್ಪತ್ತು ಬಿಲಿಯನ್ ಜೀವಗಳು. ಅಂದರೆ ಕೈಗಾರಿಕಾ ಕ್ರಾಂತಿಯ ಕಾಲದಲ್ಲಿ ಚಾಲ್ತಿಗೆ ಬಂದ ಈಯೆರಡು ಆಧುನಿಕ ಪರಿಕಲ್ಪನಾತ್ಮಕ ಪದಗಳು ಇಲ್ಲಿಯವರೆಗೆ, ಇಷ್ಟೊಂದು ಆಗಾಧ ಸಂಖ್ಯೆಯಲ್ಲಿ ಮಾನವಜೀವಗಳನ್ನು ಬಲಿ ತೆಗೆದುಕೊಂಡಿವೆ; ಇನ್ನೂ ಮಾರಣಹೋಮಗಳನ್ನು ಅಗೋಚರವಾಗಿ ನಡೆಸುತ್ತಲೆ ಇವೆ. ಭಾರತದ ಮಟ್ಟಿಗೆಯ ಹೇಳುವುದಾದರೆ, ತನ್ನ ಭವಿಷ್ಯವನ್ನು ಆಧುನಿಕ ವಿಜ್ಞಾನದ ಸುಪರ್ದಿಗೆ ಒಪ್ಪಿಸಿದ ಈ ದೇಶ ಈಗಾಗಲೆ ಸುಮಾರು ಅರವತ್ತು ಮಿಲಿಯನ್ ಮನುಷ್ಯರನ್ನು ಭೂತ-ವರ್ತಮಾನ-



ಭವಿಷ್ಯಗಳಾವುದರ ಅಲ್ಪ ಆಸರೆಯೂ ಇಲ್ಲದಂತಹ ನಿರ್ಗತಿಕರನ್ನಾಗಿ ಮಾರ್ಪಡಿಸಿದೆ. ನಾವು ಆಧುನಿಕ ರಾಷ್ಟ್ರವಾಗಿ ಸೆಣೆಸಿದ ಎಲ್ಲ ಯುದ್ಧಗಳೂ ಸೇರಿ ಎಷ್ಟು ನಿರಾಶ್ರಿತರನ್ನು ಸೃಷ್ಟಿಸಿದವೊ ಅದಕ್ಕಿಂತ ಎಷ್ಟೊ ಪಟ್ಟು ಹೆಟ್ಟು ಸಂಖ್ಯೆಯ ನಿರಾಶ್ರಿತರನ್ನು ನಮ್ಮ ಆಧುನಿಕ ಅಭಿವೃದ್ಧಿ ಯೋಜನೆಗಳು ಸೃಷ್ಟಿಸಿವೆ. ಪ್ರಗತಿಯ ರಥಚಕ್ರದಡಿಯಲ್ಲಿ ಹೀಗೆ ತಮ್ಮ ಅಸ್ತಿತ್ವದ ಬೇರುಗಳನ್ನೆ ಕಳೆದುಕೊಂಡು ನಮ್ಮ ದೇಶಬಾಂಧವರ ಸಂಖ್ಯೆ ಅದೇ ಗತಿ ಕಂಡ ಇತರ ಎಲ್ಲ ದೇಶಗಳವರ ಒಟ್ಟೂ ಸಂಖ್ಯೆಗಿಂತ ಅಧಿಕವಾದದು.

ಹೀಗೆ ಶಾಶ್ವತವಾಗಿ ನೆಲೆ-ಬೆಲೆ ಕಳೆದುಕೊಂಡ, ಪೌರತ್ವತ ಹಕ್ಕುಗಳಿಂದ ಶಾಶ್ವತವಾಗಿ ವಂಚಿತರಾದ ಜನರು ಯಾವ ರೀತಿಯ ಭವಿಷ್ಯವನ್ನು ಕಟ್ಟಿಕೊಳ್ಳಬಲ್ಲತು ? ಅವರಿಗೆ ನಾವು ಯಾವ ರೀತಿಯ ಸ್ವಾತಂತ್ರ್ಯದ ಭರವಸೆಯನ್ನು ನೀಡಬಲ್ಲೆವು ?

ಈ ಸಂದಿಗ್ಧದ ಹಿನ್ನೆಲೆಯಲ್ಲಿ ನನಗನಿಸುವುದಿದು: ಮಾನವ ಹಕ್ಕುಗಳ ಎಲ್ಲ ಹೋರಾಟಗಾರರ ಸಂವಿಧಾನಗಳೂ ಈ ಮಟ್ಟಿಗೆ ಪೊಳ್ಳಾಗಿರುವಂಥವು; ಮಾನವ ಹಕ್ಕುಗಳನ್ನು ಸ್ತುತಿಸುವ ಪ್ರತಿಯೊಂದು ಆಧುನಿಕ ಘೋಷಣಾಪತ್ರವೂ ಈ ಅರ್ಥದಲ್ಲಿ ಅಜ್ಞಾನವನ್ನು ಪ್ರದರ್ಶಿಸುವಂಥದು. ಯಾಕೆಂದರೆ ಅವುಗಳಲ್ಲಿ ಭವಿಷ್ಯದ ವಿಷಯದಲ್ಲಿ ಪ್ರತಿಯೊಬ್ಬ ಜೀವಿಗೂ ಇರುವ ಸಹಜ ಹಕ್ಕುಲಳ ಬಗೆಗೆ ಕಿಂಚಿತ್ ಪ್ರಸ್ತಾಪವೂ ಇಲ್ಲ; ಪ್ರತಿಯೋರ್ವ ಪ್ರಾಣಿರೂಪವೂ ತನ್ನ ಭವಿಷ್ಯವನ್ನು ತನಗಿಷ್ಟಬಂದಂತೆ ಕಟ್ಟಿಕೊಳ್ಳ ಬಹುದಾದ ಸ್ವಾತಂತ್ರ್ಯದ ಪರಿಕಲ್ಪನೆಯೆ ಇಲ್ಲ. ಇನ್ನೂ ಹೇಳಬೇಕೆಂದರೆ, ಇಂಥ ತತ್ವಪ್ರಣಾಳಿಕೆಗಳು ಭೂತದ ಬಗೆಗೆ, 'ಪರಂಪರೆ'ಯ ಬಗೆಗೆ ತೋರುವ ನಿಲುವು-ನಂಬಿಕೆಗಳೂ ಅತ್ಯಂತ ವಿಷಾದನೀಯವಾದುವು. ಅವುಗಳಿಗೆ ಪರಂಪರೆ ಯೆನ್ನುವುದು ಚಾರಿತ್ರಿಕವಾದೊಂದು ಕಟ್ಟಿವೊ ಅವಶೇಷಸಂಗ್ರಹವೊ ತಾಳೆಗರಿ ಗ್ರಂಥವೊ ಅಷ್ಟೆ. ಆದರೆ ಸತ್ಯ ಇದಕ್ಕೆ ವ್ಯತಿರಿಕ್ತವಾದದು: ನಾವು ನಮ್ಮ ರರಂಪರೆಗಳ ಬಳುವಳಿಯ ಮೇಲಿನ ಹಕ್ಕನ್ನು ಮರಳಿ ಸ್ಥಾಪಿಸಿಕೊಳ್ಳದಿದ್ದಲ್ಲಿ ಭವಿಷ್ಯ ಮೇಲಿನ ಹಕ್ಕುಲಳನ್ನು ಪಡೆಯಲಾರೆವು. ಭವಿಷ್ಯದ ಫಲ ಅಂತಿಮವಾಗಿ ಭಾತದ ಬೀಜಗಳನ್ನು ಅವಲಂಬಿಸಿರುವಂಥದು.

ನಮ್ಮ ಕಲ್ಪನಾಪ್ರತಿಭೆ ಇನ್ನು ಭೂತ-ವರ್ತಮಾನ-ಭವಿಷ್ಯಗಳೆಂಬ ಕಾಲರೂಪಗಳ ಪರಸ್ಪರ ಕೊಡುಕೊಳೆಯ ಹಾಗೆಯೇ ಕಾಳಗದ ಈ ಅಂಕಣ ದಲ್ಲಿಬೆಳೆಯಬೇಕಾಗಿದೆ. ಅಷ್ಟೆ ಅಲ್ಲ ಅದು ಸ್ವತಃ ತಾನೆ ಆ ಅಂಕಣವನ್ನು ಬೆಳೆಸಲೂಬೇಕಾಗಿದೆ. ಇಂಥದೊಂದು ಅಸೀಮ ಅದಮ್ಯ ಕಲ್ಪನಾಶಕ್ತಿ ಮಾತ್ರ ವೈವಿಧ್ಯಸವದ್ಧವೂ ವಿವೇಕ-ವಿನೋದ-ಸಂಯುಕ್ತವೂ ಆದ ಭವಿಷ್ಯವನ್ನು ನಿರ್ಮಿಸಿಕೊಡಬಲ್ಲದು.

# ಆಶಯ ಭಾಷಣಕ್ಕೆ ಪ್ರತಿಸ್ಪಂದನೆ

ಭಾಸ್ಕರ ಚಂದಾವರ್ಕರ್

ಇಂದಿನ ವಿಶ್ವವಿದ್ಯಮಾನಗಳು ಆಶಾದಾಯಕವಾಗಿಯೂ ನಿರಾಶಾದಾಯಕ ವಾಗಿಯೂ ತೋರುತ್ತಿವೆ. ಜಗತ್ತು ಬಗೆಬಗೆಯ ಜನಾಂಗಹತ್ಯೆಗಳನ್ನು ಸಮಸ್ಯಾಪರಿಹಾರದ ಏಕೈಕ ಮಾರ್ಗವೆಂಬಂತೆ ಅನುಸರಿಸುತ್ತಿರುವುದು ನಮ್ಮೆಲ್ಲರಲ್ಲೂ ಕಳವಳ ಹುಟ್ಟಿಸುವಂಥದ್ದು. ಈ ಘೋರ ಗೊಂದಲದಿಂದ ಹೊರಬರುವ ಮಾರ್ಗಗಳ ಹುಡುಕಾಟದ ಒಂದು ಭಾಗವಾಗಿ ಅಲ್ಲಿ ಇಲ್ಲಿ ನಮ್ಮಂತಹ ಚಿಕ್ಕಪುಟ್ಟ ಗುಂಪುಗಳು ಭವಿಷ್ಯ ಚಿಂತನೆಯಲ್ಲಿ ಉತ್ಸುಕರಾಗಿ ತೊಡಗಿಕೊಂಡಿರುವುದು ಭರವಸೆಯನ್ನು ಮೂಡಿಸುವುದು ನಿಜವಾದರೂ ಆ ಭರವಸೆ ನಮ್ಮನ್ನು ಎಷ್ಟು ದೂರ ಕರೆದೊಯ್ಯಬಲ್ಲುದೊ ಗೊತ್ತಿಲ್ಲ. ಏಕೆಂದರೆ ಇವತ್ತಿನ ಸವಾಲುಗಳೇ ಅಷ್ಟೊಂದು ಬೃಹದಾಕಾರದ್ದಾಗಿವೆ.

ಬರುವ ಭವಿಷ್ಯದ ಕುರಿತಾಗಿ ಹೇಳಲು ನನ್ನ ಬಳಿಯೂ ಕೆಲವು ಕತೆಗಳಿವೆ. ಮನುಷ್ಯರಿಗೆ, ಮನುಷ್ಯನ ಮನಸ್ಸು ಹಾಗೂ ಚೇತನಕ್ಕೆ ಸಂಬಂಧಿಸಿದ ಅಂಶಗಳೆಷ್ಟೋ ಈಗ ಇಲ್ಲವಾಗುತ್ತಿವೆ. ಇದು ಕೇವಲ ರಾಷ್ಟ್ರ-ಪ್ರಭುತ್ವದಿಂದಾಗಲೀ, ಅಧಿಕಾರಿಗಳಿಂದಾಗಲೀ, ''ಜನಾಭಿವೃದ್ಧಿ''ಗಾಗಿ ತಮ್ಮ ಅಧಿಕಾರವನ್ನು ದುರುಪಯೋಗಪಡಿಸುವವರಿಂದ ಮಾತ್ರವೇ ಆಗಿಲ್ಲ; ವಿಜ್ಞಾನ, ತಂತ್ರಜ್ಞಾನ ಹಾಗೂ ವಾಣಿಜ್ಯಗಳೂ ಮನುಷ್ಯ ಸತ್ವವನ್ನು ಕಡೆಗಣಿಸಿವೆ ಎಂದು ನನಗೆ ವ್ಯಥೆಯಾಗುತ್ತದೆ. ಇಂಥ ಅಪಾಯಗಳನ್ನು ಎದುರಿಸುವುದೇ ಅತ್ಯಂತ ಕ್ಲಿಷ್ಟಕರ. ಕೆಲವು ವರ್ಷಗಳ ಹಿಂದೆ, ನಾನು ದಕ್ಷಿಣ ಆಫ್ರಿಕಾದ ಮಾನವ ಶಾಸ್ತ್ರಜ್ಞನೊಬ್ಬನ 'ಅಅಅಅಅ' ಎಂಬ ಆಕರ್ಷಕ ಶೀರ್ಷಿಕೆಯಿರುವ ಪುಸ್ತಕವನ್ನು ನೋಡಿದೆ. ಅದರಲ್ಲಿ, ಪ್ರಪಂಚದಾದ್ಯಂತ ಹೇಗೆ ರಾಜ್ಯಾಧಿಕಾರವನ್ನು ಸಂಪೂರ್ಣವಾಗಿ ಹಿಮ್ಮೆಟ್ಟಿಸಿ ನಡೆದದ್ದಲ್ಲದೆ, ತಾವು ಯೋಜಿಸಿಕೊಂಡ ಕಾರ್ಯಗಳನ್ನು ಮುಂದುವರಿಸುವುದರಲ್ಲಿ ಯಶಸ್ವಿಯಾದ ಅನೇಕ ಉದಾಹರಣೆಗಳ ಪ್ರಸ್ತಾಪವಿದೆ. ಅದರಲ್ಲೂ ಆಫ್ರಿಕಾದ ಉದಾಹರಣೆಗಳು ಮತ್ತೂ ಆಕರ್ಷಕ-ಆದರೆ ನಮಗೆ ರಾಜ್ಯಾಧಿಕಾರವನ್ನಾಗಲೀ, ತಂತ್ರಜ್ಞಾನವನ್ನಾಗಲೀ ಹಿಮ್ಮೆಟ್ಟಿಸುವ ಕಷ್ಟ ಈಗ ಹೆಚ್ಚಾಗುತ್ತಲೇ ಇದೆ.



ದೆಹಲಿಯಲ್ಲಿ ನಡೆದ ಘಟನೆಯೊಂದರ ನಿದರ್ಶನವನ್ನು ನೋಡಬಹುದು. ಸಂಗೀತ-ನಾಟಕ ಅಕಾಡೆಮಿ, ಬಹಳ ವರ್ಷಗಳಿಂದಲೂ ಅಲಕ್ಷ್ಯಕ್ಕೀಡಾದ, ಬಳಸದೇ ಮೂಲೆಗುಂಪಾದ ಅಥವಾ ಮರತೇಹೋದಂಥ ಸಂಗೀತೋಪಕರಣಗಳನ್ನು ಹುಡುಕಿ ತೆಗೆಯುವ ಪ್ರಯತ್ನ ನೆಡಸಿತು. ಅಂಥ ವಾದ್ಯಗಳನ್ನು ಕುರಿತಾದ ಒಂದು ಉತ್ಸವ-ಪ್ರದರ್ಶನ ವಿಚಾರ ಸಂಕರಣಗಳನ್ನು ಏರ್ಪಡಿಸಲಾಗಿತ್ತು. ಆಗ ನನಗೆ, ಅಲ್ಲಿದ್ದ ಸಂಗೀತವಾದ್ಯಗಳು ಇನ್ನೂರು ವರ್ಷಗಳಷ್ಟು ಹಿಂದೆಯೇ ತಯಾರಾಗುತ್ತಿದ್ದವಲ್ಲದೆ, ಅವುಗಳನ್ನು ಬಳಸಲೂ ಬಹುದು ಎಂತಲೂ ತಿಳಿದುಬಂತು. ಅವುಗಳಲ್ಲಿ ಹಲವು ಅಪ್ಪಟ ಭಾರತೀಯ ವಾದ್ಯಗಳು. ಅವನ್ನು ತಯಾರಿಸಿದ ಕಲಾವಿದರೂ ಅಲ್ಲಿಗೆ ಬಂದಿದ್ದು, ಅವರು ಕೂಡ ಮಾತನಾಡಿದರು. ಜಗತ್ತಿನ ವಿವಿಧ ಪ್ರದೇಶಗಳನ್ನು ಸಂಗೀತೋಪಕರಣಗಳನ್ನು ತಯಾರಿಸಲು ಅಗತ್ಯವಿರುವ ಮರಮಟ್ಟುಗಳನ್ನು ರಫ್ತುಮಾಡಿ ಶ್ರೀಮಂತನಾದ ಒಬ್ಬ ವ್ಯಾಪಾರಸ್ತನೂ ಅದೇ ಸಂದರ್ಭದಲ್ಲಿ ಹಾಜರಿದ್ದ. ಆತ ಪಿಯಾನೆ, ಗಿಟಾರ್ ಇತ್ಯಾದಿಗಳನ್ನು ತಯಾರಿಸಲು ಹಿಮಾಲಯದ ನಾಟವನ್ನು ರಫ್ತುಮಾಡುತ್ತಿದ್ದೆ. ಆದರೆ, ಈತನಿಗೂ ಮೊದಲೇ ಮಾತನಾಡಿದ, ಭಾರತೀಯ ವಾದ್ಯಗಳನ್ನುಸಿದ್ಧಪಡಿಸುವ ಭಾರತೀಯ ಕಸಬುದಾರನೊಬ್ಬ, ತನಗೆ ಬೇಕಾದ ಯೋಗ್ಯವಾದ ಮರ ಸಾಮಗ್ರಿಗಳು ತನ್ನ ದೇಶದಲ್ಲಿ ದೊರಕುವುದೇ ಇಲ್ಲವೆಂದು ಆಕ್ಷೇಪವೆತ್ತಿದ್ದ. ಜಾಗತೀಕರಣವೆನ್ನುವುದು ತಪ್ಪುದಾರಿ ಹಿಡಿಸಿದೆ. ಅನ್ನುವುದಕ್ಕೆ ಇದೊಂದು ನಿದರ್ಶನ. ಮೊದಲು ಹೇಳಿದ ಉದ್ಯಮಿ ಯೂರೋಪು ಮತ್ತು ಅಮೇರಿಕಾದ ಕಂಪೆನಿಗಳು ಆತನ ಮೂಲಕ ನಾಟವನ್ನು ಆಮದು ಮಾಡಿಕೊಳ್ಳುತ್ತವೆ, ಅಷ್ಟಲ್ಲದೆ, ಸಂಗೀತೋಪಕರಣಗಳನ್ನು ತಯಾರಿಸುವಲ್ಲಿ ಭಾರತೀಯ ಮೂಲದ ಮರಗಳನ್ನು ಬಳಸದೇ ಇರುವ ಉದಾಹರಣೆಗಳು ಜಗತ್ತಿಲ್ಲಿ ಎಲ್ಲಿಯೂ ಇಲ್ಲವೇ ಇಲ್ಲ ಎಂದು ಹೇಳುತ್ತಿದ್ದರೆ, ಭಾರತೀಯ ಕರಕುಶಲ ತನಗೆ ಅಗತ್ಯವಿರುವ ಮರಗಳೇ ಸಿಗುತ್ತಿಲ್ಲ ಎಂದು ಆಕ್ಷೇಪಿಸುತ್ತಲೇ ಇದ್ದದ್ದು ಮಹಾ ವಿಪರ್ಯಾಸವಾಗಿ ಕಂಡಿತು. ಹಾಗೆ ಇನ್ನೂರು ವರ್ಷಗಳ ಇತಿಹಾಸವಿದ್ದಂಥ ಆ ವಾದ್ಯಗಳಲ್ಲಿ ಕೋಲ್ಕತ್ತಾದ ''ಸುರ್ ಸಿಂಗಾರ್'' ಅನ್ನುವುದೂ ಒಂದು. ಅನೇಕ ವರ್ಷಗಳಿಂದ ಅದನ್ನು ಅಭ್ಯಾಸ ಮಾಡಿದ್ದ ಒಬ್ಬ ಯುವಕ ಅಲ್ಲಿ ಅದನ್ನು ನುಡಿಸಿದ. ಇನ್ಯಾವುದರಿಂದಲೂ ಅಂತಹ ನಾದವನ್ನು ಹೊರಡಿಸಲಾಗದೆನ್ನುವಷ್ಟು ಅದು ಅನನ್ಯವಾಗಿತ್ತು. ಒಂದು ರೀತಿಯಿಂದ ಅದು ಯೂರೋಪಿನ ಸ್ಟ್ರಾಡಿವೇರಿಯಸ್ ಪೀಟರೇನ ಅಥವಾ ಇಟಲಿಯ ಹಳೆಕಾಲದ ವಾರ್ನರಿ/ಅಮೇಟ್ ಚೇಲೋ ದನಿಯಂತಿತ್ತು. ಆಗ ನಮಗೆ, ಹಿಂದಿನ ಕಾಲದಲ್ಲಿ ಅಂಥ ವಸ್ತುಗಳನ್ನು ತಮ್ಮ ಕೈಯಾರೆ ಮಾಡುತ್ತಿದ್ದರಲ್ಲ ಅಂತ ಗೊತ್ತಾಯಿತು. ಆ ವಿಶಿಷ್ಟ

ನಾದಕ್ಕೆ, ಆ ಜಾತಿಯ ಮರದ ಬಳಕೆಯೊಂದೇ ಕಾರಣವಾಗಿರದೆ, ಅಂಥ ವಾದ್ಯಗಳನ್ನು ತಯರಿಸುತ್ತಿದ್ದವರ ಕೌಶಲ್ಯವೂ ಕಾರಣವಾಗಿತ್ತು. ಅಲ್ಲದೆ, ಆ ಬಗೆಯ ವಾದ್ಯಗಳು ನಮ್ಮ ನಡುವೆ ಇರದೇ ಹೋಗಿದ್ದರೆ, ಅಂಥದೊಂದು ನಾದ ಪ್ರಪಂಚವೇ ನಮ್ಮ ಬದುಕಿನಲ್ಲಿ ಇರದಂತಾಗುತ್ತಿತ್ತು; ಮತ್ತೆಂದೂ ಅದನ್ನು ಕೇಳುವ ಆಸ್ಪದವೇ ಇರುತ್ತಿರಲಿಲ್ಲ.

ಈ ಆಲೋಚನೆಯೇ ನನ್ನನ್ನು ಖಿನ್ನನಾಗಿಸಿತು. ಬಾಮಿಯನ್ ಬೌದ್ಧಮೂರ್ತಿಗಳ ಹಾಗೆ, ಒಮ್ಮೆ ಅವುಗಳನ್ನು ಹಾಳು ಮಾಡಿದರೆ, ಅವು ಸಂಪೂರ್ಣ ನಾಶವಾದಂತೆಯೇ. ಅವುಗಳ ಫೋಟೋವನ್ನಯಾರಾದರೂ ನೊಡಬಹುದಾಗಿದ್ದರೂ, ಅದು ಕೇವಲ ನಸ್ಸತ್ವ ಪ್ರತಿಕೃತಿಯಾಗುತ್ತದೆ. ನಮ್ಮ ಸಂಗೀತ ವಾದ್ಯಗಳ ಬಗ್ಗೆ ನಾವು ತೋರುವ ಧೋರಣೆಯೂ ಅಷ್ಟೇ ಕ್ರೂರವಾದ್ದು.

ನನ್ನ ಜೀವನದಲ್ಲೇ ಕಂಡುಬಂದ ಸಂದರ್ಭವೊಂದಕ್ಕೆ ಇದನ್ನು ಹೋಲಿಸಬಹುದು. ಕೆಲವು ವರ್ಷಗಳ ಹಿಂದೆ, ನನ್ನ ಸಂಬಂಧಿಕರ ಹುಡುಗನೊಬ್ಬ ನಮ್ಮ ಮನೆಗೆ ಬಂದಿದ್ದ. ಅವನು ಮುಂಬೈನಲ್ಲೇ ಹುಟ್ಟಿ ಬೆಳೆದವನು. ಅವನು ಅದೂ ಇದೂ ನೊಡುತ್ತ, ನಮ್ಮ ಮನೆ ತುಂಬಾ ಅಡ್ಡಾಡುತ್ತ, ನನ್ನ ಪುಟ್ಟ ಸ್ವಂತ ಕೊಠಡಿಗೆ ಹೋಗಿ, ಅಲ್ಲಿದ್ದ ತಬಲಾ, ಸತಾರ ಇತ್ಯಾದಿ ವಾದ್ಯಗಳನ್ನು ಅವುಗಳ ಅಕ್ಕ-ಪಕ್ಕೆಗಳನ್ನೆಲ್ಲಾ ಪರೀಕ್ಷಿಸಿ, ನಂತರ ಕೇಳಿದ, ''ಅಂಕಲ್ ಇದರ ಸ್ವಿಚ್ ಎಲ್ಲಿದೆ ?'' ಅಂತ ಸಂಗೀತ ವಾದ್ಯಗಳನ್ನು ಮನುಷ್ಯರು ತಾವೇ ನುಡಿಸಬಹುದು ಅನ್ನುವದೇ ಅವನಿಗೆ ತಿಳಿದಿರಲಿಲ್ಲ. ಅವನು ನೋಡಿದ್ದು, ಕೇಳಿದ್ದೆಲ್ಲ ಎಲೆಕ್ಟ್ರಾನಿಕ್ ವಾದ್ಯಗಳೇ ಆಗಿದ್ದವು. ಅವನ ಪ್ರಕಾರ ಸಂಗೀತ ವಾದ್ಯಗಳನ್ನು ಸ್ವಿಚ್ ಹಾಕಿ ನುಡಿಸಬಹುದು, ನಿಲ್ಲಿಸಬಹುದು, ಅಲ್ಲದೆ, ಅವು ಸ್ವತಃ ತಾವೇ ನುಡುಸುತ್ತವೆ ಅನ್ನುವ ಭಾವನೆಯಾಗಿತ್ತು. ಸ್ವಿಚ್ ಗಳು ಮನುಷ್ಯನನ್ನೇ ದೂರ ಸರಿಸುತ್ತದೆ.

ಇದಕ್ಕೆ ಸಮಾನವಾದ ಇನ್ನೊಂದು ಉದಾಹರಣೆಯನ್ನು ನೋಡಿ. ಕೆಲವು ವರ್ಷಗಳ ಹಿಂದೆ, ನಾನು, ನನ್ನ ಹೆಂಡತಿ ಭೀಮಸೇನ ಜೋಶಿಯವರ ಮನೆಯಲ್ಲಿ ನಡೆದ ಮದುವೆ ಸಮಾರಂಭಕ್ಕೆ ಹೋಗಿದ್ದೆವು. ಲತಾ ಮಂಗೇಶ್ವರ್‌ರವರು ಸಹ ಅಲ್ಲದ್ದರು. ಅವರಿಗೆ ನನ್ನ ಹೆಂಡತಿಯನ್ನು ಪರಿಚಯಿಸಿದೆ. ಆಗ ಅವರು, ''ಇವರು ನಿಮ್ಮ ಪತ್ನಿಯೇ, ಹೆಸರೇನು ?'' ಇತ್ಯಾದಿ ಕೇಳುತ್ತಾ, ಮೂರೋ ನಾಲ್ಕೊ ನಿಮಿಷಗಳ ಕಾಲ ಮಾತನಾಡಿದರು. ಆ ನಂತರ ನನ್ನ ಹೆಂಡತಿ ಹೇಳಿದ್ದೇನೆಂದರೆ, ''ನನ್ನ ಬದುಕು ಸಾರ್ಥಕವಾಯಿತು. ನಾನು ಲತಾ ಅವರ ಧ್ವನಿಯನ್ನು ನೇರವಾಗಿ ಕೇಳಿಬಿಟ್ಟೆ!'' ಅಂತ.

ಹಿಂದೆಂದೂ ಅಂಥದೊಂದು ಸಂದರ್ಭ ಒದಗಿ ಬಂದಿರಲಿಲ್ಲ. ಖ್ಯಾತ ಗಾಯಕಿ



ಲತಾ ಅವರ ಧ್ವನಿಯನ್ನು ಎಂದೂ ನೇರವಾಗಿ ಕೇಳಿರಲಿಲ್ಲ. ಈ ಯಂತ್ರ ಮಾಧ್ಯಮದ ಹಿಡಿತ ಅದೆಷ್ಟು ಪ್ರಬಲವಾಗಿದೆಯೆಂದರೆ, ಇಂದಿನ ನಮ್ಮ ಸಂಗೀತಾನುಭವದಲ್ಲಿ ಮನುಷ್ಯ ಗುಣವೇ ಇಲ್ಲದಾಗಿದೆ.

ಈಗ ತಬಲಾ, ತಂಬೂರಿ ಇತ್ಯಾದಿ ವಾದ್ಯಗಳ ದನಿಗಳನ್ನು ಹೊರಡಿಸುವ ಎಲೆಕ್ಟ್ರಾನಿಕ್ ಉಪಕರಣಗಳನ್ನು ತಯಾರಿಸುವುದರಿಂದ, ಸಂಗೀತಗಾರರಿಗೆ ಪಕ್ಕುವಾದ್ಯದವರ ಅಗತ್ಯವೇ ಇರುವುದಿಲ್ಲ. ಶಿಷ್ಯಂದಿರು ಪಕ್ಕವಾದ್ಯದವರಾಗಿದ್ದಾಗ ತಮ್ಮ ಗುರುವಿನ ಸಾಧನೆಯನ್ನು ನೋಡಿ ಹೆಚ್ಚಿನ ಜ್ಞಾನವನ್ನು, ಅನುಭವವನ್ನು ಪಡೆಯುತ್ತಿದ್ದರು. ಆದರೀಗ ಶಿಷ್ಯನಿಗೆ ಆ ಸ್ಥಾನವೇ ಇಲ್ಲ. ಇಂದು ಯಾರೇ ಆಗಲಿ, ಕೇವಲ ಸ್ವಿಚ್ ಹಾಕಿ ತಂಬೂರಿ ಆರಂಭಿಸಿ ಕಛೇರಿಯನ್ನು ನೀಡಬಹುದು. ಶಿಷ್ಯನಾದವರನು ತನ್ನ ಪಾಡಿಗೆ ತಾನು, ಮನೆಯಲ್ಲಿ ಧ್ವನಿಮುದ್ರಿಕೆಗಳನ್ನು ಕೇಳುತ್ತ ಸಂಗೀತವನ್ನು ಕಲಿಯುತ್ತಿರುತ್ತಾನೆ. ಆದ್ದರಿಂದ ಅವರ ನಡುವಿನ ಜೀವಂತ ಸಂಬಂಧವೇ ಕಣ್ಮರೆಯಾಗಿದೆ.

ಹಾಗಿದ್ದರೆ ಇಂಥದನ್ನು ಕ್ರಾಂತಿ ಎಂದು ಪರಿಗಣಿಸೇಣವೇ. ನಾನೀಗ ಮೂರನೆಯ ಕಥೆಯೊಂದನ್ನು ಹೇಳುತ್ತೇನೆ. ರಷಿಯಾದಲ್ಲಿ ಝಾರ್ ದೊರೆಗಳ ವಿರುದ್ಧ ಮೊಟ್ಟಮೆದಲ ಬಾರಿಗೆ ದಂಗೆ ಆರಂಭವಾದಾಗ, ಅಲ್ಲಿನ ಖ್ಯಾತ ಸಂಗೀತ ನಿರ್ದೇಶಕ ಐಗರ್ ಸ್ಟ್ರಾವಿನ್‌ಸ್ಕಿ ದೇಶ ತೊರೆದು ಪ್ಯಾರಿಸಿಗೆ ಪಲಾಯನ ಮಾಡಿದ. ಅಲ್ಲಿ ದಿಯಾಘೆಲೆವ್ ಅನ್ನುವವನ ಜತೆ ಸೇರಿ, ಕೆಲಸ ಮಾಡುತ್ತ, ಅಪಾರವಾದ ಖ್ಯಾತಿ ಗಳಿಸಿದ. ೧೯೧೭-೧೮ರಲ್ಲಿ ರಷಿಯಾ ಕ್ರಾಂತಿ ಉಂಟಾಯಿತು. ಆಗ ಅಮೆರಿಕಾಕ್ಕೆ ತೆರಳಿದ ಸ್ಟ್ರಾವಿನ್‌ಸ್ಕಿ ಜಗದ್ವಿಖ್ಯಾತ ಸಂಗೀತ ರಚನಾಕಾರನಾದ. ಒಮ್ಮೆ ಆತ ಕ್ಷೌರಿಕನಂಗಡಿಯಲ್ಲಿ ಕುಳಿತಿದ್ದಾಗ ಕ್ಷೌರಿಕ ಇವನನ್ನು ಕೇಳಿದ,''ಔಗೋರ್, ನೀವು ರಷಿಯಾವನ್ನು ಬಿಟ್ಟು ಬಂದದ್ದು ಅಲ್ಲಿ ರೆವಲ್ಯೂಶನ್ ಆದಾಗಲೇ ?'' ಎಂದು. ಅದಕ್ಕೆ ಸ್ಟ್ರಾವಿನ್‌ಸ್ಕಿ ''ಯಾವ ರೆವಲ್ಯೂಶನ್ ?'' ಅಂತ ಕೇಳಿದ. ಕ್ಷೌರಿಕ ಮತ್ತೆ, ''ಅದೇ ೧೯೧೭ರಲ್ಲಿ ಆ ಕಮ್ಯುನಿಸ್ಟರು ಮಾಡಿದಂಥ ದೊಡ್ಡ ದಂಗೆ'' ಅಂದ. ಆಗ ಸ್ಟ್ರಾವಿನ್‌ಸ್ಕಿ, ''ಓಹ್! ಆ ರೆವಲ್ಯೂಶನ್ನೇ! ಸಂಗೀತದಲ್ಲಿ ರೆವಲ್ಯೂಶನ್ ಅಂದರೆ, ಒಂದು ಸ್ಥಾನದಿಂದ ಆರಂಭವಾಗಿ ಮುಂದುವರೆದು ಪುನಃ ಅದೇ ಸ್ಥಾನಕ್ಕೆ ಹಿಂತಿರುಗುವುದು ಎಂದರ್ಥ'' ಅಂದ. ಹೀಗಿರುವಾಗ ಮೇಲೆ ಹೇಳಿದ ಅದೆಷ್ಟೋ ಸಂಗತಿಗಳನ್ನು ಸಂಗೀತದಲ್ಲಿರುವಂಥ ರೆವಲ್ಯೂಶನ್ ಥರ ಭಾವಿಸಬೇಕೇ ಅನ್ನುವುದೇ ಒಂದು ಪ್ರಶ್ನೆ.

ಪ್ರಪಂಚದಾದ್ಯಂತ ಇಂದು ಜನರೆಲ್ಲಾ ಸ್ವರಬದ್ಧತೆಗೆ, ನವಶಿಷ್ಟತೆಗೆ ( ) ವಾಪಾಸ್ಸಾಗುತ್ತಿದ್ದಾರೆ. ಬಹುಷಃ ಅದು ಬಹಳಷ್ಟು ಪ್ರದೇಶದ ಸಣ್ಣಪುಟ್ಟ ಸಂಗೀತ

ಪದ್ಧತಿಗಳಲ್ಲಿಯೂ ಕಾಣಿಸಿಕೊಳ್ಳುತ್ತಿದೆ. ಯಾಕೆಂದರೆ, ಶತಶತಮಾನಗಳುದ್ದಕ್ಕೂ ಬೆಳೆದು ಬಂದು ಉನ್ನತ ಮಟ್ಟಕ್ಕೇರಿದ ಅದೆಷ್ಟೋ ಸಂಗತಿಗಳಲ್ಲಿ ಜನರು ಶ್ರೇಷ್ಠತೆಯನ್ನು ಗುರುತಿಸುತ್ತಿದ್ದಾರೆ ಅನ್ನುವುದೇ ಭರವಸೆ ಮೂಡಿಸುವಂತಹ ವಿಚಾರ. ಬಾರ್ಟೋಕ್ ಹೇಳುತ್ತಿದ್ದ, ''ಜೀನಪದ ಸಂಗೀತವೆಲ್ಲವೂ ಪರಿಷ್ಕಾರಗೊಳ್ಳುತ್ತ ಕೊನೆಗೆ ಅದು ಶಾಸ್ತ್ರೀಯ ಸಂಗೀತಕ್ಕಿಂತಲೂ ಹೆಚ್ಚು ಚೆನ್ನಾಗಿರುವಂತೆ ಅನ್ನಿಸುತ್ತದೆ,'' ಅಂತ.

ಹಾಗಾಗಿ, ಯಾರಾದರೂ ಭವಿಷ್ಯದ ಬಗ್ಗೆ ನಿರಾಶಾದಾಯಕತೆಯಿಂದ ಮತನಾಡಿದರೆ, ನನ್ನ ಆಲೋಚನೆಯ ಉಯ್ಯಾಲೆ ಅದರ ವಿರುದ್ಧ ದಿಕ್ಕಿಗೆ ಜಿಗಿದು, ಭವಿಷ್ಯದಲ್ಲಿ ಸಂಭವಿಸಬಹುದಾದ ಅನಾಹುತಗಳನ್ನು ಯಾವುದಾದರೊಂದು ಬಗೆಯಲ್ಲಿ ಪ್ರತಿರೋಧಿಸಲು ಸಾಧ್ಯ ಅಂದುಕೊಳ್ಳುತ್ತದೆ. ಅದನ್ನು ಸಾಧಿಸಲು ಹಲವಾರು ಮಾರ್ಗಗಳಿವೆ. ಜಾಗತೀಕರಣಕ್ಕೊಳಪಡುವ ವ್ಯವಸ್ಥೆಗಳನ್ನು ಪಲ್ಲಟಗೊಳಿಸುವಂಥ ವಿಧಾನಗಳತ್ತ ನಾವೀಗ ಗಮನಹರಿಸಬೇಕಾಗಿದೆ.

ಕೆಲವು ಸಂಗತಿಗಳು ಅದೆಷ್ಟು ಅಸಹನೀಯವಾಗಿರುತ್ತವೆ ಗೊತ್ತೆ – ನಾನು ಇನ್ನೊಂದು ದೃಷ್ಟಾಂತದೊಂದಿಗೆ ಈ ವಿಷಯವನ್ನು ಮುಗಿಸುತ್ತೇನೆ. (ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವ ಭಾರತೀಯ ಭಾಷಣಕಾರರು ದೃಷ್ಟಾಂತಗಳನ್ನು ಅತಿಯಾಗಿ ಬಳಸುತ್ತಾರೆ ಅನ್ನುವ ಆಕ್ಷೇಪಣೆಗೆ ಒಳಗಾಗಿದ್ದಾರೆ. ಈಗ ಅವುಗಳಿಗೆ ನನ್ನದೂ ಒಂದು ಸೇರ್ಪಡೆ.) ಸುಮಾರು ೧೯೬೦-೭೦ ರ ದಶಕಗಳಲ್ಲಿ, ನನ್ನ ಗುರುಗಳಾದ ಪಂಡಿತ ರವಿಶಂಕರರವರು ಜಗದ್ವಿಖ್ಯಾತರಾದಾಗ ಸಿತಾರಿಗೆ ಭಾರೀ ಬೇಡಿಕೆ ಉಂಟಾಯಿತು. ಆಗ ಬಹುದೊಡ್ಡ ಸೂಪರ್ ಮಾರ್ಕೆಟ್ ಕೇಂದ್ರವಾದ ವಾಲ್‌ಮಾರ್ಟಿನ ಸಂಗೀತ ವಿಭಾಗದವರು, ತಾವು ಮಾರಾಟ ಮಾಡಲು ಅಗತ್ಯವಿರುವಷ್ಟು ಸಿತಾರಗಳನ್ನು ಒದಗಿಸಲು ಸಾಧ್ಯವೇ ಎಂದು ಕೆಲವು ಭಾರತೀಯ ಉದ್ಯಮಿಗಳನ್ನು ಕೇಳಿದರು. ಆ ಬಿಸಿನೆಸ್ ಯೆಂದು ಭಾರತಕ್ಕೆ ಬಂದು, ಸಿತಾರ್ ತಯಾರಕರನ್ನು ಭೇಟಿಮಾಡಿ, ಸುಮಾರು ೬೫,೦೦೦ ಸಿತಾರ್‌ಗಳನ್ನು ಒಂದುವರೆ ವರ್ಷಗಳಲ್ಲಿ ಸಿದ್ಧಗೊಳಿಸಿಕೊಡಲು ಆದೇತೇ ಎಂದು ಕೇಳಿದರು. ಅಷ್ಟು ದೊಡ್ಡ ಬೇಡಿಕೆಯನ್ನು ಕೇಳಿ ಇಲ್ಲಿಯ ತಯಾರಕರು ಸಂಭ್ರಮಗೊಂಡರೂ, ಆ ಪ್ರಮಾಣದಲ್ಲಿ ಸಾಧ್ಯವೇ ಎಂದು ದಿಗ್ಭ್ರಾಂತಗೊಂಡು, ತಮಗೆ ಅದು ಸಾಧ್ಯವಾಗಲಾರದು ಅಂದರು. ಯಾಕೆಂದು ಕೇಳಿದ್ದಕ್ಕೆ ಅವರು, ''ನೋಡಿ, ನಮ್ಮ ದೇಶದಲ್ಲಿ ನೀವು ಕೇಳಿದಷ್ಟು ಸಂಖ್ಯೆಯಲ್ಲಿ ಸೂರೇಕಾಯಿಗಳೇ ಬೆಳೆಯುವುದಿಲ್ಲ'' ಎಂದು ಉತ್ತರಿಸಿದರು. ಆಗ ಆ ಬಿಸಿನೆಸ್ ಮಂದಿ,'' ನೀವು ಅದನ್ನು ಮರದಿಂದ ತಯಾರಿಸಲು ಸಾಧ್ಯವಿಲ್ಲವೇ?'' ಎಂದು ಕೇಳಿದಾಗ, ತಯಾರಕರು ಹೇಳಿದರು, ''ಆಗ ಅದು ಸಿತಾರ್ ಆಗುವುದಿಲ್ಲ,''



ಅಂತಂದು ಮುಂದುವರಿಸಿ, ''ನಿಮಗೆ ಅವುಗಳ ಅಗತ್ಯ ಆ ಪ್ರಮಾಣದಲ್ಲಿದ್ದರೆ, ಕೆಲವು ವರ್ಷ ಕಾಯುವಿರಾ?'' ಎಂದು ಕೇಳಿದರು. ಆಗ, ಆ ಬಿಸಿನೆಸ್‌ನವರು '' ಸಾಧ್ಯವಿಲ್ಲ. ಏಕೆಂದರೆ, ಈ ಮೂರು ವರ್ಷಗಳಲ್ಲಿ ಸಿತಾರ್ ಅನ್ನುವುದು ಫ್ಯಾಶನ್ ಪ್ರಪಂಚದಿಂದ ಮಾಯವಾಗುತ್ತದೆ, ಬೇಡಿಕೆ ಕಳೆದುಕೊಳ್ಳುತ್ತದೆ.'' ಅಂತ ಪ್ರತಿಕ್ರಿಯಿಸಿದರು.

ಆದ್ದರಿಂದಲೆ, ''ಕಾಲ''ವನ್ನು ಒಬ್ಬೊಬ್ಬರು ಒಂದೊಂದು ರೀತಿಯಿಂದ ಅರ್ಥಮಾಡಿಕೊಳ್ಳುತ್ತಾರೆ. ನಾನು ಇದುವರೆಗೆ ಸಂಗೀತದಲ್ಲಿ ''ರಾಗ'' ಎನ್ನುವುದನ್ನು ಕೇವಲ ಮೂರು-ನಾಲ್ಕು ಪ್ರಕಾರಗಳಲ್ಲಿ ಗುರುತಿಸುತ್ತಾ ಭೌತಿಕ ಕಾಲ, ಮಾನಸಿಕ ಕಾಲ, ಸಾಮಾಜಿಕ ಕಾಲ, ಸಂಗೀತದ ಕಾಲ ಎಂಬುದರ ಬಗ್ಗೆ ಮಾತನಾಡಿದ್ದೇನೆ. ಆದರೆ, ಅವತ್ತು ಶಿವಶಿಶ್ವನಾಥನ್ ಅವರು ಕಾಲದ ಇನ್ನೂ ಅನೇಕ ಪ್ರಕಾರಗಳನ್ನು ನಮ್ಮ ಅರಿವಿಗೆ ತಂದಿದ್ದಾರೆ. ಅವುಗಳ ಕುರಿತು ಗಂಭೀರವಾದ ಆಲೋಚನೆ ಅಗತ್ಯ.

(ಸಂಗ್ರಹ - ಅನುವಾದ : ಕೆ.ಎಸ್. ಪೂರ್ಣಿಮಾ)


## ಅಕ್ಷರ ಪ್ರಕಾಶನ : ಹೊಸ ಪುಸ್ತಕಗಳು

**ವಿಶ್ವಾತ್ಮಕ ದೇಶಭಾಷೆ**

ಅಕ್ಷರ ಚಿಂತನ ಮಾಲೆ - ಕನ್ನಡವನ್ನು ಕುರಿತ ಚಿಂತನಬರಹಗಳು
ಷೆಲ್ಡನ್ ಪೊಲಾಕ್, ಅನು: ಅಕ್ಷರ ಕೆ.ವಿ.
ರೂ. ೧೦೦

**ಕಿಟಕಿ ಕನ್ನಡಿಯಾದಾಗ**

ಕನ್ನಡ-ತಮಿಳುಗಳ ಮಿಲನ-ಮುಖಾಮುಖಿ ಕುರಿತು
ಟಿಆರೆಸ್ ಶರ್ಮ
ರೂ. ೧೦೦

**ಬೆಳಕಾಯಿತು ಕರ್ನಾಟಕ**

ಕರ್ನಾಟಕಕ್ಕೆ ವಿದ್ಯುಚ್ಛಕ್ತಿಯ ಪ್ರವೇಶವಾಗಿ ಶತಮಾನ ತುಂಬಿರುವ ಸಂದರ್ಭದಲ್ಲಿ ಆ ರೋಚಕ ಇತಿಹಾಸವನ್ನು ದಾಖಲಿಸುವ ಪ್ರಯತ್ನ ಈ ಪುಸ್ತಕ. ಸಂಬಂಧಿಸಿದ ಎಲ್ಲ ತಾಂತ್ರಿಕ ಮಾಹಿತಿಗಳನ್ನು ಸುಮಾರು ೩೫೦ ಪುಟಗಳ ವ್ಯಾಪ್ತಿಯಲ್ಲಿ ಈ ಕೃತಿ ಆಕರ್ಷಕವಾಗಿ ನಿರೂಪಿಸುತ್ತದೆ. ಲೇಖಕ: ಗಜಾನನ ಶರ್ಮ. ಬೆಲೆ: ರೂ. ೩೭೫

# ಭಾರತದಲ್ಲಿ ಆಧುನಿಕ ವಿಜ್ಞಾನದ ಭೂತ-ವರ್ತಮಾನ-ಭವಿಷ್ಯ

ಶಿವ ವಿಶ್ವನಾಥನ್

ಭಾರತೀಯ ಸ್ವಾತಂತ್ರ್ಯ ಚಳವಳಿಯ ಕಾಲ ಭಾರತೀಯರು ಅಸೀಮ ಆತ್ಮವಿಶ್ವಾಸದಿಂದ ತುಂಬಿಕೊಂಡಿದ್ದ ಕಾಲವೂ ಆಗಿತ್ತು. ಆಗ, ವಿಶೇಷವಾಗಿ ೧೯೦೫ ಹಾಗೂ ೧೯೪೭ರ ನಡುವೆ ನಡೆದ ಚರ್ಚೆಗಳು ಹೊಸ ಭಾರತದ ರಾಷ್ಟ್ರೀಯತೆಯ ಸ್ವರೂಪವನ್ನಷ್ಟೆ ಅಲ್ಲದೆ ಅದು ಅಳವಡಿಸಿಕೊಳ್ಳಬೇಕಾದ ವಿಜ್ಞಾನ ನೀತಿಯ ಬಗ್ಗೆಯೂ ಗಾಢವಾದ ಚಿಂತನೆಯನ್ನು ನಡೆಸಿದವು. ಈ ಚಿಂತನೆಯಲ್ಲಿ ಕಳೆದ ಕಾಲದ ಬಗೆಗೆ ಅತ್ಯುತ್ಕೃಷ್ಟ ಗ್ರಹಿಕೆಯಿತ್ತು, ಬರಲಿರುವ ಕಾಲದ ಬಗೆಗೆ ಅಸಾಧಾರಣ ದರ್ಶನ ಶಕ್ತಿಯಿತ್ತು. 'ನಮ್ಮ ಆಂದೋಲನದ ನಿಜಗುರಿ ಭಾರತವನ್ನು ಬ್ರಿಟಿಷರಿಂದ ಬಿಡುಗಡೆಗೊಳಿಸುವುದಕ್ಕಿಂತ ಮುಖ್ಯವಾಗಿ ಆಧುನಿಕತೆಯ ದಾಸ್ಯದಿಂದ ಬ್ರಿಟಿಷರನ್ನು ಬಿಡಿಸುವುದೆ ಆಗಿದೆ' ಎಂಬ ಮೊಹನದಾಸ ಕರಮಚಂದ ಗಾಂಧಿಯ ಹೇಳಿಕೆ ಇಂಥ ಧೀಮಂತಿಕೆಯ ಪರಮೋಜ್ವಲ ನಿದರ್ಶನವಾಗಿದೆ.

ಇಂತಸ ಆತ್ಮಸ್ಥೈರ್ಯ ಮತ್ತು ಒಂದು ಸತ್ಯವನ್ನು ಮನಗಾಣಿಸಿಕೊಡುತ್ತದೆ. ನಾವಿಂದು ನಮ್ಮ ವಸಾಹತುಶಾಹಿ ಕಾಲಘಟ್ಟವನ್ನು ಏಕಮುಖಿಯಾಗಿ ಸಾರಾಸಗಟಾಗಿ ದಬ್ಬಾಳಿಕೆ ಕಾಲವೆಂದೆ ತಿಳಿಯುತ್ತೇವೆ; ನಿರ್ವಸಾಹತೀಕರಣಗೊಳ್ಳುವುದೆ ನಮ್ಮ ಇಂದಿನ ತುರ್ತು ಅಗತ್ಯವೆಂದು ವಾದಿಸುತ್ತೇವೆ. ಆದರೆ, ಸೋಜಿಗದ ಸಂಗತಿಯೆಂದರೆ, ಸ್ವಾತಂತ್ರ್ಯಪೂರ್ವ ಯುಗದ ನಮ್ಮ ಹಿರಿಯರಿಗೆ ವಸಾಹತುಶಾಹಿಯೆ ಅತಿದೊಡ್ಡ ಸಮಸ್ಯೆಯೆಂದಾಗಲಿ ರಾಜಕೀಯ ಸ್ವಾತಂತ್ರ್ಯವೊಂದೆ ಎಲ್ಲ ಸಮಸ್ಯೆಗಳಿಗೂ ಪರಿಹೀರವೆಂದಾಗಲಿ ತೋರಿರಲಿಲ್ಲ. ಅವರು ಒಂದೆಡೆ ಅದರ ವಿರುದ್ಧ ಹೋರಾಡುತ್ತಿದ್ದುದೇನೋ ಹೌದು; ಆದರೆ ಆ ಹೋರಾಟ ಹಲವು ಮುಖಗಳನ್ನು ಹೋಂದಿತ್ತು. ವಸಾಹತುಶಾಹಿ ಒಂದು ಸ್ತರದಲ್ಲಿ ಭಾರತವನ್ನು ದಮನಕ್ಕೀಡು ಮಾಡುತ್ತಿದ್ದಂತೆಯೆ ಇನ್ನೊಂದು ಸ್ತರದಲ್ಲಿ ಅದು ಭಾರತಕ್ಕೆ ಹೊಸ ದಾರಿಗಳನ್ನು



ತೆರೆಯಲೂಬಹುದು ಎಂದು ನಮ್ಮ ನೇತಾರರು ತಿಳಿದಿದ್ದರು. ವಿದೇಶಿ ಆಳ್ವಿಕೆಯ ಬಹುಮುಖ್ಯ ಬಳುವಳಿಗಳಲ್ಲೊಂದಾದ ಆಧುನಿಕ ಪಾಶ್ಚಿಮಾತ್ಯ ವಿಜ್ಞಾನದ ವಿಷಯದಲ್ಲೂ ಅವರು ಇದೇ ರೀತಿಯ ಬಹು ಆಯಾಮಗಳ ಅನುಸಂಧಾನದ ಮಾರ್ಗವನ್ನು ಅನುಸರಿಸಿದರು.

ಉದಾಹರಣೆಗೆ, ಆ ವಿಜ್ಞಾನ ಮಾದರಿಯನ್ನು ಏಕರಾಶಿಯೆಂಬಂತೆ ಆಮದು ಮಾಡಿಕೊಂಡು ಇಡಿಯಿಡಿಯಾಗಿ ಹೂಡುವುದರ ಬದಲು, ಅದನ್ನು ಭಾರತದ ವಿಶಿಷ್ಟ ಸಂದರ್ಭದಲ್ಲಿ ಜಗ್ಗಿಸಿ ಕೊಂಕಿಸಿ ಅಳವಡಿಸಿಕೊಳ್ಳಬೇಕು; ಆಮುಲಕ ಅದರ ಹೋಸತಾದ ಹಾಗೂ ಹೆಚ್ಚು ಅರ್ಥಪೂರ್ಣವಾದ ಅವತರಣಿಕೆಯೊಂದನ್ನು ಸೃಷ್ಟಿಸಬೇಕು ಏನ್ನುವುದು ಆಗಿನ ಅನೇಕ ನಾಯಕರ ಕನಸಾಗಿತ್ತು. ಈ ಹಂಬಲದ ತೀವ್ರತೆ ಎಷ್ಟಿತ್ತೆಂದರೆ ಬ್ರಿಟಿಷರೂ ಸೇರಿದಂತೆ ಅನೇಕ ಪಾಶ್ಚಿಮಾತ್ಯರೂ ಕೂಡ ಭಾರತವನ್ನು ಆಧುನಿಕ ವಿಜ್ಞಾನದ ವಿಷಯದಲ್ಲಿ ಹೊಚ್ಚಹೊಸ ಪ್ರಯತ್ನಗಳನ್ನು ನಡೆಸಲು ಅತ್ಯಂತ ಸೂಕ್ತವಾದ ಪ್ರಯೋಗ ಕ್ಷೇತ್ರವೆಂದೆ ನಂಬಿದ್ದರು. ಅವರ ಮಟ್ಟಿಗೆ, ಇಂಗ್ಲೆಂಡು ಜರ್ಮನಿ ಇತ್ಯಾದಿ ಐರೋಪ್ಯ ರಾಷ್ಟ್ರಗಳು ಆ ಕಾಲಕ್ಕಾಗಲೇ ಆಧುನಿಕ ವಿಜ್ಞಾನದ ಮಾದರಿಯನ್ನು ಅಂಥವಾಗಿ ಪ್ರಶ್ನಾತೀತವಾಗಿ ಒಪ್ಪಿಕೊಂಡುಬಿಟ್ಟದ್ದವು; ಇನ್ನು ಭಾರತ ಮಾತ್ರ ಅದನ್ನು ಪರೀಕ್ಷೆಗೊಳಪಡಿಸುವಂತಹ ಮತ್ತು ಪರ್ಯಾಯಗಳನ್ನು ಸೂಚಿಸುವುದರ ಮೂಲಕ ಅದಕ್ಕೆ ಹೋಸ ಸಾಧ್ಯತೆಗಳನ್ನು ತೇರಿಸಿ ಕೊಡುವಂತಹ ಶಕ್ತಿಯನ್ನು ಉಳಿಸಿಕೊಂಡಿತ್ತು; ಹಾಗೆಯೆ, ಆ ಮೂಲಕ ಇಡಿಯ ಜಗತ್ತಿಗೆಯೇ ಭವಿಷ್ಯದ ನವರೂಪಗಳ್ನುಕಾಣಿಸಿಕೊಡುವ ಅನನ್ಯ ಸಾಮರ್ಥ್ಯವನ್ನು ಹೊಂದಿತ್ತು. ಹೀಗೆ, ನಮ್ಮ ಪೂರ್ವಿಕರ ಮನೋಧರ್ಮ ಅತ್ಯಂತ ಕ್ರಿಯಾಶೀಲವೂ ದ್ವಂದ್ವಸಮೃದ್ಧವೂ ಆಗಿದ್ದು, ಅದರಲ್ಲಿ ಅಪಾರವಾದ ಕನಸುಗಾರಿಕೆಯೂ ವಾಸ್ತವಪ್ರಜ್ಞೆಯೂ ಬೆಸೆದುಕೊಂಡಿದ್ದವು.

ಇದಕ್ಕೆ ನಿದರ್ಶನವಾಗಿ ಆ ಯುಗದ ಕೆಲವು ಪ್ರಮುಖ ವ್ಯಕ್ತಿತ್ವಗಳನ್ನು ಚರ್ಚೆಗಳನ್ನೂ ಸ್ಥೂಲವಾಗಿ ಪರಿಶೀಲಿಸಬಹುದು.

ಆನಂದ ಕುಮಾರಸ್ವಾಮಿ ಭಾರತೀಯ ಸ್ವಾತಂತ್ರ್ಯ ಚಳವಳಿಯ ಕಾಲದ ಬಹುಮುಖ್ಯ ವ್ಯಕ್ತಿ-ಪ್ರತೀಕಗಳಲ್ಲೊಬ್ಬರಾಗಿದ್ದರು. ಇಂದಿನ ಇತಿಹಾಸ ಗ್ರಂಥಗಳು ಅವನ್ನು ಶ್ರೇಷ್ಠ ಕಲಾಮೀಮಾಂಸಕರೆಂದದು ಸೌಂದರ್ಯ ಶಾಸ್ತ್ರಜ್ಞರೆಂದು ಗುರುರತಿಸುವಲ್ಲಿ ಅವರ ಇನ್ನೊಂದು ಮುಖವನ್ನು ಸಂಪೂರ್ಣ ಮರೆತುಬಿಡುತ್ತವೆ. ಕುಮಾರಸ್ವಾಮಿ ಶ್ರೇಷ್ಠ ಭೂಗರ್ಭಶಾಸ್ತ್ರಜ್ಞರೂ ಆಗಿದ್ದರು. ಆ ವಿಜ್ಞಾನಶಾಖೆಯಲ್ಲಿ ಡಿ.ಎಸ್. ಸಿ. ಯಂತಹ ಉನ್ನತ ಪದವಿಯನ್ನು ಪಡೆದಿದ್ದ ಅವರು ಶ್ರೀಲಂಕಾದ ಖನಿಜ

ಸರ್ವೇಕ್ಷಣಾ ಇಲಾಖೆಯ ಮುಖ್ಯ ನಿರ್ದೇಶಕರಾಗಿದ್ದು, ಅಲ್ಲಿ ಅನೇಕ ಅಮೂಲ್ಯ ನಿಕ್ಷೇಪಗಳನ್ನು ಪತ್ತೆಹಚ್ಚಿದವರಾಗಿದ್ದರು.

ಆನಂದ ಕುಮಾರಸ್ವಾಮಿಯವರಿಗೆ ಕಲೆ ಮತ್ತು ವಿಜ್ಞಾನಗಳು ಭಿನ್ನ ಜ್ಞಾನರೂಪಗಳಾಗಿರಲಿಲ್ಲ. ಅವರ ತಿಳಿವಳಿಕೆಯಲ್ಲಿ ಕಲಾವಿದನೊ ವಿಜ್ಞಾನಿಯೊ ಇತರರಿಗಿಂತ ವಿಶಿಷ್ಟನೂ ಉನ್ನತನೂ ಆದ ವ್ಯಕ್ತಿಯೇನಾಗಿರಲಿಲ್ಲ; ಬದಲಾಗಿ, ಪ್ರತಿಯೋರ್ವ ಮನುಷ್ಯನೂ ತನ್ನ ತನ್ನ ನಿತ್ಯಕಾಯಕದಲ್ಲಿ ತೋರುವ ವಿಶೇಷ ಪ್ರತಿಭೆಯಿಂದಾಗಿ ಒಬ್ಬ ಕಲಾವಿದನೋ ವಿಜ್ಞಾನಿಯೊ ಆಗಿರುವವನಾಗಿದ್ದ. ಅವರ ಪ್ರಕಾರ ಸಂಗೀತದ ಸೃಷ್ಟಿಯಿಂದ ಹಿಡಿದು ವಿಮಾನಗಳ ನಿರ್ಮಾಣದವರೆಗೆ ಎಲ್ಲ ಕುಶಲಕರ್ಮಗಳೂ ಕಲಾಪೂಪಗಳಾಗಿದ್ದವು. ವಿಜ್ಞಾನದಲ್ಲಿ ಅಷ್ಟೆಲ್ಲ ಆಳವಾದ ಪರಿಶ್ರಮವನ್ನೂ ಪ್ರೀತಿಯನ್ನೂ ಹೆಂದಿದ್ದ ಕುಮಾರಸ್ವಾಮಿ ಅದರ ಸಮಸ್ಯಾತ್ಮಕತೆಯನ್ನೂ ಬಹಳ ಸರಿಯಾಗಿ ಬಹಳ ಮುಂಚಿತವಾಗಿ ಗ್ರಹಿಸಿದ್ದರು. ಈ ವಿಷಯವನ್ನು ಕುರಿತು ಅವರು ಅನೇಕ ಪ್ರಖರ ಲೇಖನಗಳನ್ನು ಬರೆದರು; ಪಿ.ಸಿ. ರೇರವರಂತಹ ಪ್ರತಿಷ್ಠಿತ ವಿಜ್ಞಾನಿಯೊಡನೆ ಸುದೀರ್ಘ ಸಂವಾದವನ್ನು ನಡೆಸಿದರು. ವಿಜ್ಞಾನದ ವಿಲಕ್ಷಣ ಶಕ್ತಿಯನ್ನು ಕುರಿತು ಅವವು ಹೇಳಿದ ಒಂದು ಮಾತು ಹೀಗಿತ್ತು: ನಮ್ಮ ಆಧುನಿಕ ತಂತ್ರಜ್ಞಾನದ ದುರಂತಮುಖಿ ವಿಪಯಾಜನವೆಂದರೆ, ಅದು ಜಾನಪದ ಹಾಡುಗಳನ್ನು ಸಂಗ್ರಹಿಸಿ ಸಂರಕ್ಷಿಸಿಡಲು ಸಹಾಯ ಮಾಡುತ್ತಿರುವಗಳಿಗೆಯಲ್ಲಿಯೆ ಜಾನಪದ ಪಾಡುಗಾರರನ್ನು ನಾಶಮಾಡುತ್ತಿರುತ್ತದೆ. ಇನ್ನೊಂದು ಸನ್ನಿವೇಷದಲ್ಲಿ ಅವರು ಹೇಳಿದ್ದು ಇದು: ಒಂದು ಪಕ್ಷ ದೇವರು ಇಂದು ಭೂಮಿಗೆ ಬಂದು, ಆಧುನಿಕ ಪಾಶ್ಚಿಮಾತ್ಯರಿಗೆ 'ಎಲ್ಲಿ, ನಾನು ಸೃಷ್ಟಿಸಿ ಸಲಹಿದ್ದ ದಕ್ಷಿಣ ಅಮೆರಿಕೆಯ ಮಾಯಾ ಹಾಗೂ ಇನ್‌ಕಾ ಜನಾಂಗಗಳವರೂ ಆಸ್ಟ್ರೇಲಿಯಾದ ಮೂಲನಿವಾಸಿಗಳೂ ಕಾಣುತ್ತಿಲ್ಲವಲ್ಲ ಎಲ್ಲಿ?' ಎಂದು ಕೇಳಿದ್ಲ್ಲಿ, ಪಾಶ್ಚಿಮಾತ್ಯರು ದೇವರನ್ನು ಎಲ್ಲಿಗೆ ಕರೆದೊಯ್ಯಬಹುದು? – ವಸ್ತುಸಂಗ್ರಹಾಲಯಕ್ಕಲ್ಲದೆ ಇನ್ನೆಲ್ಲಿ?

ಕುಮಾರಸ್ವಾಮಿಯವರ ದೃಷ್ಟಿಯಲ್ಲಿ ವೈಜ್ಞಾನಿಕ ಪ್ರಯೋಗಾಲಯ ಮತ್ತು ವಸ್ತುಸಂಗ್ರಹಾಲಯಗಳೆರಡೂ ಅವಳಿ-ಜವಳಿಗಳು; ಎರಡೂ ಆಧುನಿಕ ವಿಜ್ಞಾನದ ಹಿಂಸಾತ್ಮಕತೆಯ ವಿಭಿನ್ನ ಮುಖಗಳು. ಒಂದೆಡೆ ಪ್ರಯೋಗಾಲಯ ನೈತಿಕತೆಯ ಸ್ಪರ್ಶವಿಲ್ಲದ ನಿರ್ವಾತವೊಂದರಲ್ಲಿ ಪ್ರಾಣಿಗಳನ್ನೂ ಮನುಷ್ಯರನ್ನೂ ಜ್ಞಾನ ಸಂಪಾದನೆಯ ಹೆಸರಿನಲ್ಲಿ ಹಿಂಸೆಗೀಡುಮಾಡುತ್ತಿದ್ದರೆ ಇನ್ನೊಂದೆಡೆ ವಸ್ತು ಸಂಗ್ರಹಾಲಯ ಅಂಥ ಹಿಂಸೆಗೆ ಬಲಿಯಾದವರನ್ನು ವಸ್ತುಗಳನ್ನಾಗಿ ಪರಿವರ್ತಿಸಿ ಪ್ರದರ್ಶನಕ್ಕಿಡುತ್ತದೆ. ಮೊದಲನೆಯದು ಚಾರಿತ್ರ್ಯಕ್ಕಿಂತ ಜ್ಞಾನ ಮುಖ್ಯ ಎಂದು



ಪರೋಕ್ಷವಾಗಿ ವಾದಿಸಿದರೆ ಎರಡನೆಯದು ಅಂಥ ಜ್ಞಾನ ಸಂಗ್ರಹದ ರೀತಿಯನ್ನೆ ಚರಿತ್ರೆಯ ನೀತಿಯೆಂದು ಪ್ರತಿಪಾದಿಸುತ್ತದೆ. ಯಾವುದೆ ಮ್ಯೂಸಿಯಮಿನಲ್ಲಿ ವಸ್ತುಗಳನ್ನು ಜೋಡಿಸಿಡುವ ಕ್ರಮವೆ ಇದನ್ನು ಬಯಲು ಮಾಡುವಂಥದು. ಅಲ್ಲಿ ವಸ್ತುಗಳನ್ನು, ಮಾನವ ಕುಲ ಸಾಗಿಬಂದ ದಾರಿಯ ಪ್ರತಿನಿಧಕರೂಪವೆನ್ನುವಂತಹ ಸರಣಿಯಲ್ಲಿ ಜೋಡಿಸಿಡಲಾಗುತ್ತದೆ. ಉದಾಹರಣೆಗೆ, ಮೊದಲು ಪುರಾತನ ಕಾಲದ ಬಡಿಗೆಯೊಂದು, ಅದರ ಪಕ್ಕ ಮಧ್ಯಯುಗದ ಬಿಲ್ಲೊಂದು, ಅದರ ಪಕ್ಕ ಆಧುನಿಕ ಕಾಲದ ಫಿರಂಗಿಯೊಂದು, ಅದರ ಪಕ್ಕ ಅತ್ಯಾಧುನಿಕ ಕ್ಷಿಪಣಿಯೊಂದು – ಹೀಗೆ ಈ ವಸ್ತುಗಳ ಅನುಕ್ರಮಣಿಕೆ ಕಾಲಾನುಕ್ರಮಣಿಕೆಯೂ ಆಗಿ, ಆ ಕಾಲಾನುಕ್ರಮಣಿಕೆ ಕುಲಗಳ ತರತಮದ ಅನುಕ್ರಮಣಿಕೆಯೂ ಆಗಿ ಸ್ಥಾಪಿತವಾಗತ್ತದೆ. ವಸ್ತುಗಳ ಮಟ್ಟಿಗೆ ಇಂಥ ಕಾಲರೂಪಸರಣಿ ಸರಜವಾಗಿಯೊ, ತಾರ್ಕಿಕವಾಗಿಯೊ ಕಾಣಬಹುದು. ಸರಿ, ಎಮ್ಮೆ ಮಾನವ ಆಯುಧಗಳಾಗಿ ಕಲ್ಲುಕೋಲುಗಳನ್ನು ಬಳಸುತ್ತಿದ್ದು, ಮುಂದೆ ಅವುಗಳ ಜಾಗದಲ್ಲಿ ಬಿಲ್ಲು-ಫಿರಂಗಿ-ಕ್ಷಿಪಣಿಗನ್ನು ಆವಿಷ್ಕರಿಸಿಕೊಂಡಿದ್ದು ಅವನ ವಕಾಸ ಪ್ರಕ್ರಿಯೆಯನ್ನು ಸೂಚಿಸುವ ಮುಗ್ಧವಾದೊಂದು ಕಥಾನಕವಾಗಿ ತೋರಬಹುದು.

ಆದರೆ ಇದೆ ಕಥಾನಕ ಇಂಥ ವಿಭಿನ್ನ ಕಾಲಘಟ್ಟಘಲ ನಡುವೆ ತರತಮದ ಕಲ್ಪನೆಯನ್ನು ತರಲಾರಂಭಿಸಿದಾಕ್ಷಣ ಅದರ ಮೊದಲ ಮುಗ್ಧತೆಯೆಲ್ಲ ಸೂಕ್ಷ್ಮವೂ ಅಗೋಚರವೂ ಆದ ಕ್ರೌರ್ಯವಾಗಿ ಮಾರ್ಪಡುತ್ತದೆ. ಉದಾಹರಣೆಗೆ, ಒಬ್ಬ ಆದಿವಾಸಿಯೂ ಒಬ್ಬ ಆಧುನಿಕನೂ ಒಟ್ಟಿಗೆ ಮ್ಯೂಸಿಯಮೊಂದರ ವಸ್ತುಗಳನ್ನು ರೀಕ್ಷಿಸುತ್ತಿದ್ದಲ್ಲ, ಅವುಗಳ ಮುಖಾಂತರ ಅವರು ಪರಸ್ಪರರನ್ನೂ ತಮ್ಮನ್ನೂ ವೀಕ್ಷಿಸಿಕೊಳ್ಳುತ್ತಿರುತ್ತಾರೆ. ಆಧುನಿಕನಿಗೆ ತಾನೆ ವರ್ತಮಾನದ ಪ್ರತೀಕವೆಂದೂ, ಪಕ್ಕದಲ್ಲಿ ನಿಂತಿರುವ ಆದಿವಾಸಿ ತಾನು ದಾಡಿಬಂದ ಭೂತಕಾಲದ ಪ್ರೀಕವೆಂದೂ ಅನಿಸುತ್ತಿದೆ. ಆದಿವಾಸಿಗೆ ತಾನು ವರ್ತಮಾನದ ಲೆಕ್ಕದಲ್ಲಿ ತುಂಬ ಹಿಂದುಳಿದಿದ್ದೇನೆಂದೂ, ತನ್ನ ಬಳಿ ನಿಂತಿರುವ ಆಧುನಿಕ ತಾನು ಭವಿಷ್ಯದಲ್ಲಿ ಅನುಸರಿಸಬೇಕಾದ ಮಾದರಿಯೆಂದೂ ಅನಿಸಬಹುದು. ಇಂಥ ಸರಳ ಅನಿಸಿಕೆಗಳ ವಲಯದಲ್ಲಿ ಅಧಿಕಾರಶಕ್ತಿಯ ಪ್ರವೇಶವಾದಾಕ್ಷಣ ಅಪಾಯಕಾರಿ ವಿದ್ಯಮಾನಗಳು ಘಟಿಸತೊಡಗುತ್ತವೆ. ಈಗಾಗಲೆ ಘಟಿಸಿರುವಂತೆ, ಆಧುನಿಕ ತನ್ನ ಜ್ಞಾನ ದೇವರು ತನಗೆ ಕೊಟ್ಟ ವರವೆಂದೂ, ಉಳಿದವರ ಅಜ್ಞಾನವನ್ನು ತೊಡೆದು ಅವರನ್ನು ಅಭಿವೃದ್ಧಿಗೊಳಿಸುವುದು ದೇವರು ತನಗೆ ನಿಗದಿ ಮಾಡಿದ ಕರ್ತವ್ಯವೆಂದೂ ತಿಳಿದು, ಅನ್ಯರನ್ನೆಲ್ಲ ತನ್ನ ಅಚ್ಚಿನಲ್ಲಿಯೆ ಎರಕ ಹೊಯ್ಯಲಾರಂಭಿಸುತ್ತಾನೆ. ತನ್ನ ಕಾಯಕ ಮೂಲಭೂತವಾಗಿ ಕರುಣಾಮಯವಾದದ್ದೆಂದೂ ಅದರಲ್ಲಿ ಹಿಂಸೆಯನ್ನು ಬಳಸಬೇಕಾಗಿಬಂದಲ್ಲಿ

ಅದು ಅನಿವಾರ್ಯವೆಂದೂ ವಾದಿಸುತ್ತಾನೆ. ಜ್ಞಾನ-ರಾಜಕಾರಣ-ಹಣ-ಶಸ್ತ್ರಾಸ್ತ್ರಗಳೆಲ್ಲವೂ ಸಂಗಮಿಸಿರುವ ಇಂಥ ಅಧಿಕಾರದ ಎದುರು ಆದಿವಾಸಿಗೆ ಹೆಚ್ಚು ಆಯ್ಕೆಗಳು ಉಳಿಯುವುದಿಲ್ಲ. ಒಂದೊ ಆತ ಆಧುನಿಕನ ಪ್ರಕೃತಿದೇವತೆಗೆ ತಲೆಬಾಗಬೇಕು, ಇಲ್ಲ ಸಂಗ್ರಹಾಲಯವನ್ನೊ ರಕ್ಷಿತ ವಲಯವನ್ನೆ ಸೇರಿ, ಅಲ್ಲಿ ಆಧುನಿಕರು 'ಮಾನವ ಶಾಸ್ತ್ರ'ವೆಂದು ಕರೆಯುವ ಇನ್ನೊಂದು ವಿಜ್ಞಾನ ಶಾಖೆಗೆ ನಿತ್ಯ ಕುತೂಹಲದ ವಸ್ತುವಾಗಬೇಕು. ಒಂದೆಡೆ ಆಧುನಿಕ ವಿಜ್ಞಾನ ಆತನ ಭವಿಷ್ಯವನ್ನು ನಿಶಗೊಳಿಸಿದರೆ ಇನ್ನೊಂದೆಡೆ ಆಧುನಿಕ ಇತಿಹಾಸ ಆತನ 'ಭೂತ'ವನ್ನು ಸಂರಕ್ಷಿಸಿಡುತ್ತದೆ. ಹಾಗೆಂದೆ ಕುಮಾರಸ್ವಾಮಿ ಹೇಳಿದ್ದು – ವಸ್ತುಸಂಗ್ರಹಾಲಯಗಳು ಶವಾಗಾರಗಳಿದ್ದಂತೆ; ಅಲ್ಲಿ ಸದಾಕಾಲ ಸಾವಿನ ವಾಸನೆಯೂ ತುಂಬಿರುತ್ತವೆ. ಆಧುನಿಕ ವಿಜ್ಞಾನದಲ್ಲಿ ಮುಗ್ಧತೆಯ ಲವಲೇಶವೂ ಇಲ್ಲ. ಮ್ಯೂಸಿಯಮ್‌ಗಳು ಅನ್ಯರನ್ನು ಪ್ರದರ್ಶಿಸುವಷ್ಟೆ ವಿಜ್ಞಾನದ ಜನಾಂಗಹತ್ಯೆಯ ಮೂಲಗುಣವನ್ನೂ ಪ್ರತಿಫಲಿಸುತ್ತವೆ.

ಅವರು ಮುಂದುವರೆದು ಹೇಳುತ್ತಾರೆ – ಭಾರತೀಯ ಸ್ವಾತಂತ್ರ್ಯ ಚಳವಳಿ ಒಂದೆಡೆ ಮ್ಯೂಸಿಯಮ್‌ಗಳ ಪರಿಕಲ್ಪನೆಯ ವಿರುದ್ಧವಾಗಿಯೂ ಹೋರಾಡಬೇಕು. ವಿಪರ್ಯಾಸವೆಂದರೆ, ಇದೆ ಆನಂದ ಕುಮಾರಸ್ವಾಮಿ ತಮ್ಮ ಜೀವನದ ಕೊನೆಯ ಭಾಗವನ್ನು ಅಮೆರಿಕೆಯ ಪ್ರತಿಷ್ಠಿತ ಬಾಸ್ಟನ್ ಮ್ಯೂಸಿಯಮ್‌ನ ಮುಖ್ಯಾಧಿಕಾರಿಯಾಗಿ ಕಳೆದರು. ಇದು ಅವರ ವಾದದ ದೌರ್ಬಲ್ಯದ ಕುರುಹೆಂದೋ, ಇತಿಹಾಸ ಅವರ ವಿರುದ್ಧ ತೀರಿಸಿಕೊಂಡ ಸೇಡೊಂದೋ ಕಾಣಬಹುದು. ಆದರೆ ಈ ಚರ್ಚೆಯ ಮುಖ್ಯ ಉದ್ದೇಶ ಈ ರೀತಿ ವ್ಯಕ್ತಿಗಳನ್ನೂ ವಿದ್ಯಮಾನಗಳನ್ನೂ ಏಕಪಾರ್ಶ್ವಿಕ ವಾಗಿ ಗ್ರಹಿಸಿ ಅವರ/ಅವುಗಳ ಬಗೆಗೆ ಸರಳೀಕೃತವಾದ ಮೌಲ್ಯನಿರ್ಣಯಗಳನ್ನು ಮಾಡುವುದಲ್ಲ. ಬದಾಗಿ ವಿರಾಟ್ ಪ್ರಕ್ರಿಯೆಗಳಲ್ಲಿ ಅಂತಸ ವೈರುಧ್ಯಗಳನ್ನು ಅನಿವಾರ್ಯ ಸಹಜವೆಂದೆ ತಿಳಿದು ಅವುಗಳ ಇನ್ನೂ ಸೂಕ್ಷ್ಮ ಗ್ರಹಿಕೆಯ ಮೂಲಕ ನಮ್ಮ ಸ್ವಂತ ಪ್ರಜ್ಞೆಯನ್ನು ವಿಸ್ತಾರಗೊಳಿಸಿಕೊಳ್ಳುವುದು ಹಾಗೂ ಆ ಮೂಲಕ ನಮ್ಮ ಕಾಲದ ಸವಾಲುಗಳಿಗೆ ಬಹುಸ್ತರೀಯ ಉತ್ತರಗಳನ್ನು ಕಂಡುಕೊಳ್ಳುವುದು. ಇದನ್ನು ಮರೆತಲ್ಲಿ ನಾವು ನಮ್ಮ ಹಿರಿಯರ ಅನುಭವ ಮತ್ತು ಅನ್ವೇಷಣೆಗಳ ಸಂಕೀರ್ಣ ಸಮೃದ್ಧಿಯನ್ನು ಕಳೆದುಕೊಂಡು, ತಮ್ಮ ಏಕವಾದಿ ಅಟ್ಟಹಾಸದಲ್ಲಿ ತಮ್ಮ ವೈಚಾರಿಕ ದಾರಿದ್ರ್ಯವನ್ನೂ ಮೆರೆಯುವ ಮೂಲಭೂತವಾದಿಗಳ ಮಟ್ಟಕ್ಕೆ ಇಳಿಯುತ್ತೇವೆ. ಸ್ವಾತಂತ್ರ್ಯಪೂರ್ವ ಕಾಲದಲ್ಲಿ ನಮ್ಮ ದೇಶದಲ್ಲಿ ನಡೆದ ಈ ವಿಜ್ಞಾನಸಂಬಂಧಿ ಚಿಂತನೆ ನಿಜಕ್ಕೂ ಅಪಾರ್ವವಾದುದು; ಅಪ್ಪಣ ಭಾರತೀಯವಾಗಿದ್ದೂ ಭಾರತದ ಸೀಮೆಯನ್ನು ದಾಟಿ ವಿಶ್ವಾತ್ಮಕವಾಗಿ ವ್ಯಾಪಿಸಿಕೊಂಡಂಥದ್ದು.



ಮುಂದೆ, ೧೯೧೧ರಲ್ಲಿ ಕುಮಾರಸ್ವಾಮಿಯವರು ಇನ್ನೊಂದು ಘನ ಚರ್ಚೆಯಲ್ಲಿ ಪಾಲ್ಗೊಂಡರು. ಆ ವೇಳೆಗಾಗಲೆ ಭಾರತದಲ್ಲಿ ಆಧುನಿಕ ಪಾಶ್ಚಿಮಾತ್ಯ ವಿಜ್ಞಾನವನ್ನು ಅತ್ಯುತ್ಸಾಹದಿಂದ ಸ್ವಾಗತಿಸುವವರ ದೊಡ್ಡದೊಂದು ದಂಡು ಬೆಳೆದುನಿಂತಿತ್ತು. ಇದಕ್ಕೊಂದು ಉದಾಹರಣೆಯಾಗಿ ರಾಷ್ಟ್ರಸಂಪತ್ತಿನ ಅಭಿವೃದ್ಧಿಯಲ್ಲಿ ವಿಜ್ಞಾನ ಎಷ್ಟೆಲ್ಲ ಮಹತ್ವದ್ದು ಎಂದು ವಾದಿಸುತ್ತ ವಿಜ್ಞಾನಿ ಹರದಯಾಲಾ ಆಗ ಹೇಳಿದ ಮಾತುಗಳನ್ನು ಗಮನಿಸಬಹುದು.

ನಮ್ಮ ಹಳೆಯ ಪವಿತ್ರಕ್ಷೇತ್ರಗಳಲ್ಲಿ ಇಂದು ಉರುವುದಾದರೂ ಏನು? ಬನಾರಸ್‌ನಲ್ಲಿ ಒಂದಿಷ್ಟು ಕೊಬ್ಬಿದ ಗೂಳಿಗಳು, ಬೊಜ್ಜುಹೊತ್ತಿರುವ ಪೂಜಾರಿಗಳು; ಪುರಿಯಲ್ಲಿ ಒಂದಿಷ್ಟು ಕಾಲಾರಾ. ಇದೆಲ್ಲಕ್ಕಿಂತ ಭಿನ್ನವಾಗಿ ನಮಗೆ ಇಂದು ಬೇಕಾದದು ಹೊಸ ವಿಜ್ಞಾನ, ಹೊಸ ವಿಜ್ಞಾನಿ-ಋಷಿಗಳು.

ಇಂಥ ಐತಿಹಾಸಿಕ ಸಂದರ್ಭದಲ್ಲಿ ಆಧುನಿಕ ವಿಜ್ಞಾನ ಮತ್ತೊಂದು ಕೂನಸ್ಸು ಹೆತ್ತಿತು. ಸಂಶ್ಲೇಷಣಾತ್ಮಕ ರಸಾಯನಶಾಸ್ತ್ರ – ಸಂಥೆಟಿಕ್ ಕೆಮಿಸ್ಟ್ರಿ - ವೆಂಬ ಈ ಹೊಸ ವಿಜ್ಞಾನಶಾಖೆಯ ಕುರಿತು ಇನ್ನೊರ್ವ ಪ್ರತಿಭಾನ್ವಿತ ವಿಜ್ಞಾನಿ ಪ್ರಫುಲ್ಲಚಂದ್ರ ರೇ ೧೯೧೧ರಲ್ಲಿ ಪ್ರಕಟಿಸಿದ ಲೇಖನವೊಂದು ಕುಮಾರಸ್ವಾಮಿಯರನ್ನು ತಲ್ಲಣಗೊಳಿಸಿತು. ಅವರು ತಕ್ಷಣ ಆ ವಿಷಯದಲ್ಲಿ ಚರ್ಚೆಯೊಂದನ್ನು ಆರಂಭಿಸಿ ಭಾರತದ ರಾಷ್ಟ್ರೀಯತಾ ಆಂದೋಲನ ಸಂಶ್ಲೇಷಣಾತ್ಮಕ ರಸಾಯನಶಾಸ್ತ್ರದ ವಿರುದ್ಧ ಬಲವಾದ ನಿಲುವನ್ನು ತಾಳಬೇಕೆಂದು ಆಗ್ರಹಿಸಿದರು. ಅವರ ವಾದ ಸರಳವಾಗಿತ್ತು: ಈ ಹೊಸ ರಸಾಯನಶಾಸ್ತ್ರ ಶಾಖೆ ಕೃತಕ ಕ್ರಮಗಳಿಂದ ಉತ್ಪನ್ನಗಳನ್ನು ತಯಾರಿಸುತ್ತದೆ; ಪ್ರಕೃತಿ ಎಂದೂ ಬೆಸೆಯದ ಹಾಗೂ ಬೆಸೆಯಬಾರದೆಂದು ಬಿಟ್ಟಿರುವ ಮೂಲವಸ್ತುಗಳನ್ನು ಬೆಸೆದು ಅಪ್ರಾಕೃತಿಕವಾದ ಸಂಯುಕ್ತ ಪದಾರ್ಥಗಳನ್ನು ಸೃಷ್ಟಿಸುತ್ತದೆ. ಈ ಪ್ರಕ್ರಿಯೆ ಮುಂದುವರೆದರೆ ಅದು ಏಕರೂಪೀಕರಣಕ್ಕೂ ಏಕತಳಿಕೃಷಿಕೂ ಕಾರಣವಾಗುತ್ತದೆ. ಉದಾಹರಣೆಗೆಗ, ಭಾರತದಲ್ಲಿ ಕಂಡುಬರುವ ಕೆಂಪುಬಣ್ಣ - ಜಗತ್ತಿನ ಯಾವುತೆ ಪ್ರತೇಶದಲ್ಲಿಯಂತೆ – ಅಪಾರ ಸೂಕ್ಷ್ಮ ಠಾಯಂತರಗಳನ್ನು ಉಳ್ಳದ್ದು. ಇಲ್ಲಿ ಪ್ರತಿಯೊಂದು ಹಳ್ಳಿಯೂ ಪ್ರತಿಯೊಂದು ಜಾತಿಯೂ ಪ್ರತಿಯೊಂದು ಬಣ್ಣಗಾರ ಕುಟುಂಬವೂ ವಿಶಿಷ್ಟವಾದೊಂದು ನೇಸಲಿನ ಕೆಂಪನ್ನು ಸೃಷ್ಟಿಸುತ್ತದೆ. ಇಂಥಲ್ಲಿ ಕೃತಕ ಬಣ್ಣಗಳನ್ನು ತಯಾರಿಸುವ ಸಂಶ್ಲೇಷಣಾತ್ಮಕ ರಸಾಯನಶಾಸ್ತ್ರವನ್ನು ಪ್ರವೇಷಿಸಲು ಬಿಟ್ಟಲ್ಲಿ, ನಮ್ಮ ಕೆಂಪಿನ ಕೆಂಪುತನವೆ ಮಾಯವಾಗುವುದು ಖಂಡಿತ, ಅದರ ಅನನ್ಯಯ ಠಾಯಾಂತರಗಳೆಲ್ಲ ನಶಿಸಿಹೋಗುವುದು ನಿಶ್ಚಿತ.

ಇದೇ ಲೇಖನದಲ್ಲಿ ಮುಂದೆ ಕುಮಾರಸ್ವಾಮಿಯವರು ವಿಜ್ಞಾನದ

ವ್ಯಾಖ್ಯಾನವನ್ನು ನೀಡುವ ಪ್ರಯತ್ನವನ್ನೂ ಮಾಡುತ್ತಾನೆ. ಆಧುನಿಕ ತಂತ್ರಜ್ಞಾನ ಆಗಷ್ಟೆ ಆವಿಷ್ಕರಿಸಿದ್ದ ಧ್ವನಿಮುದ್ರಿಕೆ – ಗ್ರಾಮಾಫೋನ್ - ಯ ಪ್ರಸ್ತಾಪ ಮಾಡುತ್ತ ಅವರು ಹೇಳುತ್ತಾರೆ; ಗ್ರಾಮಾಫೋನು ಶಬ್ದದ ಪುನರುತ್ಪಾದನೆಯ ಯಾಂತ್ರಿಕ ತಂತ್ರಜ್ಞಾನ ಮಾತ್ರ. ಅದನ್ನು ವಿಜ್ಞಾನವೆಂದು ಒಪ್ಪಿಕೊಳ್ಳಲಾಗುವುದಿಲ್ಲ. ಅದು ಶಬ್ದ-ಧ್ವನಿಗಳನ್ನು ಪ್ರಸರಿಸುವ ಹಾಗೂ ಜನಪ್ರಿಯಗೊಳಿಸುವ ಕಾರ್ಯವನ್ನು ನಿರ್ವಹಿಸಬಲ್ಲುದೆ ಹೊರದು ವಿಜ್ಞಾನದ ಶಕ್ತಿಯನ್ನು ಬೆಳೆಸುವಂಥದಲ್ಲ. ಅದನ್ನು ವೈಜ್ಞಾನಿಕ ಸಂಶೋಧನೆಯಲ್ಲಿ ಹತ್ತು ಉಪಕರಣಗಳ ನಡುವೆ ಒಂದು ಉಪಕರಣವಾಗಿ ಉಪಯೋಗಿಸಬಹುದು ಸರಿ. ಆದರೆ ಅದನ್ನು ಅಷ್ಟಕ್ಕೆಯೆ ಸೀಮಿತಗೊಳಿಸುವುದು ಹಿತ.

ಕುಮಾರಸ್ವಾಮಿಯವರ ಈ ವಾದ-ಸಂಗ್ರಹವೆ ತೋರುವಂತೆ. ಆಧುನಿಕ ಪಾಶ್ಚಿಮಾತ್ಯ ವಿಜ್ಞಾನದ ಕುರಿತು ಅವರ ಪ್ರತಿಸ್ಪಂದನ ಬಹುಧ್ವನಿ ಪೂರ್ಣವಾದುದಾಗಿತ್ತು. ಅದು, ಉನ್ನತ ಭಾರತೀಯ ಚೇತನವೊಂದು ಪರಕೀಯ ವಿದ್ಯಮಾನಗಳನ್ನು ಗ್ರಹಿಸಿದ ಸ್ವೀಕರಿಸಿದ ಹಾಗೂ ತಿರಸ್ಕರಿಸಿದ ಬಹುಸ್ತರಿಯ ಕ್ರಮವೊಂದನ್ನು ಪ್ರತಿನಿಧಿಸುವಂಥದು. ಅವರ ನಿಲುವುಗಳು ಎಷ್ಟು ಸರಿ ಎಷ್ಟು ತಪ್ಪು ಎನ್ನುವುದು ಬೇರೊಂದೆ ಚರ್ಚೆಯ ವಿಷಯ; ಆದರೆ ಅವರು ಆಧುನಿಕ ವಿಜ್ಞಾನವನ್ನು ಅನುಸಂಧಾನಿಸುವಲ್ಲಿ ತೋರಿದ ವಿದ್ವತ್ತು, ಆತ್ಮವಿಶ್ವಾಸ ಮತ್ತು ವಿವೇಚನೆ ಮಾತ್ರ ಅಸಾಮಾನ್ಯವಾದುವು. ಪುಕ್ಕಲು ಸ್ವದೇಶಿವಾದಿಗಳೂ ಪೊಳ್ಳು ಸ್ವಸಂಸ್ಕೃತಿವಾದಿಗಳೂ ತುಂಬಿರುವ ನಮ್ಮ ಪ್ರಸಕ್ತ ಸಂದರ್ಭದಲ್ಲಿ, ಆನಂದ ಕುಮಾರಸ್ವಾಮಿಯವರು ಅಂದು ಉದ್ಘಾಟಿಸಿಕೊಟ್ಟ ಚರ್ಚೆಗಳ ಅತ್ಯುತ್ಕೃಷ್ಟ ಗುಣಪಟ್ಟದ ಮಾದರಿಯನ್ನು ನಾವಿಂದು ತುಸುವಾದರೂ ಮರುಸೃಷ್ಟಿಸಲು ಸಾಧ್ಯವಾದಲ್ಲಿ ಅದೆ ನಮ್ಮ ಸದ್ಯದ ಗೊಜಲು ಗೊಂದಲಗಳಿಗೆ ಸ್ವಲ್ಪವಾದರೂ ಸ್ಪಷ್ಟವಾದಿ ಆಕೃತಿಯನ್ನು ನೀಡಬಲ್ಲದು.

••• ••• •••

ಆಧುನಿಕ ಪಾಶ್ಚಿಮಾತ್ಯ ವಿಜ್ಞಾನದೊಡನೆ ಇನ್ನೊಂದು ಸ್ತರದಲ್ಲಿ, ಕುಮಾರಸ್ವಾಮಿಯವರಷ್ಟೆ, ತೀವ್ರವಾಗಿ, ಮುಖಾಮುಖಿಯಾದ ವ್ಯಕ್ತಿ ಮೊಹನದಾಸ ಕರಮಚಂದ ಗಾಂಧಿ. ಅವರ ಎರಡು ಪ್ರಖ್ಯಾತ ಕೃತಿಗಳಾದ 'ಹಿಂದ್ ಸ್ವರಾಜ್' ಮತ್ತು 'ಆತ್ಮಚರಿತ್ರೆ': ನನ್ನ ಸತ್ಯಾನ್ವೇಷಣೆಯ ಕಥೆ' ಈ ಮುಖಾಮುಖಿಯ ಎರಡು ಭಿನ್ನ ಆಯಾಮಗಳನ್ನು ಪ್ರತಿನಿಧಿಸುತ್ತವೆ. ಈ ಕೃತಿಗಳನ್ನು ನಿರ್ದಿಷ್ಟವಾದೊಂದು ಹಿನ್ನೆಲೆಯಲ್ಲಿ ಚರ್ಚಿಸಿದಲ್ಲಿ ಅವುಗಳ ಮಹತ್ವ ಇನ್ನೂ ಸ್ಪಷ್ಟವಾಗಿ ಮನವರಿಕೆಯಾಗಿವುದು.



ಆಧುನಿಕ ವಿಜ್ಞಾನದಿಂದ ಆಕರ್ಷಿತರಾದ ಸ್ವಾತಂತ್ರ್ಯಪೂರ್ವ ಭಾರತದ ಬಹುಪಾಲು ವಿಜ್ಞಾನಿಗಳು ಆತ್ಮಚರಿತ್ರೆಗಳನ್ನು ರಚಿಸಿದರು. ಭಾರತದ ಮಟ್ಟಿಗೆ ಆಧುನಿಕ ವಿಜ್ಞಾನ ಎಷ್ಟು ಹೊಸದಾಗಿತ್ತೊ ಆತ್ಮಚರಿತ್ರೆಯ ಪ್ರಕಾರವೂ ಅಷ್ಟೆ ಹೊಸದಾಗಿತ್ತು ಎನ್ನುವುದು ಅತ್ಯಂತ ಕೌತುಕದ ಸಂಗತಿ. ಒಂದು ಸ್ತರದಲ್ಲಿ, ಆ ಕಾಲದ ಭಾರತೀಯ ವಿಜ್ಞಾನಿಗಳ ಅತಿಮುಖ್ಯ ಕೊಡುಗೆಗಳಲ್ಲಿ ಆತ್ಮಕಥಾನಕದ ಪ್ರಕಾರವೂ ಒಂದಾಗಿತ್ತು ಎಂದು ಗುರುತಿಸುವಷ್ಟು ದೊಡ್ಡ ಸಂಖ್ಯೆಯಲ್ಲಿ ಅವರು ತಮ್ಮ ಜೀವನಚರಿತ್ರೆಗಳನ್ನು ಬರೆದುಕೊಂಡರು; ಅವೆಲ್ಲವೂ ಅತ್ಯುತ್ಕೃಷ್ಟ ಗುಣಮಟ್ಟದವೆ ಆಗಿದ್ದವು.

ಅವುಗಳಲ್ಲಿ ಇನ್ನೂ ಒಂದುಸ್ವಾರಸ್ಯವಾದ ಸಾಮಾನ್ಯ ಲಕ್ಷಣವನ್ನು ಕಾಣಬಹುದು. ಅವು ಆತ್ಮಚರಿತ್ರೆಗಳೇನೊ ಹೌದು; ಆದರೆ ಅವುಗಳಲ್ಲಿ ಖಾಸಗಿ ವಿವರಗಳಿಗಿಂದಸಾರ್ವಜನಿಕ ವಿವರಗಳೇ ತುಂಬಿತುಳುಕುತ್ತವೆ. ಆ ವಿಜ್ಞಾನಿಗಳಿಗೆ ಸ್ವಂತದ್ದೊಂದು ಒಳಜೀವನವೆ ಇರಲಿಲ್ಲವೇನೊ ಎನಿಸುವಷ್ಟರ ಮಟ್ಟಿಗೆ ಅವರು ಪುಟಪುಟಗಳುದ್ದಕ್ಕೂ ತಮ್ಮ ಹೊರಜೀವನದ ಸಂಗತಿಗಳನ್ನೆ ಪ್ರಸ್ತಾಪಿಸುತ್ತಾರೆ. ಪ್ರಫುಲ್ಲ ಚಂದ್ರ ರೇರವರ ಐದುನೂರಕ್ಕೂ ಮಿಕ್ಕಿದ ಪುಟಗಳ, ಎರಡು ಭಾಗಗಳ ಆತ್ಮವೃತ್ತಾಂತದಲ್ಲಿ ಕಾಣಸಿಗುವ ಏಕೈಕ ಖಾಸಗಿ ವಿವರವೆಂದರೆ ಅವರಿಗೆ ಎಂದೊ ಒಮ್ಮೆ ಹೊಟ್ಟೆನೋವು ಕಾಡಿದ್ದುದು, ಅದೂ ಕೊನೆಗೆ ಣಾನಸಿಕ ಕಾರಣದಿಂದ ಉಂಟಾದುದೆ ಹೊರತು ದೈಹಿಕ ಕಾರಣದಿಂದಲ್ಲ ಎಂದು ಅವರಿಗೆ ತಿಳಿದುಬಂದುದು. ಕರ್ನಾಟಕದಲ್ಲಿ ಜೀನಪದ ಕಥಾವೀರನ ವರ್ಚಸ್ಸನ್ನು ಪಡೆದುಕೊಂಡಿರುವ ಸರ್ ಎಂ. ವಿಶ್ವೇಶ್ವರಯ್ಯನವರ ಆತ್ಮಚರಿತ್ರೆಯೊ ಇನ್ನೂ ಕುತೂಹಲಕಾರಿಯಾದುದು. ಅದು ಸಾರ್ವಜನಿಕ ನೀತಿನಿರೂಪಣೆಯ ಕುರಿತಾದ ಸಲಹೆ ಹಾಗೂ ಶಿಫಾರಸುಗಳ ಸುದೀರ್ಘ ಪಟ್ಟಿಯೊಂದಿಗೆ ಮುಗಿಯುತ್ತದೆ. ನನ್ನ ಓದಿನ ಮಟ್ಟಿಗೆ, ಸ್ರಂತ ಜೀವನದ ಸುಳಿವೆ ಇಲ್ಲದೆ ಸಂಪೂರ್ಣವಾಗಿ ಸಾರ್ವಜನಿಕ ಜೀವನ ಕ್ಷೇತ್ರದ ಪ್ರಸ್ತಾಪದೊಂದಿಗೆ ಮುಕ್ತಾಯಗೊಳ್ಳುವ ಆತ್ಮವೃತ್ತಾಂತ ಇದೊಂದೆ.

ನಮ್ಮ ಪ್ರಥಮ ಪೀಳಿಗೆಯ ವಿಜ್ಞಾನಿಗಳ ಆತ್ಮಚರಿತ್ರೆಗಳ ಈ ಸಾಮಾನ್ಯ ಲಕ್ಷಣ ತೋರಿಸುವಂತೆ, ಆಧುನಿಕ ವಿಜ್ಞಾನ ಅವರು ತಮ್ಮ ಒಟ್ಟೂ ವ್ಯಕ್ತಿತ್ವ ಹಾಗೂ ಜೀವನವನ್ನು ಖಾಸಗಿ ಮತ್ತು ಸಾರ್ವಜನಿಕವೆಂದು ಎರಡು ಸುಸ್ಪಷ್ಟ ಭಾಗಗಳಾಗಿ ವಿಭಜಿಸಿಕೊಳ್ಳುವಂತೆ ಒತ್ತಡವನ್ನು ಹೇರಿತು. ಅವೆರಡು ಭಾಗಗಳ ನಡುವೆ ಯಾವುದೆ ರೀತಿಯ ವಿನಿಮಯವಾಗಿಲಿ ಪರಸ್ಪರ ಪ್ರಭಾವವಾಗಲಿ ಇರದಂತೆ, ಇದ್ದರೂ ಅದು ಅತ್ಯಂತ ಅಗೋಚರವೂ ಅಲ್ಪವೊ ಆಗಿರುವಂತೆ ಅವರು ಬಾಳಬೇಕಾಯಿತು,

ಬರೆಯಬೇಕಾಯಿತು. ಇದು ವಿಖಂಡಿತ ಪ್ರಜ್ಞೆಯೆಂದು ಕೆಲವರಿಗೆ ಕಂಡರೆ, ಸ್ವತಶ್ರ ಆ ವಿಜ್ಞಾನಿಗಳಿಗೆ ಅದು ಸಮಸ್ಯೆಯಂದೆ ಅನಿಸುತ್ತಿರಲಿಲ್ಲ. ಅವರು ಆಯೆರಡು ವಲಯಗಳ ನಡುವಿನ ಗಡಿಯನ್ನು ಅಷ್ಟು ಸುಲಭವಾಗಿ ಗುರುತಿಸಿಕೊಂಡು ಅಷ್ಟು ಸಲೀಸಾಗಿ ಅದರ ಆಚೆಗೂ ಈಚೆಗೂ ಸಂಚರಿಸುತ್ತಿದ್ದರು — ಅದು ಮನೆ ಮತ್ತು ಹೊರಜಗತ್ತಿನ ನಡುವಿನ ಹೊಸ್ತಿಲಷ್ಟೆ ಎಂಬಂತೆ. ವಿಶ್ವೇಶ್ವರಯ್ಯನವರ ನಡವಳಿಕೆಯ ಕುರಿತಾದ ವಿವರಗಳೆಲ್ಲ — ಇವು ಇಂದು ವಾಸ್ತವಾಂಶದ ಮಟ್ಟವನ್ನು ಮೀರಿ ದಂತಕಥೆಗಳಾಗಿ ಬೆಳೆದುನಿಂತಿವೆ. ಈ ಪರಮಸರಳ ಶೀಘ್ರ ಸ್ಥಿತ್ಯಂತರವನ್ನೆ ಪ್ರತಿಫಲಿಸುತ್ತವೆ. ಅವರು ಯಾವತ್ತೂ ಾಹನಗಳಿಂದ ಪ್ರಾರಂಭಿಸಿ ಪೆನ್ನುಪೆನ್ಸಿಲ್ಲು ಗಳವರೆಗೆ ಎರಡೆರಡನ್ನು ಇಟ್ಟುಕೊಳ್ಳುತ್ತಿದ್ದುದು; ಕಚೇರಿಯ ಕೆಲಸಕ್ಕೆ ಒಂದು ವಾಹನ, ಒಂದು ಪೆನ್ನು ಬಳಸಿ, ಮನೆಯೊಳಗೆ ಕಾಲಿಡುತ್ತಿದ್ದಂತೆಯೆ ಸ್ವತ ಖರ್ಚಿನ ಇನ್ನೊಂದು ವಾಹನ, ಇನ್ನೊಂದು ಪೆನ್ನು ಉಪಯೋಗಿಸುತ್ತಿದ್ದುದು, ಇತ್ಯಾದಿ — ಇಂಥ ಅಂಶಗಳು ಅವರಲ್ಲಿ ಹೇರಳವಾಗಿವೆ.

ರಂಗಭೂಮಿಯ ಪರಿಭಾಷೆಯಲ್ಲಿ ಹೇಳುವುದಾದರೆ, ಈ ವಿಜ್ಞಾನವೇತ್ತರ ಆತ್ಮಚರಿತ್ರೆಗಳಲ್ಲಿ ಅವರುಗಳ ಸಾರ್ವಜನಿಕ ಮುಖದ 'ಮುನ್ನೆಲೆ'ಯೆ ತುಂಬಿ ಕೊಂಡಿದೆ, ಅವರ ಖಾಸಗಿ ಜೀವನದ 'ಹಿನ್ನೆಲೆ' ಕಿಂಚಿತ್ತೂ ಇಲ್ಲ. ಅಷ್ಟೆ ವಿಲಕ್ಷಣ ಸಂಗತಿಯೆಂದರೆ, ಅವರು ಯಾರೂ ಅಲ್ಲಿ ವಿಜ್ಞಾನದ ಕಾರ್ಯವಿಧಾನ-ಮೆಥಡ್ - ದ ಕುರಿತು ಯಾವುದೆ ಬಗೆಯ ಚಿಂತನೊಯನ್ನು ನಡೆಸುವುದಿಲ್ಲ. ಅಂದರೆ ಆಧುನಿಕ ವಿಜ್ಞಾನವನ್ನೆ ಒಂದು ಒಳಪರೀಕ್ಷೆಗೂ ಪ್ರಯೋಗಕ್ಕೊ ಗುರಿಪಡಿಸುವುದಿಲ್ಲ.

— ಇಲ್ಲಿ ನಾವು ಗಾಂಧಿಯ ಬಳಿ ಮರಳಿಬರುತ್ತೇವೆ—

ನಮ್ಮಲ್ಲಿ ಬಂದ ಈ ಎಲ್ಲ ಆತ್ಮಚರಿತ್ರೆಗಳಲ್ಲಿ ಖಾಸಗಿ ಮತ್ತು ಸಾರ್ವಜನಕ ಜೀವನವಲಯಗಳ ನಡುವಿನ ಗಡಿಯನ್ನು ಅಳಿಸಿಹಾಕುವ, ಹಾಗೂ ವೈಜ್ಞನಿಕ ವಿಧಾನವೊಂದನ್ನು ಚರ್ಚಿಸುವ ಏಕೈಕ ಕೃತಿ ಗಾಂಧಿಯ 'ಸತ್ಯಾನ್ವೇಷಣೆಯ ಕಥೆ'. ಅದರ ಇಂಗ್ಲಿಷ್ ಶೀರ್ಷಿಕೆ — ( ) ಯೆ ಅರ್ಧ ಕಥೆಯನ್ನು ಹೇಳುತ್ತದೆ. ಸತ್ಯವನ್ನು ಹುಡುಕುವ ಪ್ರಯತ್ನದಲ್ಲಿ ಗಾಂಧಿ ವೈಜ್ಞಾನಿಕ ವಿಧಾನ — ( ) ಕ್ಕಿಂತ ಹೆಚ್ಚೇನೂ ಭಿನ್ನವಲ್ಲದ ಮಾರ್ಗವನ್ನು ಅನುಸರಿಸುತ್ತಾರೆ; ಅದರ ಬಹುಮುಖ್ಯ ಭಾಗವಾಗಿ ತಮ್ಮ ದೇಹ-ಮನಸು-ಆತ್ಮಗಳ ಮೇಲೆಯೆ ಪ್ರಯೊೋಗ ಗಳನ್ನು - ( ) ಮಾಡುತ್ತ ಬರುತ್ತಾರೆ. ಈ ಪ್ರಯೋಗಗಳೂ ಮೂಲತಃ ಆಹಾರ ಪದ್ಧತಿ ಮತ್ತು ಲೈಂಗಿಕತೆಯನ್ನು ಕೇಂದ್ರಗಳಾಗಿಟ್ಟುಕೊಂಡವು. ಕೆನೆಗೆ, ಯಾವುದೆ ವಿಜ್ಞಾನವಿಧಾನದಲ್ಲಿ, ಪ್ರಯೋಗದಲ್ಲಿ ನಿರ್ದಿಷ್ಟ ಉದಾಹರಣೆಗಳು ಸಾಮಾನ್ಯ



ಸೂತ್ರ-ಸತ್ಯಗಳಾಗಿ ವಿಸ್ತಾರಗೊಳ್ಳುವಂತೆ ಇಲ್ಲ ಬಿಡಿಯಾದ ಖಂಡಾಂಶವೊಂದು ಇಡಿಯಾದ ಅಖಂಡಸಮಗ್ರದತ್ತ ಕರೆದೊಯ್ಯುವಂತೆ, ಗಾಂಧಿಯಲ್ಲಿ ಈಯೆರಡು ಅಂಶಗಳ ಚರ್ಚೆ ಮಾನವವ್ಯಕ್ತಿತ್ವ - ಸಮಾಜ-ಸಂಸ್ಕೃತಿ-ಪ್ರಕೃತಿ-ನಾಕರಿಕತೆ-ರಾಜಕಾರಣ-ವಿಜ್ಞಾನ-ಧರ್ಮ-ಆಧ್ಯಾತ್ಮಗಳೆಲ್ಲದರ ಜಿಜ್ಞಾಸೆಯಾಗಿ ಬೆಳೆಯುತ್ತದೆ.

ಈ ಬಗೆಯ ಸತ್ಯಶೋಧನೆಯ ಕ್ರಿಯೆಯಲ್ಲಿಗಾಂಧಿ 'ವೈಜ್ಞಾನಿಕ' ವಿಧಾನವನ್ನು ಬಳಸುತ್ತಾರೆ ಮಾತ್ರವಲ್ಲದೆ 'ಅಧುನಿಕ ವಿಜ್ಞಾನ' ದ ಸತ್ಯಾಸತ್ಯತೆಗಳನ್ನೂ ತೀವ್ರ ಪರಿಶೀಲನೆಗೆ ಒಡ್ಡುತ್ತಾರೆ. ಇಂಥದೊಂದು ವಿಶ್ಲೇಷಣೆಯ ಮಾದರಿಯನ್ನು ಅವರು ತಮ್ಮ ಆತ್ಮಕಥನಕ್ಕೆ ವರ್ಷಗಟ್ಟಲೆ ಮೊದಲೆ ಬರೆದಿದ್ದ 'ಹಿಂದ್ ಸ್ವರಾಜ್' ನಲ್ಲಿ ಕಾಣಿಸಿಕೊಟ್ಟಿದ್ದರು. 'ಹಿಂದ್ ಸ್ವರಾಜ್' ಜಗತ್ತಿನಲ್ಲಿ ಇಂದು ಅತಿಹೆಚ್ಚು ಚರ್ಚಿತವಾಗುತ್ತಿರುವ ಕೃತಿಗಳಲ್ಲಿ ಒಂದು. ಅನೇಕಾನೇಕ ಧೀಮಂತರು ಅದನ್ನು ತಮ್ಮ ಅನೇಕಾನೇಕ ರೂತಿಯಲ್ಲಿ ಚಿಂತನೆ ಹಾಗೂ ವಾದ ಪ್ರತಿರಪಾದನೆಗೆ ಅಕ್ಷಯ ಗಣಿಯೆಂಬಂತೆ ಬಳಸಿಕೊಂಡಿದ್ದಾರೆ; ಅಗಣಿತ ಆಯಾಮಗಳಲ್ಲಿ ಅದನ್ನು ಚರ್ಚಿಸಿದ್ದಾರೆ. ಅತ್ಯಂತ ಅಚ್ಚರಿಯ ಸಂಗತಿಯೆಂದರೆ 'ಹಿಂದ್ ಸ್ವರಾಜಜ್ನು , ಶ್ರೇಷ್ಠವಾದೊಂದು ವಿಜ್ಖಜಾನ ನೀತಿಯ ದಾಖಲೆ - ಸೈನ್ಸ್ ಪಾಲಿಸಿ ಡಾಕ್ಯುಮೆಂಟ್ - ಯಾಗಿಯೂ ನೋಜಲು ಸಾಧ್ಯವುಂಟು. ಅದರಲ್ಲಿ ಗಾಂಧಿ ಭಾರತದಲ್ಲಿ ಆಗಷ್ಟೆ ಬೇರೂರಲಾರಂಭಿಸಿದ್ದ ಪಾಶ್ಚಿಮಾತ್ಯ ಆಧುನಿಕ ವಿಜ್ಞಾನದ ಕುರಿತು ತಾತ್ವಿಕವೂ ನಿತ್ಯಾನ್ವಯಕವೂ ಆದ ವಿಷಿಷ್ಟ ಕ್ರಮದಲ್ಲಿ ಅತ್ಯುಜ್ವಲ ಚಿಂತನೆಯಲ್ಲಿ ತೊಡಗುತ್ತಾರೆ; ಆ ವಿಜ್ಞಾನ ಮಾದರಿಯನ್ನು ತೀವ್ರ ಪರಿಶೀಲನೆಗೆ ಒಳಪಡಿಸುತ್ತಾರೆ. 'ಹಿಂದ್ ಸ್ವರಾಜ್' ನ ಪ್ರಸ್ತುತತೆ ಎಸ್ಟು ಸಾರ್ವಕಾಲಿಕವಾದುದು ಎನ್ನುವುದನ್ನು ತಿಳಿಯಲು ಸಣ್ಣದೊಂದು ಕಲ್ಪನಾಪ್ರಯೋಗವೆ ಸಾಕು, ಹೀಗೆ:

'ಹಿಂದ್ ಸ್ವರಾಜಜ್ನ ಒಟ್ಟೂ ಸ್ವರೂಪ ಒಂದು ವಾಗ್ವಾದ-ಸಂವಾದದ್ದು. ಉಗ್ರ ಉತ್ಸಾಹದ ಓರ್ವ ತರುಣ ರಾಜಕೀಯ ಕಾರ್ಯಕರ್ತನ ಪ್ರಶ್ನೆಗಳು ಹಾಗೂ ಅವುಗಳಿಗೆ ಗಾಂಧಿಯ ಪ್ರತಿನಿಧಿಯಂತಿರುವ ಓರ್ವ ಸಂಪಾದಕನ ವಿಸ್ತೃತ ಉತ್ತರಗಳಲ್ಲಿ ಬೆಳೆಯುತ್ತ ಹೋಗುವ ಈ ವಿಚಾರವಿನಿಮಯ ತೀವ್ರ ನಾಟಕೀಯ ಗುಣವನ್ನು ಹೊಂದಿದೆ. ನಾಟಕಗಳಲ್ಲಿ ಮೂಲ ಪಾತ್ರಗಳನ್ನು ಬೇರೆ ಬೇರೆ ದೇಶ-ಕಾಲ ಸಂದರ್ಭಗಳಲ್ಲಿ ಬೇರೆ ಬೇರೆ ನಟರು ನಿರ್ವಹಿಸುವಂತೆ, ಮೂಲ ಘಟನೆ-ಕ್ರಿಯೆಗಳನ್ನು ಕಾಲಕ್ಕೆ ತಕ್ಕಂತೆ ರಾಪಾಂತರಿಸಿಕೊಳ್ಳುವಂತೆ, 'ಹಿಂದ್ ಸ್ವರಾಜಜ್ನ ವಿವಿಧ ಅಂಗಾಂಶಗಳನ್ನೂ ನಾವಿಂದು ನಮ್ಮ ಸನ್ನಿವೇಶಕ್ಕೆ ಅನುಸಾರವಾಗಿ ಮಾರ್ಪಡಿಸಿ ಕೊಳ್ಳಬಹುದು. ಉದಾಹರಣೆಗೆ, ಅಲ್ಲಿಯ ಆಧುನಿಕ ವಿಜ್ಞಾನ ಇಂದಿನ ಜೈವಿಕ

ತಂತ್ರಜ್ಞಾನವೊ ಮಾಹಿತಿ ತಂತ್ರಜ್ಞಾನವೊ ಆಗಬಹುದು; ಅಲ್ಲಿನ ಆಧುನಿಕತಾವಾದಿ ಇಂದಿನ ಜಾಗತಿಕರಣವಾದಿಯಾಗಿಯೂ ಅಲ್ಲಿನ ಗಾಂಧಿ ಇಂದಿನ ಪರಿಸರವಾದಿಯಾಗಿಯೂ ಪರ್ಯಾಯವಾದಿಯಾಗಿಯೂ ಪುನರೂಪಿತವಾಗಬಹುದು. ಇಂಥ ಪರಿಷ್ಕೃತ ಕೃತಿ ಅಂದಿನ ಸಂದಿಗ್ಧಗಳ ಇಂದಿನ ರೂಪಾಂತರಗಳನ್ನೆ ನಿರೂಪಿಸುತ್ತದೆ.

'ಹಿಂದ್ ಸ್ವರಾಜ್' ಮತ್ತು 'ನನ್ನ ಸತ್ಯಶೋಧನೆಯ ಕಥೆ'ಗಳಲ್ಲಿ ಗಾಂಧಿ, ಅವರೆಲ್ಲ ಬಹರ-ಚಿಂತನೆ-ಜೀವನಕ್ರಮಗಳಲ್ಲಿ ಮಾಡಿತಂತೆಯೆ ಆಧುನಿಕ ಪಾಶ್ಚಿಮಾತ್ಯ ವಿಜ್ಞಾನದಲ್ಲಿ ಅಂತರ್ಗತವಾಗಿದ್ದ ವಸಾಹತುಶಾಹಿ ಗುಣಗಳನ್ನು ಬಯಲಿಗೆಳೆದರು; ವಸಾಹತುಶಾಹಿಯೆನ್ನುವುದು ರಾಜಕೀಯ ಹಾಗೂ ಆರ್ಥಿಕ ಸ್ತರಗಳಲ್ಲಿ ಮಾತ್ರವಲ್ಲದೆ ಹೇಗೆ ಮನೋಧರ್ಮ ಹಾಗೂ ಜ್ಞಾನಾರ್ಜನಾ ಮಾರ್ಗಗಳ ಸ್ತರಗಳಲ್ಲಿಯೂ ತನ್ನ ದುಷ್ಪ್ರಭಾವವನ್ನು ಬೀರುವುದು ಎಂದೂ, ಜೀವನವನ್ನು ಹೀಗೆ ನಿಸ್ಸಂಬಂಧಿ ಸ್ತರಗಳಾಗಿ ವಿಭಜಿಸುವದೇ ಹೇಗೆ ವಸಾಹತುಶಾಹಿಯ ಹುನ್ನಾರವಾಗಿದೆಯೆಂದೂ ತೋರಿಸಿದರು. ಅವರ ಪ್ರಕಾರ ಆಧುನಿಕ ವಿಜ್ಞಾನ ಮತ್ತು ಆಧುನಿಕ ತಂತ್ರಜ್ಞಾನಗಳೆಂಡು ಪ್ರಜಾಸಾಮಾನ್ಯರ ಸ್ವಯಮಾಡಳಿತದ ಶಕ್ತಿ-ಸಾಧ್ಯತೆಗಳನ್ನು ಕಿತ್ತುಕೊಂಡು ಅವರನ್ನು ತಜ್ಞರ ತಂತ್ರಜ್ಞರ ನಿಯಂತ್ರಣಕ್ಕೆ ಒಳಪಡಿಸುವುದರ ಮೂಲಕ ವಸಾಹತುಶಾಹಿಯನ್ನು ಪೋಷಿಸುವಂತಹ ವ್ಯವಸ್ಥೆಗಳು; ವಸಾಹತುಶಾಹಿಯದೆ ಪ್ರತಿರೂಪಗಳು. ವಸಾಹತುಶಾಹಿ ದೇಶ-ಸಮಾಜಗಳನ್ನು ಪರದೇಶ ಪರಸಮಾಜಗಳ ಅಧಿಕಾರಕ್ಕೆ ಒಳಪಡಿಸಿದರೆ, ಆಧುನಿಕ ವಿಜ್ಞಾನ-ತಂತ್ರಜ್ಞಾನಗಳು ವ್ಯಕ್ತಿಗಳನ್ನು ತಜ್ಞ-ತಂತ್ರಜ್ಞರೆಂದು ಬಿರುದು ಹೊತ್ತ ಪರವ್ಯಕ್ತಿಗಳ ಹತೋಟಿಗೆ ಒಪ್ಪಿಸುತ್ತವೆ. ಇಂಥಲ್ಲಿ ಪ್ರಜಾಪ್ರಭುತ್ವವೆನ್ನುವುದು ಸ್ಥೂಲಸ್ತರದಲ್ಲಿ ದೊಡ್ಡದೊಂದು ಮೌಲ್ಯವಾಗಿ ಸ್ಥಾಪಿತವಾದಂತೆ ಕಂಡರೂ ಸೂಕ್ಷ್ಮಸ್ತರದಲ್ಲಿ ಅದು ಅಪಮೌಲ್ಯಗೊಂಡು, ಆ ಕಾರಣ ಅದು ನಿಜವಾದ ಪ್ರಜಾಪ್ರಭುತ್ವರಾಗಿ ಬೆಳೆಯುವಲ್ಲಿ ಸೋಲುತ್ತದೆ. ಈ ಪ್ರಕ್ರಿಯೆಗೆ ಪ್ರತಿರೋಧ ಒಡ್ಡುತ್ತ ಗಾಂಧಿ ಜನಸಾಮಾನ್ಯನನ್ನು ತಜ್ಞ ಪ್ರಭುತ್ವದಿಂದ ಬಿಡುಗಡೆಗೊಳಿಸಲು ಪ್ರಯತ್ನಿಸಿದರು. ಆರೋಗ್ಯ ಶಾಸ್ತ್ರದ ಒಂದು ನಿದರ್ಶನವನ್ನು ನೀಡುವುದಾದರೆ, ಅವರು ಸಾಮಾನ್ಯನ ದೇಹ-ಮನಸ್ಸುಗಳನ್ನು ವೈದ್ಯಕೀಯ ತಜ್ಞನ ಹತೋಟಿಯಿಂದ ಬಿಡಿಸಿ, ಅವುಗಳನ್ನು ತಿರುಗಿ ಸಾಮಾನ್ಯನ ಕೈಗೇ ಒಪ್ಪಿಸಿದರು. ಆಧುನಿಕ ವೈದ್ಯಕೀಯ ವಿಜ್ಞಾನ, ವಸಾಹತುಶಾಹಿಯ ಎಲ್ಲ ವಿಜ್ಞಾನ ಶಾಖೆಗಳ ಕಾರ್ಯಮಾದರಿಗೆ ಅನುಗುಣವಾಗಿ, ಸಾಮಾನ್ಯ ಪ್ರಜೆಯ ಶರೀರವನ್ನು ತಜ್ಞನ ವಸಸಾಹತಾಗಿ ಮಾರ್ಪಡಿಸಿತ್ತು; ಅದನ್ನು ತಜ್ಞನ ಎಲ್ಲ ಪ್ರಯೋಗ ಹಾಗೂ ಜ್ಞಾನಾರ್ಜನೆಯ ಕ್ರಮಗಳ ಅಂಕಣವನ್ನಾಗಿ ಪರಿವರ್ತಿಸಿತ್ತು. ಅಲ್ಲಿ ವೈದ್ಯ-ತಜ್ಞ ಮಾತ್ರ



ಸಕ್ರಿಯ ವ್ಯಕ್ತಿಯಾಗಿ, ರೋಗಿ-ಸಾಮಾನ್ಯ ಸಂಪೂರ್ಣ ನಿಷ್ಕ್ರಿಯ ವಸ್ತುಸಮಾನನಾಗುವಂತಹ ಪರಿಸ್ಥಿತಿ ನಿರ್ಮಾಣಗೊಂಡಿತ್ತು. ಇಂಥ ವಿಷಮ ಸಂಬಂಧದ ಸಂದರ್ಭದಲ್ಲಿ, ವೈದ್ಯ ಮತ್ತು ರೋಗಿಗಳಿಬ್ಬರೂ ತಮ್ಮ ರಾಜಕೀಯ ನಿಲುವಿನ ಮಟ್ಟಿಗೆ ಪ್ರಜಾಪ್ರಭುತ್ವವಾದಿಗಳಾಗಿದ್ದರೂ ವೈದ್ಯಕೀಯ ನಿಲುವಿನ ಮಟ್ಟಿಗೆ ಪ್ರಜಾಪ್ರಭುತ್ವ ರಿರೋಧಿಗಳಾಗದಿರಲು ವಸಾಹತುಶಾಹಿಯ ಮತ್ತೊಂದು ಸೂಕ್ಷ್ಮರೂಪವೆಂದೆ ಗುರುತಿಸಿದ ಅಲೋಪತಿಯ ಮೂಲಭೂತ ಸಮಸ್ಯಾತ್ಮಕ ತಾತ್ವಕತೆ ಇಂದು ನಮ್ಮನ್ನು ತೀವ್ರ ಬಾಧೆಗೆ ಗುರಿಮಾಡಿದೆ. ಗಾಂಧ ಅಂದು 'ತಜ್ಞ ಪ್ರಭುತ್ವ' ವೆಂದು ಟೀಕಿಸಿದ್ದನ್ನು ಇಂದು ಅಲೋಪತಿಯ ಒಳಗಿನ ಅನೇಕ ವೈದ್ಯರೇ ಒಪ್ಪಿಕೊಳ್ಳುತ್ತಿದ್ದಾರೆ. ಅವರೇ ಹೇಳುವಂತೆ ಇಂದಿನ ನಗರ ಪ್ರದೇಶಗಳಲ್ಲಿ ಕಂಡುಬರುವ ಒಟ್ಟೂ ಅನಾರೋಗ್ಯದ ಪ್ರಕರಣಗಳ ಪೈಕಿ ಶೇಕಡಾ ನಲವತ್ತೈದರಷ್ಟು ಪ್ರಕರಣಗಳು ರೈಧ್ಯರ ಪರೀಕ್ಷೆ ಹಾಗೂ ಚಿಕಿತ್ಸೆಯ ವಿಧಾನಗಳಿಂದಲೇ ಹುಟ್ಟಿಕೊಂಡಿರುವಂಥವು. ಇವುಗಳನ್ನು ಗುರುತಿಸಲೆಂದು ಇಂದು ಇಯಾಟ್ರೊಜೆನಿ - ವೈದ್ಯಜನ್ಯ ರೋಗಗಳು- ಎನ್ನುವ ಹೊಸತೊಂದು ಪಾರಿಭಾಷಿಕ ಪದವೆ ಸೃಷ್ಟಿಯಾಗಿದೆ. ಗಾಂಧಿಯ ಈ ವಿಷಯದ ರುರಿತಾದ ಬೀಜರೂಪಿ ಚಿಂತನೆಯನ್ನು ಅನಂತರ ಬಂದ ಇವಾನ್ ಇಲಿಚೆನಂಥವರು ಇನ್ನೂ ವಿಶಾಲ ವೈಚಾರಿಕತೆಯ ಹರಹಿನಲ್ಲಿ ಬೆಳೆಸಿರುವುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

ಹೀಗೆ, ಕುಮಾರಸ್ವಾಮಿ, ಗಾಂಧಿಯಂಥವರಿಗೆ ವಸಾಹತುಶಾಹಿಯ ಸಂರಚನೆಯ ಬಗ್ಗೆ ಆಳವಾದ ಒಳನೋಟವಿದ್ದುದರಿಂದ ಅವರು ಆ ವ್ಯವಸ್ಥೆಯ ಬಗೆಗೆ ಏಕಮುಖಿಯಾದ ಪ್ರೀತಿಯನ್ನಾಗಲಿ ದ್ವೇಷವನ್ನಾಗಲಿ ಪ್ರಕಟಿಸಲಿಲ್ಲ; ಅದನ್ನು ಉಚ್ಚಾಟಿಸಿದ ತಕ್ಷಣ ತಮ್ಮ ನಾಡಿನ ಸಮಸ್ಯೆಗಳೆಲ್ಲ ಪರಿಹಾರವಾಗುವುವೆಂದು ಭ್ರಮಿಸಲಿಲ್ಲ. ಆಧುನಿಕ ಪಶ್ಚಿಮದ ಬಹುಸ್ತರೀಯ ಸವಾಲುಗಳಲನ್ನು ಸ್ಪಷ್ಟವಾಗಿ ಗುರುತಿರಿದ್ದರಿಂದೇ ಅವರು ಅವುಗಳಿಗೆ ಅಷ್ಟೆ ಸಂಕೀರ್ಣವಾಗಿ ಪ್ರತಿಸ್ಪಂದಿಸಿದರು. ಆ ಪ್ರತಿಸ್ಪಂದನೆಯಲ್ಲಿ ಸ್ವಂತದ ನಾಡು-ನೆಲೆಗಳ ಬಗ್ಗೆ ಅಗಾಧವಾದ ವಿಶ್ವಾಸವಿತ್ತು, ಅನ್ಯಯದ ಬಗೆ ಅಪಾರ ಎಚ್ಚರ ಮತ್ತು ಸಹಾನುಭೂತಿಗಳಿದ್ದವು. ಅವರ ಪರಿಕಲ್ಪನೆಯ 'ಆಧುನಿಕ ಪ್ರಜೆ' ತನ್ನ ನೆಲದಲ್ಲಿ ಭದ್ರ ಬೇರೂರಿ ನಿಂತಿರುವಂತೆಯೆ ಇಡಿಯ ವಿಶ್ವವನ್ನು ವ್ಯಾಪಿಸಬಲಿಲವನಾಗಿದ್ದ, ಆಧುನಿಕ ರಾಷ್ಟ್ರಪ್ರಭುತ್ವಗಳ ಸಮಾಜಗಳ ಕೃತಕ ಗಡಿಗಳನ್ನು ದಾಟಿ ವಿಭಿನ್ನ ಸಮುದಾಯ- ಸಂಸ್ಕೃತಿಗಳೊಂದಿಗೆ ಸಮಾನನಾಗಿ ಸಂವಾದಿಸಬಲ್ಲವನಾಗಿದ್ದ, ವಿವೇಕದೊಂದಿಗೆ ರಿನಿಮಯ ನಡೆಸಬಲ್ಲವನಾಗಿದ್ದ. ಅರ್ಥಾತ್ ಆತ, ಇಂದಿನ ಪೋಸ್ಟ್-ಮಾಡರ್ನಿಸ್ಟರು ಕನವರಿಸುವಂತಹ 'ನಾಗರಿಕ ಸಮಾಜ'ದ ಆದರ್ಶಪ್ರಜೆಯಾಗಿದ್ದ.

ವಿಷಾದದ ಸಂಗತಿಯೆಂದರೆ, ನಮ್ಮ ಕಾಲದ ಬೆಳವಣಿಗೆಗಳು ಕುಮಾರಸ್ವಾಮಿ, ಗಾಂಧಿಯಂಥವರ ವ್ಯಕ್ತಿತ್ವ ಮತ್ತು ಚಿಂತನೆಗಳ ಧೀಮಂತಿಕೆಯನ್ನು ವಿಸ್ಮೃತಿಗೆ ತಳ್ಳಿವೆ. ವಸಾಹತುಶಾಹಿಯ ಒಟ್ಟೂ ಪರಿವಾರದ ಬಗ್ಗೆ ಅತ್ಯಂತ ಸರಳೀಕೃತ ನಿಲುವುಗಳನ್ನು ತಳೆದಿರುವ ನಮ್ಮ ಸಂದರ್ಭದ ಕೆಲವು ಸಂಘಟನೆಗಳು ನಮ್ಮ ವೈಚಾರಿಕತೆಯನ್ನು ದರಿದ್ರಗೊಳಿಸಿವೆ. ಇಂಥ ಸಂಕುಚಿತತೆಯ ಅಪಾಯಗಳನ್ನು ದಾಟಿ, ನಮ್ಮ ತಾತ್ವಕಸತ್ವವನ್ನು ವರ್ಧಿಸಿಕೊಳ್ಳಬೇಕಾದಲ್ಲಿ ಸ್ವಾತಂತ್ರ್ಯಪೂರ್ವ ಕಾಲದ ಮೇರುವ್ಯಕ್ತಿಗಳನ್ನು ನಮ್ಮ ಪ್ರಜ್ಞೆಯ ಕೇಂದ್ರಕ್ಕೆ ತಂದುಕೊಳ್ಳುವುದೂ ಬಹುಮುಖ್ಯ ಕ್ರಮವೊಂದಾಗಬಲ್ಲದು.

••• ••• •••

ಈ ನಡುವೆ, ಆಧುನಿಕ ವಿಜ್ಞಾನದ ಕುರಿತಾಗಿ ಭಾರತೀಯ ಮತ್ತು ಪಾಶ್ಚಿಮಾತ್ಯ ಎಳೆಗಳೆರಡೂ ಸೇರಿಕೊಂಡ ವಿಶಿಷ್ಟವಾದ ಇನ್ನೊಂದು ಪ್ರತಿಸ್ಪಂದನೆ ಮಾದರಿ ರೂಪುತಳೆಯಿತು. ಇದು ಮುಖ್ಯವಾಗಿ ಥಿಯಾಸೇಫಿಯಿಂದ ಮೂಡಿಬಂದ ಪ್ರತಿಸ್ಪಂದನೆಯಾಗಿತ್ತು. ಇಂದು ಹನ್ನೋಟದಲ್ಲೊಮ್ಮೆ ನೋಡಿದರೆ, ಆಧುನಿಕ ವಿಜ್ಞಾನದ ಬಗೆಗೆ ಅನಂತರದ ಅವಧಿಯಲ್ಲಿ ಬೆಳೆದುಬಂದ ಎಲ್ಲ ಪ್ರಮುಖ ವಿಶ್ಲೇಷಕ್ರಮಗಳ ಮೂಲಬೀಜಗಳನ್ನು ಥಿಯಾಸೊಫಿ ಚಳವಳಿಯಲ್ಲಿ ಕಾಣಬಹುದು. ಅಷ್ಟೇ ಅಲ್ಲ, ಪಶ್ಚಿಮದ ಹಲವು ಗಣ್ಯರನ್ನು ಒಳಗೊಂಡಿದ್ದ ಈ ಚಳವಳಿ ಇನ್ನೂ ಅನೇಕ ಕೌತಕದ ನಿದರ್ಶನಗಳನ್ನು ಒದಗಿಸುತ್ತದೆ.

ಇವುಗಳಲ್ಲಿ ಅತ್ಯಂತ ಸ್ವಾರಸ್ಯಮಯ ನಿದರ್ಶನ ಆಲ್‌ಫ್ರೆಡ್ ವಾಲೇಸನದ್ದು. ಜಗತ್ತಿನ ಶ್ರೇಷ್ಠ ವಿಜ್ಞಾನಿಗಳಲ್ಲೊಬ್ಬನಾದ ವಾಲೇಸ್, ವಿಕಾಸವಾದದ ಸಹ್ಯಸಂಶೋಧಕನೆಂದು ಹೆಸರಾಗಿರುವವನು. ವಾಸ್ತವತಃನಮ್ಮ ಆಧುನಿಕ ಚರಿತ್ರೆಯನ್ನು ಆಳವಾಗಿ ಪ್ರಭಾವಿಸಿದ ಆ ಕ್ರಾಂತಿಕಾರಿ ವೈಜ್ಞಾನಿಕ ಸಿದ್ಧಾಂತದ ಸೃಷ್ಟಿಯಲ್ಲಿ ವಾಲೇಸನ ಪಾತ್ರವೆಷ್ಟು, ಚಾರ್ಲ್ಸ್ ಡಾರ್ವಿನ್‌ದೆಷ್ಟು ಎನ್ನುವ ಚರ್ಚೆ ಇನ್ನು ಬಗೆಹರಿದಿಲ್ಲ.

ಆಲ್‌ಫ್ರೆಡ್ ವಾಲೇಸ್ ಬರಿಯೆ ವಿಜ್ಞಾನಿಯಷ್ಟೆ ಅಲ್ಲದೆ ಭಿನ್ನಮತೀಯ ವಿಜ್ಞಾನಿಯೂ ಆಗಿದ್ದ; ಅಂದರೆ, ವಿಜ್ಞಾನ ಕ್ಷೇತ್ರದ ಒಳಗಿನ ವಿಮರ್ಶಕನಾಗಿದ್ದ. ಇಂದು ನಾವು 'ದಿ ಸ್ಟ್ರಕ್ಚರ್ ಆಫ್ ಸೈಂಟಿಫಿಕ್ ರೆವಲ್ಯೂಷನ್ಸ್' ನಂತಹ ಅಪೂರ್ವ ಕೃತಿಯ ಕರ್ತೃ ಥಾಮಸ್ ಕುನ್‌ನನ್ನು ಆಧುನಿಕ ಪಾಶ್ಚಿಮ್ಯ ವಿಜ್ಞಾನದ ಬಹುದೊಡ್ಡ ವ್ಯಾಖ್ಯಾನಕಾರ-ವಿಮರ್ಶಕನೆಂದು ಪರಿಗಣಿಸುತ್ತೇವೆ. ಆದರೆ, ಕುನ್ ಹುಟ್ಟುವ ಎಷ್ಟೋ ವರ್ಷಗಳ ಮೊದಲೇ ವಾಲೇಸ್ ಅಂತಹುದೊಂದು ಮಾರ್ಗವನ್ನು



ಉದ್ಘಾಟಿಸಿಕೊಟ್ಟಿದ್ದ. 'ದಿ ವಂಡರ್‌ಫುಲ್ ಸೆಂಚುರಿ' ಯೆಂಬ ಗ್ರಂಥದಲ್ಲಿ ಆತ ಮೊದಲ ಮುನ್ನೂರು ಪುಟಗಳುದ್ದಕ್ಕೂ ತನ್ನ ರಾಣಿ ವಿಕ್ಟೋರಿಯಾ ಯುಗದ ವಿಜ್ಞಾನವನ್ನು ಮನದುಂಬಿ ಸ್ತುತಿಸುತ್ತಾನೆ, ಅದರ ಸಾಧನೆಗಳನ್ನು ಶ್ರೇಷ್ಠವಾದುವೆಂದು ಕೊಂಡಾಡುತ್ತಾನೆ. ಆಮೇಲೆ ಥಟ್ಟನೆ ನಿಂತು, ಹೇಳುತ್ತಾನೆ – ಆಧುನಿಕ ವಿಜ್ಞಾನ ತನ್ನ ಪ್ರಾಬಲ್ಯ ಸ್ಥಾಪಿಸುವ ಗಳಿಗೆಗಳಲ್ಲಿ ಬಲಾತ್ಕಾರಿಯೂ ಆಗುವ ದಟ್ಟ ಸಾಧ್ಯತೆಗಳುಂಟು, (ಇದನ್ನೆ ಎಡ್ವರ್ಡ್ ಸೈದ್‌ನನ್ನು ಅನುಸರಿಸಿ ಹೇಳುವುದಾದರೆ - ವಿಜ್ಞಾನ ತನ್ನ ಯಜಮಾನಿಕೆಯನ್ನು ಕಟ್ಟಿಕೊಳ್ಳುವಲ್ಲಿ ದಮನಕಾರಿಯೂ ಆಗುವುದುಂಟು) ವಾಲೇಸ್ ಮುಂದುವರೆದು ಹೇಳುತ್ತಾನೆ – ಇಂಥ ಅಪಾಯವನ್ನು ದಾಟಿಕೊಳ್ಳಬೇಕೆಂದರೆ, ಆಧುನಿಕ ವಿಜ್ಞಾನಿ ತನ್ನ ವಾದಗಳಿಗೆ ವಿರೋಧವಾದಗಳನ್ ಪರ್ಯಾಯಗಳನ್ನು ತಾನೇ ಸೃಷ್ಟಿಸಿಕೊಳ್ಳಬೇಕು; ತನ್ನ ಚಿಂತನೆಗೆ ತೀರಾ ತದ್ವಿರುದ್ಧರಾದುದನ್ನೂ ತನ್ನ ಪ್ರಜ್ಞೆಯ ಮುಖ್ಯವಾದೊಂದು ಭಾಗವಾಗಿ ಸಲಹಿಕೊಂಡಿರಬೇಕು; ಏಕೆಂದರೆ ಮುಂದೊಂದು ದಿನ, ಇಂದು ಅಸತ್ಯವೆಂದು ತೋರುವುದೆ ಸತ್ಯದ ಪ್ರಭೆಯೊಂದಿಗೆ ಬೆಳಗಬಹುದು. ಇಂಥ ಸ್ವಪೀಕ್ಷಾತ್ಮಕ ಗುಣದಿಂದ ಮಾತ್ರ ವಿಜ್ಞಾನ ಸಂತುಲಿತ ಬೆಳವಣಿಗೆಯನ್ನು ಕಾಣಬಲ್ಲದು.

ಇಂಥ ನಿಲುವಿಗೆ ಬದ್ಧನಾಗಿ ವಾಲೇಸ್ ಇಂದಿನ ನಮಗೆ ಅಚ್ಚರಿಯೆನಿಸುವಂತಹ ಅನೇಕ ಕಾರ್ಯಗಳನ್ನು ಮಾಡಿದ. ಉದಾಹರಣೆಗೆ, ಅಂದು ಅದ್ಭುತ ಸಾಧನೆಯೆಂದು ಕೀರ್ತಿಸಲ್ಪಟ್ಟ ವ್ಯಾಕ್ಸಿನೇಷನ್ ತಂತ್ರವನ್ನು ಕಟುವಾಗಿ ವಿರೋಧಿಸಿದವರಲ್ಲಿ ಆತ ಮೊದಲಿಗನಾಗಿದ್ದ. ತಾನೇ ರೂಪಿಸಿದ ವಿಕಾಸವಾದಕ್ಕೆ ತೀರಾ ಭಿನ್ನವಾದ ಪರ್ಯಾಯ ವಾದಗಳನ್ನು ಆತ ಸ್ವತಃ ಕಲ್ಪಿಸಿಕೊಂಡ ಅವುಗಳನ್ನು ಪರೀಕ್ಷೆಗೊಡ್ಡಲು ತೊಡಗಿದ್ದ. ಇನ್ನೂ ಮುಂದುವರೆದು ಆತ ಆಧ್ಯಾತ್ಮವೆನ್ನುವುದು ಪರ್ಯಾಯ ವಿಜ್ಞಾನ ರಾಪವೊಂದೆಂದು ಪ್ರತಿಪಾದಿಸಿದ; ಉಗ್ರ ವಿಜ್ಞಾನವಾದಿಗಳ ಎದುರು ಆಧ್ಯಾತ್ಮವನ್ನು ಸಮರ್ಥಿಸಿದ. ಇವೆಲ್ಲವನ್ನೂ ಆತ ಮಾಡಿದ್ದು ವಿಜ್ಞಾನವಿರೋಧಿಯಾಗೇನಲ್ಲ. ವಿಜ್ಞಾನವನ್ನು ನಂಬಿದ್ದು, ಸ್ವತಃ ವಿಜ್ಞಾನಿಯಾಗಿದ್ದು ಆತ, ತನ್ನ ಯುಗದ ವಿಜ್ಞಾನ ಅಧಿಪತ್ಯವನ್ನು ಸ್ಥಾಪಿಸಿಕೊಳ್ಳುತ್ತಿದ್ದ ಕಾಲಘಟ್ಟದಲ್ಲಿಯೇ, ಅದನ್ನು ಪ್ರಶ್ನಿಸುವ ಪಲ್ಲಟಗೊಳಿಸುವ ವಿಮರ್ಶಾವಿಧಾನಗಳನ್ನು ಅದರ ಶೋಧನಾಮಾದರಿಯ ಅಂತರ್ಗತವಾದೊಂದು ಅಂಶವಾಗಿಯೇ ನೆಲೆಗೊಳಿಸಲು ಸೆಣೆಸಿದ ಆಮೂಲಕ, ವಿಜ್ಞಾನ ಏಕದೃಷ್ಟಿ ಸೀಮಿತವಾಗುವ ಹಾಗೂ ಏಕಾಧಿಪದ್ಯ ಮೋಹಯಾಗುವ ಅಪ್ಯವನ್ನು ತಡೆಯಲು ಯತ್ನಿಸಿದ.

ಥಿಯಾಸೊಫಿ ವಾಲೇಸ್ ಕನಸಿದಂತಹ ಬಹುಮುಖಿ ಆತ್ಮಪ್ರತಿಫಲನಾತ್ಮಕ

ವಿಜ್ಞಾನವಷ್ಟೆ ಅಲ್ಲದೆ ಪರ್ಯಾಯ ಜೀವನದರ್ಶನಗಳ ಹಾಗೂ ಪರ್ಯಾಯ ಜೀವನಮಾರ್ಗಗಳ ಹುಡುಕಾಟವನ್ನು ನಡೆಸಿತು. ಅದು ಮಾನವನ ಬಾಲ್ಯಾವಸ್ಥೆಯ ಕುರಿತು ವಿಶೇಷ ಆಸಕ್ತಿ ತಾಳಿ, ಆ ಅವಸ್ಥೆಯಲ್ಲಿ ಹೊಸದೊಂದು ರೀತಿಯ ಶಿಕ್ಷಣವನ್ನು ನೀಡುವುದರ ಮೂಲಕ ಮಾನವ ಜೀವಿಯ ಭವಿಷ್ಯವನ್ನು ಉಜ್ವಲವಾಗಿ ರೂಪಿಸಲು ಸಾಧ್ಯವೇ ಎಂದು ಅನೇಕ ಪ್ರಯೋಗಗಳಲ್ಲಿ ತೊಡಗಿಕೊಂಡಿತು. ಜೀವನದ ಬಗೆಗೆ, ಮಾನವನ ಬಗೆಗೆ, ಬಾಲ್ಯದ ಬಗೆಗೆ, ಭವಿಷ್ಯದ ಬಗೆಗೆ, ವಿಜ್ಞಾನ-ಶಿಕ್ಷಣಗಳ ಬಗೆಗೆಗ ಥಿಯಾಸೊಫಿಸ್ಟರು ಕಟ್ಟಿಕೊಂಡಿದ್ದ ನವೋನ್ನವ ಸಿದ್ಧಾಂತಗಳ ಈ ಪ್ರಯೋಗಗಳಿಗೆ ಪಾತಳಿಯನ್ನು ಹಾಕಿಕೊಟ್ಟಿದ್ದವು. ಥಿಯಾಸೊಫಿಯ ಹೊರಗೂ ಕೂಡ ಆಗ ಹೊಸಹೊಸ ರೀತಿಯ ಶಿಕ್ಷಣ ಸಿದ್ಧಾಂತಗಳು ಚಾಲ್ತಿಗೆ ಬರತೊಡಗಿದ್ದವು. ಈ ನಡುವೆ ಯೂರೋಪಿನ ಕೆಲವೆಡೆ 'ಕಾಡುಹುಡುಗ' ಕಂಡು ಬಂದಿದ್ದು, ಆ ವ್ಯಕ್ತಿತ್ವ ದೊಡ್ಡದೆಂದು ಕೋಲಾಹಲಕ್ಕೂ ವಾದ-ವಿವಾದಕ್ಕೂ ಕಾರಣವಾಗಿತ್ತು. ಮೂಲತಃ ಮನುಷ್ಯ ಜಾತಿಯವರಾಗಿದ್ದು, ಶೈಶವದಲ್ಲಿಯೆ ಘಟಿಸಿದ ಯಾವದೊ ಆಕಸ್ಮಿಕದಿಂದ ಕಾಡಿನಲ್ಲಿ ಬಾಳಬೇಕಾಗಿಬಂದು, ಮಾನವ ಸಮಾಜದ ಸಂಪರ್ಕವಿಲ್ಲದೆಯೆ ಬೆಳೆದು, ಈಗ ಮತ್ತೊಂದ ಆಕಸ್ಮಿಕದಿಂದ ನಾಗರಿಕ ಮನುಷ್ಯರ ಕೈಗೆ ಸಿಕ್ಕ ಇಂಥ 'ಅನಾಗರಿಕ', ಪ್ರಾಕೃತಿಕ ಬಾಲರು ಆಗಿನ ಶಿಕ್ಷಣ ತಜ್ಞರಿಗೆ ದೊಡ್ಡ ಸವಾಲಾಗಿಯೂ ತೋರಿದ್ದರು. ಅವರನ್ನು ಅಧ್ಯಯನದ ಅಂಕಣವನ್ನಾಗಿ ಬಳಸಿಕೊಂಡು, ಮಾನವನ ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ಪ್ರಕೃತಿಯ ಪಾಲೆಷ್ಟು, ಸಂಸ್ಕೃತಿಯ ಪಾಲೆಷ್ಟು ಎಂಬುದನ್ನು ಕುರಿತಾದ (       ) ಪ್ರಶ್ನೆಯನ್ನು ಪರಿಹರಿಸಿಕೊಳ್ಳುವ ಅನೇಕ ಪ್ರಯತ್ನಗಳೂ ಆಗ ನಡೆದಿದ್ದವು. ಥಿಯಾಸೊಫಿ ಸಮುದಾಯದ ಪ್ರಮುಖ ಸದಸ್ಯೆಯೋರ್ವಳಾಗಿದ್ದ, ಮುಂದೆ ದೊಡ್ಡ ಶಿಕ್ಷಣತಜ್ಞೆಯಾಗಿ ಹೆಸರು ಮಾಡಿದ ಮಾರಿಯಾ ಮಾಂಟೆಸರಿ ಸ್ವತಃ ಅಂತಹ 'ತಾಡುಹುಡುಗ'ನ ಅಭ್ಯಾಸ ನಡೆಸಿ, ಅದರ ಮೂಲಕ ಹೊಸ ಶಿಕ್ಷಣ ಸಿದ್ಧಾಂತಗಳನ್ನು ಹಾಗೂ ಮಾದರಿಗಳನ್ನು ಅನ್ವೇಷಿಸಿಕೊಳ್ಳಲು ಶ್ರಮಿಸಿದ್ದಳು. ಇದೇ ಕಾಲಘಟ್ಟದಲ್ಲಿ ಬೇಡಮ್-ಫೊವೆಲ್ ನಂಥವನ್ನು ಬಾಯ್-ಸ್ಕೌಟ್ ಚಳವಳಿಯನ್ನು ಆರಂಭಿಸಿ, ಆ್ಯನಿ ಬೆಸೆಂಟ್ ನಂಥವಳು ಆ ಬಾಯ್-ಸ್ಕೌಟ್ ವ್ಯಕ್ತಿತ್ವ ಮಾದರಿಯನ್ನು ಪರಿಷ್ಕರಿಸಿ, ಒಟ್ಟಾರೆಯಾಗಿ ಬಾಲ್ಯಾವಸ್ಥೆಯೆನ್ನುವುದು ಮಾನವವ್ಯಕ್ತಿತ್ವದ ಅಭಿವೃದ್ಧಿಯ ಕುರಿತಾದ ಹಲವು ಪ್ರಯೋಗಗಳ - ಅವುಗಳಲ್ಲಿ ಕೆಲವು ಘನಗಂಭೀರ ವಾದವಾಗಿದ್ದರೆ ಇನ್ನು ಕೆಲವು ಅಷ್ಟೆ ಹಾಸ್ಯಾಸ್ಪದವೂ ಬಿಳಿಯರ ಸೊಕ್ಕನ್ನು ಬೆಳೆಸುವಂಥವೂ ಆಗಿದ್ದವು – ಕ್ಷೇತ್ರವಾಗಿತ್ತು. ಥಿಯಾಸೋಫಿಸ್ಟರ ಮಟ್ಟಿಗೆ ಬಾಲ್ಯಕಾಲ ಮಾನವ ಜೀವನದ ಅತ್ಯಂತ ಪವಿತ್ರವೂ ಮಹತ್ತರವೂ ಆದ ಕಾಲಘಟ್ಟವಾಗಿತ್ತು.



ಹೀಗೆ ಒಂದೆಡೆ ಬಾಲ್ಯದ ಕುರಿತು ತಮ್ಮ ಉದಾತ್ತೀಕೃತ ಪರಿಕಲ್ಪನೆ, ಇನ್ನೊಂದೆಡೆ ಜೀವವಿಕಾಸವಾದದ ವಾಸ್ತವಗಳೆರಡರ ನಡುವೆ ನಿಂತ ಥಿಯಾಸೊಫಿಯನ್ನರು ಆ ಕಾರಣ ಕೆಲವೊಂದು ತೀರಾ ಇಕ್ಕಟ್ಟಿನ ಪ್ರಶ್ನೆಗಳನ್ನು ಎದುರಿಸಬೇಕಾಯಿತು. ಉದಾಹರಣೆಗೆ, ಅವರು ಬಾಲ್ಯವನ್ನು ಎಷ್ಟೆ ಉನ್ನತೀಕರಿಸಿದರೂ ಕೂಡ, ಮಕ್ಕಳಲ್ಲಿ ಕೆಲವರು ಜನ್ಮತಃ ದೇವಗುಣಿಗಳಾಗಿರುತ್ತಾರೆ, ಇನ್ನು ಕೆಲವರು ರಾಕ್ಷಸಗುಣಿಗಳಾಗಿರುತ್ತಾರೆ, ಕೆಲವರುಹುಟ್ಟಾ ಸುರೂಪಿಗಳಾಗಿದ್ದು ಇನ್ನು ಕೆಲವರು ಹುಟ್ಟಾ ಕುರೂಪಿಗಳೊ ವಿಕಲಾಂಗರೊ ಆಗಿರುತ್ತಾರೆ ಎನ್ನುವ ಭೌತಿಕ ಸತ್ಯವನ್ನು ಅಲ್ಲಗಳೆಯಲಾಗಲಿಲ್ಲ. ಇಂಥ ಭಿನ್ನತೆ - ಅಸಮಾನತೆಗಳಿಗೆ ವಿಕಾಸವಾದ ನೀಡುವ ಶುದ್ಧ ವೈಜ್ಞಾನಿಕ ವಿವರಣೆ ಅವರಿಗೆ ಸಮಾಧಾನ ಕೊಡಲಿಲ್ಲ. ಅಂಥ ಬಿಕ್ಕಟ್ಟಿನಲ್ಲಿ ಅವರು ಅತ್ಯಂತ ಸ್ವಾರಸ್ಯದ ನಿಲಿವೊಂದನ್ನು ಅಳವಡಿಸಿಕೊಂಡರು; ಇಂಥ ಜನ್ಮಮೂಲದ ವ್ಯತ್ಯಾಸ-ವಿಷಯತೆಗಳಿಗೆ ಜನ್ಮಾಂತರದ ಪಾಪ-ಪುಣ್ಯಗಳ ಕಾರಣವೆಂದೂ ಮಾನವಜೀವ ಮಪುಹುಟ್ಟುಗಳಲ್ಲಿ ತನ್ನನ್ನು ಶುದ್ಧೀಕರಿಸಿಕೊಳ್ಳುತ್ತಿದ್ದಂತೆ ಆ ವಿಷಮತೆಗಳು ತೊಳೆದು ಹೋಗುವುವೆಂದೂ ಅವರು ಪ್ರತಿಪಾದಿಸಿದರು. ವಿಕಾಸವಾದದ ವೈಜ್ಞನಿಕ ಚೌಕಟ್ಟು ಅತ್ಯಂತ ಸೆಕ್ಯುಲರ್ ಆಗಿತ್ತು; ಅದರಲ್ಲಿ ಪಾರಭೌತಿಕ ಅಂಶಗಳಿಗೆ ಪ್ರವೇಶವೆ ಇರಲಿಲ್ಲ; ಅದು ಆಗಲೆ ಪುಹರ್ಜನ್ಮದಂತಹ ಪರಿಕಲ್ಪನೆಗಳನ್ನು ಕೊಂದಾಗಿತ್ತು. ಅಂಥ ಸನ್ನಿವೇಶದಲ್ಲೂ ಥಿಯಾಸೊಫಿಸ್ಟರು ಪುನರ್ಜನ್ಮದ ಕಲ್ಪನೆಗೆ ಪುನರ್ಜನ್ಮ ನೀಡಿ ಅದನ್ನು ತಂದು ವಿಕಾಸವಾದದ ಕಟ್ಟಾ ಭೌತಿಕ ಚೌಕಟ್ಟಿನೊಳಗೆ ಸೇರಿಸಲೆಳಸಿದರು. ಅವರ ಆ ಪ್ರಯತ್ನ ಜೀವನದ ಭಾವಾರ್ಥ ಸಾಧ್ಯತೆಯನ್ನೆಲ್ಲ ನಾಶಗೊಳಿಸಿದ್ದ ಆಧುನಿಕ ವಿಜ್ಞಾನದ ಒಳಗೆ, ಅಂಥದೊಂದು ಭಾವಾರ್ಥ ವ್ಯವಸ್ಥೆ - (       ) ಯನ್ನು ಮರುಸ್ಥಾಪಿಸುವ ಪ್ರಯತ್ನವೆ ಆಗಿತ್ತು.

ಥಿಯಾಸೊಫಿಸ್ಟರ ಈಯೆಲ್ಲ ಚಿಂತನೆಗಳೂ ಚಟುವಟಿಕೆಗಳೂ ಉತ್ತುಂಗವೊಂದನ್ನು ಮುಟ್ಟಿದ್ದು ಇಲ್ಲ, ಭಾರತದಲ್ಲಿ. ಬಾಲ್ಯ ಮತ್ತು ಬಾಲಕರ ಕುರಿತಾದ ಅವರ ಜಿಜ್ಞಾಸೆಯ ಬೇರೆಬೇರೆ ಮಜಲುಗಳಲ್ಲಿ ಒಂದೆರಡನ್ನು ಮೇಲೆ ನೋಡಿಯಾಗಿದೆ. ಅಂಥದೆ ಇನ್ನೊಂದು ಮಂದಮತಿ ಬಾಲಕರನ್ನೂ ಅತಿಮಾನುಷಮತಿ ಬಾಲಕರನ್ನು ಕುರಿತಾದುದು. ಮೊದಲನೆಯ ವರ್ಗವನ್ನು ಥಿಯಾಸೊಫಿಸ್ಟರು ನೋಡಿಯಾಗಿತ್ತು; ಕಲಿಯಲಾಗದ ಬಾಲರಿಗೆ ಕಲಿಸುವುದ ಹೇಗೆಂದು ಅನೇಕ ಪ್ರಯೋಗಗಳನ್ನು ಕೈಗೊಂಡಾಗಿತ್ತು. ಎರಡನೆಯ ವರ್ಗದ ಬಗ್ಗೆ ಅವರು ಪರಿಕಲ್ಪಿಸಿಕೊಂಡಿದ್ದರೆ ಹೊರತು ಅದರ ಪ್ರತ್ಯಕ್ಷ ರೂಪವೊಂದನ್ನು ನೋಡುವ ಅವಕಾಶ ಅವರಿಗೆ ದೊರೆತಿರಲಿಲ್ಲ.

ಎಷ್ಟೊ ದಿನಗಳ ಅನಂತರ ಆ ಆಸೆ ಫಲಿಸಿತು - ಅಕಸ್ಮಾತ್ತಾಗಿ, ಮದ್ರಾಸಿನ ಮರೀನಾ ಸಮುದ್ರದಂಡೆಯಲ್ಲಿ. ಅಲ್ಲಿ ಪ್ರತ್ಯಕ್ಷನಾದ ಅತಿಮಾನುಶ ಬಾಲಕ ಮತ್ತಾರೂ ಅಲ್ಲ - ಆತ ಜಿದ್ದು ಕೃಷ್ಣಮೂರ್ತಿ. ಮುಂದೆ. ಜೆ.ಕೆ., ಥಿಯಾಸೊಫಿಸ್ಟರ ಇನ್ನೂ ಅನೇಕ ಪ್ರಯೋಗಗಳ ಕೇಂದ್ರವಾದರು; ಜ್ಞಾನ-ವಿಜ್ಞಾನ ಆಧ್ಯಾತ್ಮ ಮಾನವ ವ್ಯಕ್ತಿತ್ವ-ಬಾಲ್ಯ-ಶಿಕ್ಷಣ ಮನುಕುಲದ ಭವಿಷ್ಯ ಇತ್ಯಾದಿಗಳ ಕುರಿತಾದ ಥಯಾಸೋಫಿ,ಟ ತತ್ವಗಳ ಪರೀಕ್ಷಾಣಾಕ್ಷೇತ್ರವಾದರು.

ವ್ಯಕ್ತಿಗತ ನೆಲೆಯಲ್ಲಿ ಹೇಳುವುದಾದರೆ, ಗೆಡಿಸ್ ನನ್ನ ಅತಿಮೆಚ್ಚಿನ ವಿಜ್ಞಾನಿ, ಕಳೆದ ಶತಮಾನದ ಅತಿಶ್ರೇಷ್ಠ ಪರಿಸರವಾದಿ. ಅಷ್ಟೇ ಅಲ್ಲ, ಮರೆವು ಎಂಬ ಮರಳಿನಲ್ಲಿ ಹೂತುಹೋದ ಹೋರಾಟಗಳಿಗೆಂದೆ ಸಂಸ್ಥೆಯೊಂದನ್ನು ಸ್ಥಾಪಿಸುವುದಾದರೆ, ಅದರ ಮುಖ್ಯಸ್ಥನ ಸ್ಥಾನಕ್ಕೆ ನನ್ನ ಅತಿಮೆಚ್ಚಿನ ಅಭ್ಯರ್ಥಿ ಗೆಡಿಸ್. ಚಾರ್ಲ್ಸ್ ಡಾರ್ವಿನ್ ಆತನನ್ನು ತನ್ನ ಜೀವಿಕಾಲದಲ್ಲಿಯೆ ಕಂಡುಕೊಂಡ ತನ್ನ ಉತ್ತರಾಧಿಕಾರಿಯೆಂದೆ ತಿಳಿದಿದ್ದ. ಇಷ್ಟಾಗಿ ಗೆಡಿಸ್‌ನ ಕೈಯಲ್ಲಿದ್ದುದು ಒಂದೇ ಒಂದು ಪದವಿ. ಸಾಂಪ್ರದಾಯಕ ಶಿಕ್ಷಣದ ಬಗೆಗೆ ತುಂಬ ಗೌರವರೇನೂ ಇರದಿದ್ದ ಗೆಡಿಸಿ ಒಮ್ಮೆ ಗೆಳೆಯರ ಬಳಿ 'ಡಿಗ್ರಿ-ಗಿಗ್ರಿಯೆಲ್ಲ ಯಾವ ಪ್ರಯೋಜನಕ್ಕೆ? ಅಂತಹ ಪರೀಕ್ಷೆಗಳನ್ನು ಯಾವ ಕತ್ತೆಯಾದರೂ ಪಾಸು ಮಾಡಬಹುದು,' ಅಂತನಂತೆ. ಅದಕ್ಕೆ ಓರ್ವ ಗೆಳೆಯ ' ಹಾಗಾದರೆ ನೀನೂ ಒಂದು ಡಿಗ್ರಿಯನ್ನು ಪಡೆದು ತೊರಿಸು' ಎಂದನಂತೆ. ಆ ಸವಾಲನ್ನು ಸ್ವೀಕರಿಸಿ ಗೆಡಿಸ್ ಪಡೆದ ರಾಯಲ್ ಸ್ಕೂಲ್ ಆಫ್ ಮೆಟಲರ್ಜಿ ಆ್ಯಂಡ್ ಮೈನಿಂಗ್ ನ ಡಿಗ್ರಿ ಆತ ಗಳಿಸಿದ ಏಕೈಕ ಡಿಗ್ರಿ. ಅದಕ್ಕಿಂತ ಹೆಚ್ಚು ಪದವಿಗಳ ಬಲವಿಲ್ಲದಿದ್ದರಿಂದ ಆತನಿಗೆ ಯಾವ ಪ್ರೊಫೆಸರ್ ಪಟ್ಟವೂ ಸಿಗಲಿಲ್ಲ. ಆತನ ಕುರಿತಾಗಿಕಳಘೆದ ಹತ್ತಿಪ್ಪತ್ತು ವರ್ಷಗಳಲ್ಲೆ ಏಳೆಂಟು ಜೀವನಚರಿತ್ರೆಗಳು ಬಂದಿವೆಯಾದರೂ ಆತನ ವಿರಾಟ್ ಪ್ರತಿಭೆಯ ಹತ್ತಂಶವನ್ನಾದರೂ ಹಿಡಿಯಲು ಅವುಗಳಿಗೆ ಸಾಧ್ಯವಾಗಿಲ್ಲ.

ಭಾರತದ ಸ್ವದೇಶಿ ಚಳವಳಿ ಪಶ್ಚಿಮವನ್ನು ಸರಿಯಾಗಿ ಗ್ರಹಿಸಿಲ್ಲವೆಂದೂ, ಅದು ಆಧುನಿಕ ಪಾಶ್ಚಿಮಾತ್ಯ ವಿಜ್ಞಾನವನ್ನು ಭಾಗಶಃ ಮಾತ್ರ ಅರ್ಥಮಾಡಿಕೊಂಡು ಆ ಭಾಗದ ಮೇಲಷ್ಟೆ ನಿರಂತರ ಟೀಕಾಪ್ರಹಾರವನ್ನು ನ್ನಡೆಸುತ್ತಿದೆಯೆಂದೂ ಗೆಡಿಸ್ ವಾದಿಸಿದ. ಇದಕ್ಕೆ ಮುಖ್ಯ ಕಾರಣ ಭಾರತ ಪಶ್ಚಿಮದಿಂದ ಆಮದು ಮಾಡಿಕೊಂಡ ವಿಶ್ವವಿದ್ಯಾನಿಲಯ ವ್ಯವಸ್ಥೆಯೆ ದೋಷಪೂರಿತವಾಗಿತ್ತೆಂದು ಆತ ಆಕ್ಷೇಪಿಸಿದ. ಈ ವಿಷಯದ ಕುರಿತಾಗಿ ಗೆಡಿಸ್ ವಿಸ್ತೃತಚರ್ಚೆಯೊಂದನ್ನೆ ನಡೆಸುತ್ತಾನೆ. ಆತನ ಪ್ರಕಾರ, ಪಶ್ಚಿಮದ ವಿಶ್ವವಿದ್ಯಾನಿಲಯಗಳು ಆಧುನಿಕಪೂರ್ವ ಕಾಲದ ಅನೇಕ ಶತಮಾನ



ಗಳುದ್ದಕ್ಕೂ ಅನ್ಯ, ಭಿನ್ನ ಜ್ಞಾನ ಪ್ರಸ್ಥಾನಗಳೊಡನೆ ಸತತವಾದ ಸಂವಾದ-ವಿವಾದಗಳನ್ನು ನಡೆಸುವ ಮುಖಾಂತರವೆ ಬೆಳೆದುಬಂದಂಥವಾಗಿದ್ದವು; ತಮ್ಮ ತಮ್ಮ ಜ್ಞಾನಸಂಗ್ರಹದ ಕ್ರಮವೂ ಹಾಗೆ ಸಂಗ್ರಹಿಸಿದ್ದನ್ನು ಜ್ಞಾನವ್ಯವಸ್ಥೆಯನ್ನಾಗಿ ಕಟ್ಟುವ ಕ್ರಮವೂ ತಮ್ಮ ತಮ್ಮ ಪರಿಸರದೊಡನೆ ಅನ್ಯೋನ್ಯ ಸಂಬಂಧವನ್ನಿಟ್ಟುಕೊಂಡೆ ಬೆಳೆಯಬೇಕು ಎಂದು ನಂಬಿದ್ದವು. ಗೆಡಿಸ್ ಹೇಳುವಂತೆ, ಯೂನಿವರ್ಸಿಟಿಗಳ ಈ ಸ್ವರೂಪ ಆಧುನಿಕ ಯುಗದ ಪ್ರಾರಂಭಿಕ ಘಟ್ಟದಲ್ಲಿ ಕೆಲವು ಪಲ್ಲಟಗಳನ್ನು ಕಂಡಿತು. ಈ ಪಲ್ಲಟಗಳು ಮೊದಲು ಫ್ರಾನ್ಸ್‌ನಲಗ್ಲಿ ಶುರುವಾಗಿ, ಮುಂದೆ ಜರ್ಮನಿಯೊಂದನ್ನು ಹೊರತುಪಡಿಸಿ ಇಂಗ್ಲಂಡೂ ಸೇರಿತಂತೆ ಉಳಿದೆಲ್ಲ ಐರೋಪ್ಯ ದೇಶಗಳಲ್ಲಿ ಹರಡಿದವು. ಸ್ಥೂಲವಾಗಿ ಹೇಳುವುದಾದರೆ, ಫ್ರೆಂಚ್ ಯೂನಿವರ್ಸಿಟಿಗಳು ತಮ್ಮ ಸ್ವರೂಪ-ಸಂರಚನೆಗಳಲ್ಲಿ ತಮ್ಮ ಕಾಲದ ಎರಡು ಮುಖ್ಯ ತತ್ವಗಳನ್ನು ಅಳವಡಿಸಿಕೊಳ್ಳಲುಯತ್ನಸಿದವು: ಮೊದಲನೆಯದಾಗಿ, ವೈಜ್ಞಾನಿಕತೆಯ ತತ್ವವನ್ನು ಅಳವಡಿಸಿಕೊಳ್ಳುವಲ್ಲಿ, ಆಮೊದಲು ವಿಶ್ವಕೋಶಗಳಲ್ಲಿ ಭಿನ್ನ ಭಿನ್ನ ವಿಷಯಗಳಾಗಿ ವಿಂಗಡನೆಯಾದುವನ್ನು ಭಿನ್ನ ಭಿನ್ನ ಜ್ಞಾನವಿಭಾಗಗಳಾಗಿ ಮಾರ್ಪಡಿಸಿತವು; ಎರಡನೆಯದಾಗಿ, ಪ್ರಜಾಪ್ರಭುತ್ವತ ತತ್ವವನ್ನು ಆಳವಡಿಸಿಕೊಳ್ಳಲೆಂದು ಜೀನೀ ಶಿಕ್ಷಣ ವ್ಯವಸ್ಥೆಯ ಬಹುಮುಖ್ಯ ಂಗವಾಗಿದ್ದ ಪರೀಕ್ಷಾ ಪದ್ಧತಿಯನ್ನು ಎರವಲು ತಂದುಕೊಂಡವು. ಈ ಕ್ರಮ ಒಂದು ದೃಷ್ಟಿಯಲ್ಲಿ ಸಹಜವೂ ಇತ್ಯಾತ್ಮಕವೂ ಆಗಿ ಕಾಣಬಹುದ್ದಾದರೂ ಇನೊಂದು ದೃಷ್ಟಿಯಲ್ಲಿ ಸಹಜವೂ ಇತ್ಯಾತ್ಮಕವೂ ಆಗಿ ಕಾಣಬಹುದಾದರೂ ಇನ್ನೊಂದು ದೃಷ್ಟಿಯಿಂದ ಅದು ಕೆಲವು ಅನಪೇಕ್ಷಿತ ಪರಿಣಾಮಗಳಿಗೆ ಕಾರಣವಾದದ್ದೂ ಹೌದು. ಉದಾಹರಣೆಗೆ, ಜ್ಞಾನಭಂಡಾರವನ್ನು ಬೇರೆಬೇರೆ ವಿಭಾಗಗಳಾಗಿ ಒಡೆದುದು ಮೊದಲಿನ ಅಖಂಡ ಮನೋಧರ್ಮವನ್ನು ವಿಖಂಡಿತಗೊಳಿಸಿತು, ಮತ್ತು ಜ್ಞಾನಶಾಖೆಗಳ ನಡುವೆ ಮೊದಲಿದ್ದ ಸರ್ವಸಮಾನತೆಯನ್ನು ತರತಮದ ಶ್ರೇಣಿಯಾಗಿ ಪರಿವರ್ತಿಜಸಿತು. ಹಾಗೆಯೆ ಆ ವ್ಯವಸ್ಥೆಯಲ್ಲಿ ಮೊದಲು ಸಜೀವ ಸಂವಾದ ಹೂಗಾ ಸಂಶೋಧನೆಗಳಿಗಿದ್ದ ಮಪತ್ವ ಈಗ ಶುಷ್ಕ ಪರೀಕ್ಷಾ ಪದ್ಧತಿಯ ಪಾಲಾಯಿತು.

ಗೆಡೆಸ್ ಹೇಳುವಂತೆ, ಭಾರತ ಬ್ರಿಟಿಷರಿಂದ ಬಳುವಳಿಯಾಗಿ ಪಡೆದದ್ದು ಪರೀಕ್ಷಾಕೇಂದ್ರಿತ ಲಂಡನ್ ಯೂನಿವರ್ಸಿಟಿಯ ಮಾದರಿಯನ್ನೆ ಹೊರತು ಅನ್ವೇಷಣೆ ಮತ್ತು ಬೋಧನೆಗಳನ್ನು ಆದ್ಯತೆಯಾಗಿಟ್ಟುಕೊಂಡಿದ್ದ ಜರ್ಮನ್ ಯೂನಿವರ್ಸಿಟಿಯ ಮಾದರಿಯನ್ನಲ್ಲ. ಭಾರತದ ವಸಾಹತು-ಸ್ಥಿತಿಯೂ ಇದಕ್ಕೆ ಅರ್ಧಭಾಗ ಕಾರಣವಾಗಿತ್ತು. ಇಲ್ಲಿ ಬ್ರಿಟಿಷರು ತಮ್ಮ ತಾಯ್ನಾಡಿನ ಶೈಕ್ಷಣಿಕ ವ್ಯವಸ್ಥೆಯನ್ನು

ಸ್ಥಾಪಿಸಿಯಾದಮೇಲೆ ಆಧುನಿಕ ಪಾಶ್ಚಿಮಾತ್ಯ ವಿಜ್ಞಾನ ಭಾರತವನ್ನು ಪ್ರವೇಶಿಸಿದ್ದೇನೊ ಹೌದು. ಆದರೆ, ಗೆಡಿಸ್‌ನ ಪ್ರಕಾರಆ ವಿಜ್ಞಾನ ಎರಡನೆಯ ದರ್ಜೆಯ ವಿಜ್ಞಾನವಾಗಿತ್ತು. ಪಾಶ್ಚಿಮಾತ್ಯ ವಿಜ್ಞಾನದ ಒಳಗಡೆಯೆ ಮುಂದೆ ಅನೇಕ ಪರಿಷ್ಕರಣೆಗಳೂ ಮೂಲಭೂತ ಪಲ್ಲಟಗಳೂ ನಡೆದವು. ಉದಾಹರಣೆಗೆಗ ಜೀವಶಾಸ್ತ್ರ ಹಾಗೂ ಭೌತಶಾಸ್ತ್ರಿಗಳು ಹೊಚ್ಚಹೊಸ ಕಾಣ್ಕೆಗಳನ್ನು ಪಡೆದು, ವಿಜ್ಞಾನದ ಸ್ವರೂಪವನ್ನು ಕ್ರಾಂತಿಕಾರಕವಾಗಿ ಬದಲಾಯಿಸಿದ್ದು ಮಾತ್ರವಲ್ಲದೆ ತತ್ವಶಾಸ್ತ್ರದ ಮೇಲೂ ಗಾಢವಾದ ಪ್ರಭಾವವನ್ನು ಬೀರಿದವು; ತಮ್ಮ ತಮ್ಮ ಕ್ಷೇತ್ರಗಳ ಮೊದಲಿನ ತಿಳುವಳಿಕೆಯನ್ನು ಗಮನಾರ್ಹವಾಗಿ ತಿದ್ದಿದವು. ಭಾರತ ಮಾತ್ರ ಯಂತ್ರಸೀಮಿತವೂ ತಂತ್ರಜ್ಞಾನ ಕೇಂದ್ರಿತವೂ ಆದ ಪ್ರಾರಂಭಿಕ ಘಟ್ಟದ ವಿಜ್ಞಾನವನ್ನು ಮಾತ್ರ ಪಡೆದುಕೊಂಡು, ಅದನ್ನೆ ವಿಜ್ಞಾನ ಸರ್ವಸ್ವವೆಂದು ಭ್ರಮಿಸುವಂತಾಯಿತು. ಪಶ್ಚಿಮದಲ್ಲಾಗಲೆ ಥರ್ಮೊಡೈನಮಿಕ್ಸ್ ಎನ್ನುವ ಪರಿಷ್ಕೃತ ವಿಜ್ಞಾನ ಶಾಖೆಯೊಂದು ಬೆಳೆಯುತ್ತಿದ್ದರೆ, ಭಾರತ ಅದಾಗಲೆ ಗತಕಾಲೀನವೆಂದು ಗುರುತಿಸಲ್ಪಟ್ಟಿದ್ದ ಭೌತಶಾಸ್ತ್ರೀಯ ಶಕ್ತಿ-ಸಿದ್ಧಾಂತವನ್ನು ಇನ್ನೂ ನೆಚ್ಚಿಕೊಂಡಿತ್ತು.

ಇದಿಷ್ಟನ್ನು ವಿಸ್ತಾರವಾಗಿ ಹೇಳಿ ಗೆಡಿಸ್ ತನ್ನ ವಾದವನ್ನು ಹೀಗೆ ಮುಕ್ತಾಯ ಗೊಳಿಸುತ್ತಾನೆ: ಭಾರತದ, ಹಾಗೆಯೆ ಭಾರತೀಯ ರಾಷ್ಟ್ರೀಯತಾ ಚಳವಳಿಯ ದುರಂತವೆಂದರೆ, ಅವುಗಳು ಪಶ್ಚಿಮವನ್ನೂ ಪಶ್ಚಿಮದ ವಿಜ್ಞಾನವನ್ನೂ ಸಮಗ್ರವಾಗಿ ಗ್ರಹಿಸಲಿಲ್ಲ. ಆ ವಿಜ್ಞಾನದ ಒಳಗೆಯೆ ಹುಟ್ಟಿಬಂದ ಹೊಸ ಶಾಖೆ ಥರ್ಮೊಡೈನಮಿಕ್ಸ್‌ನ ದೂರಪ್ರಭಾವಗಳನ್ನೂ ಪರೋಕ್ಷ ಪರಿಣಾಮಗಳನ್ನೂ ಅವು ಅರಿಯದೆ ಉಳಿದವು. ಥರ್ಮೊಡೈಮಿಕ್ಸ್‌ನ್ನು ಅರಿತುಕೊಂಡಿದ್ದಲ್ಲಿ ಅಂದಿನ ಭಾರತೀಯರಿಗೆ ಪಶ್ಚಿಮದ ಹೊಸದೊಂದು ಮುಖವೂ ಕಾಣುತ್ತಿತ್ತು; ಹಿಂದಿನ ಕೆಲವು ದಶಕಗಳಲ್ಲಿ ಜರ್ಮನಿಯ ಸಂಥೆಟಿಕ್ ಕೆಮಿಸ್ಟ್ರಿ ಉದ್ಯಮ ಚಾಲ್ತಿಗೆ ತಂದಿದ್ದ ಕೃತಕ ರಸಗೊಬ್ಬರವನ್ನು ಆಧರಿಸಿದ ಕೃಷಿ ಪದ್ಧತಿಗೆ ಪರ್ಯಾಯವಾದ ಇನ್ನೊಂದು ಕೃಷಿಪದ್ಧತಿ ಅಲ್ಲಿ ರೂಪುಗೊಳ್ಳು ತ್ತಿರುವುದೂ ಪ್ರಾಮುಖ್ಯ ಪಡೆಯುತ್ತಿರುವುದೂ ಗೋಚರವಾಗುತ್ತಿತ್ತು; ಆ ಮೂಲಕ ಅದು ಪಶ್ಚಿಮದ ವಿಜ್ಞಾನಕ್ಕೆ ಹೆಚ್ಚು ಅರ್ಥಪೂರ್ಣವಾಗಿ ಸ್ಪಂದಿಸಲು ಸಾಧ್ಯವಾಗುತ್ತಿತ್ತು.

••• ••• •••

ವಿಜ್ಞಾನ ಮತ್ತು ವಿಶ್ವವಿದ್ಯಾನಿದಯ - ವ್ಯವಸ್ಥೆಯ ಕುರಿತಾದ ಗೆಡಿಸ್‌ನ ಈ ಮಾತುಗಳು ನಮ್ಮನ್ನು ಈ ಚರ್ಚೆಯಲ್ಲಿ ಸಕ್ರಿಯವಾಗಿ ಪಾಲುಗೊಂಡ ಇನ್ನೊರ್ವ ಪಹಾಮೇಧಾವಿ — ಓರ್ವ ಭಾರತೀಯ - ನತ್ತ ಕರೆತರುತ್ತವೆ. ಈತ ರವೀಂದ್ರನಾಥ ಠಾಕುರ್. ಗೆಡಿಸ್



ಮತ್ತು ಠಾಕುರ್ ಈ ಚರ್ಚೆಯಲ್ಲಿ ವೈಚಾರಿಕವಾಗಿ ಭಾಗವಹಿಸಿದ್ದರಷ್ಟೆ ಅಲ್ಲದೆ ಅದನ್ನು ಕಾರ್ಯರೂಪಕ್ಕೆ ತರುವಲ್ಲಿಯೂ ಸ್ವಲ್ಪಮಟ್ಟಿಗೆ ಸಹಭಾಗಿಗಳಾಗಿದ್ದರು. ಡಾರ್ಜಿಲಿಂಗ್‌ನ ಬೇಸಿಗೆ ಶಾಲೆಯೊಂದರಲ್ಲಿ ಕೆಲಕಾಲ ಅವರಿಬ್ಬರೂ ಒಟ್ಟಿಗೆ ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದು, ಪ್ರಖ್ಯಾತ ವಿಜ್ಞಾನಿ ಜಗದೀಶ್‌ಚಂದ್ರ ಬೋಸರೂ ಅವರ ಸಹೋದ್ಯೋಗಿಯಾಗಿದ್ದರು. ವಾಸ್ತವತಃ, ಈ ಶಾಲೆಯ ಮಾದರಿಯನ್ನೆ ರವೀಂದ್ರನಾಥರು ಮುಂದೆ ಶಾಂತಿನಿಕೇತನವಾಗಿ ಬೆಳೆಸಿದಂತೆ ತೋರುತ್ತದೆ.

ರವೀಂದ್ರನಾಥರ ಪ್ರಕಾರ, ಭಾರತ ಮತ್ತು ಪಶ್ಚಿಮಗಳು ಸಂವಾದವೊಂದನ್ನು ನಡೆಸುವುದಾದಲ್ಲಿ ಅದು ಮುಖ್ಯವಾಗಿ ಅವೆರಡರ ಜ್ಞಾನವ್ಯವಸ್ಥೆಗಳ ನಡುವಿನ ಸಂವಾದವಾಗಬೇಕಿತ್ತು; ವಿಶ್ವವಿದ್ಯಾನಿಲಯಗಳು ಇಂಥ ಜ್ಞಾನಸಂಪ್ರದಾಯದ ಪ್ರತಿನಿಧಿಗಳೆಂದು ಪರಿಗಣಿತವಾದ್ದರಿಂದ ಆ ವಿಚಾರವಿನಿಮಯ ವಿಶ್ವವಿದ್ಯಾನಿಲಯಗಳ ನಡುವೆ ನಡೆಯಬೇಕಿತ್ತು. ಸಮಸ್ಯೆಯೆಂದರೆ,ಪಶ್ಚಿಮದಲ್ಲೇನೊ ಅನೇಕ ಪುರಾತನ ವಿಶ್ವವಿದ್ಯಾನಿಲಯಗಳು ಆಧುನಿಕ ಕಾಲದವರೆಗೂ ಮುಂದುವರೆದುಬಂದಿದ್ದವು, ಇನ್ನು ಕೆಲವು ಹೊಸದಾಗಿ ಹುಟ್ಟಿದಂತವು ನಶಿಸಿಹೋಗಿದ್ದ ಹಳೆಯ ವಿಶ್ವವಿದ್ಯಾನಿಲಯಗಳ ಸಾತತ್ಯವನ್ನು ಉಳಿಸಿಕೊಂಡುಬಂದಿದ್ದವು; ಆದರೆ ಭಾರತದಲ್ಲಿ ಇಂಥ ಪರಂಪರೆ ನಡೆವೆಯೆಲ್ಲೊ ನಷ್ಟಗೊಂಡುಹೋಗಿದ್ದಾಗಿ, ಈಗ ಅದನ್ನು ಪುನಾಸೃಷ್ಟಿಸಬೇಕಿತ್ತು. ಇಂಥದೊಂದು ಸಂದರ್ಭದಲ್ಲಿ ಠಾಕುರರಿಗೆ ಅನಿಸಿತು: ಪಶ್ಚಿಮದ ವಿಶ್ವವಿದ್ಯಾನಿಲಯ ಗಳೆಲ್ಲ ನಗರಕೇಂದ್ರಿತವಾದುವಾದರೆ ಭಾರತದವು ಅರಣ್ಯಕೇಂದ್ರಿತವಾದುವು. ಇದು ಕೇವಲ ಭೌಗೋಳಿಕ ಭಿನ್ನತೆಯಲ್ಲಿದೆ ಪ್ರಜ್ಞೆಗೆ ಸಂಬಂಧಿಸಿದ ಭೀನ್ನತೆಯೂ ಹೌದು. ಹಾಗಾಗಿ ಪಾಶ್ಚಿಮಾತ್ಯ ಮತ್ತು ಭಾರತೀಯ ವಿಶ್ವವಿದ್ಯಾನಿದಯಗಳ ನಡುವನ ಸಂವಾದ ನಗಲ-ಸಂವೇದನೆ ಮತ್ತು ಅರಣ್ಯ-ಸಂವೇದನೆಗಳ ನಡುವಿ ಸಂವಾದವೂ ಅಗುವುದು/ ಆಗಬೇಕು.

ಇಂಥದೊಂದು, ಮಹತ್ತರ ಕಾಣ್ಕೆಯನ್ನು ಹೊತ್ತು, ಅದನ್ನು ಶಾಂತಿನಿಕೇತನ ದಲ್ಲಿ ಸಾಕಾರಗೊಳಿಸಲು ಹೊರಟ ರವೀಂದ್ರನಾಥರ ಆತ್ಮವಿಶ್ವಾಸ ಕೊನೆಯ ಗಳಿಗೆಯಲ್ಲಿ ತುಸು ಕುಂದಿತೆಂದು ತೋರುತ್ತದೆ. ಶಾಂತಿನಿಕೇತನ ಅಂತಿಮವಾಗಿ ಸೌಂದರ್ಯಾತ್ಮಕ ಸಂವೇದನೆಗೆ ಪ್ರಾಶಸ್ತ್ಯ ಕೊಡುವ ಸಂಸ್ಥೆಯಾಗಿ ರೂಪಿತವಾಗಿ, ಕಲಾಭಿರುಚಿ ಮತ್ತು ವಿಜ್ಞಾನಾಭಿರುಚಿಗಳೆರಡನ್ನೂ ಸರಿಸಮಾನವಾಗಿ ಬೆಳೆಸುವ ಹಾಗೂ ಎರಡನ್ನೂ ಮುಖಾಮುಖಿಯಾಗಿಸಿ ಹೊಸತೊಂದು ಸಂಲಗ್ನರೂಪವನ್ನು ಸಾಧಿಸುವ ರವೀಂದ್ರನಾಥರ ಮೂಲ ಕನಸು ನನಸಾಗಲಿಲ್ಲ. ಆ ನಿಟ್ಟಿನಲ್ಲಿ ಅವರು ಕೈಗೊಂಡ ಒಂದೇ ಒಂದು ಸಣ್ಣ ಕ್ರಮವೆಂದರೆ, ಶಾಂತಿನಿಕೇತನದಲ್ಲಿ, ಪ್ಯಾಟ್ರಿಕ್

ಗೆಡಿಸ್‌ನ ಮಗ ಆರ್ಥರ್ ಗೆಡಿಸ್‌ನ ಉಸ್ತುವಾರಿಯಲ್ಲಿ, ಪುಟ್ಟದೊಂದು ಕೃಷಿ ವಿಸ್ತರಣಾ ವಿಭಾಗವನ್ನು ನಡೆಸಿದುದು. ಹಾಗೆಂದಮಾತ್ರಕ್ಕೆ ಅವರ ಮೂಲ ಕನಸಿನ ಪ್ರಭೆಯನ್ನೂ ಕಡಿಮೆಯಾದುದಲ್ಲ. ಹಲವು ಕಾರಣಗಳಿಂದಾಗಿ ಅವರು ಆ ಆದರ್ಶವನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಲು ಸಾಧ್ಯವಾಗದಿದ್ದಿರಬಹುದು. ಇಂದಿನ ನಮಗೆ ಮುಖ್ಯವಾಗಿಬೇಕಾದದು ಅವರ ಸೀಮಾತೀತ ಚಿಂತನೆ ಮತ್ತು ಕಲ್ಪನೆಗಳೆ ಹೊರತು ಅನಿವಾರ್ಯವಾಗಿ ಸೀಮಿತಗೊಳ್ಳಬೇಕಾಗಿಬಂದ ಅವರ ಪ್ರಯೋಗಗಳಲ್ಲಿ.

••• ••• •••

ವಿಷಾದದ ಸಂಗತಿಯೆಂದರೆ, ಇಂಥಾ ಅದಮ್ಯ ಆತ್ಮಸ್ಥೈರ್ಯ ಮತ್ತು ಅನ್ಯಾದೃಶ್ಯ ಕಲ್ಪನಾಪ್ರತಿಭೆಗಳು ೧೯೪೦ರ ದಶಕದ ವೇಳೆಗೆ ಕರಗಲಾರಂಬಿಸಿದವು. ಮೊದಲು ಸರ್ವಗ್ರಾಹಿಯೂ ಬಹ್ವಂಶಸಮೃದ್ಧವೂ ಆಗಿದ್ದ ಭಾರತೀಯ ವಿಜ್ಞಾನಚೇತನ ಇಲ್ಲಿಂದ ಮುಂದೆ ಒಂದೆಡೆ ಭೌತಶಾಸ್ತ್ರೀಯ ಪ್ರತಿಭೆಗೂ ಇನ್ನೊಂದೆಡೆ ಭೌತಿಕ ಅಭಿವೃದ್ಧಿಯನಷ್ಟೆ ಗುರಿಯಾಗಿಟ್ಟುಕೊಂಡ ತಂತ್ರಜ್ಞಾನಾಧಾರಿತ ಯೋಜನಾಕಲ್ಪನೆಗೂ ತನ್ನನ್ನು ಸಂಕುಚಿತಗೊಳಿಸಿಕೊಂಡಿತು. ಅರ್ಥಾತ್, ಗಾಂಧಿ ಪ್ರತಿಪಾದಿಸಿದಂತಸ ಸ್ಥಳವಿಶಿಷ್ಟವೂ ಪರಿಸರ ಸ್ನೇಹಿಯೂ ಆದ ಪುಟ್ಟಪುಟ್ಟ ಪ್ರಯೋಗಗಳ ವಿಜ್ಞಾನವಾದರಿ ಪ್ರಾಮುಖ್ಯವನ್ನು ಕಳೆದುಕೊಂಡು, ನೆಹರೂ ಕನಸಿದಂತಹ ಬೃಹತ್ ಅಭಿವೃದ್ಧ ಯೋಜನೆಗಳ ಮಾದರಿ ಆ ಸ್ಥಾನವನ್ನು ಆಕ್ರಮಿಸಿಕೊಂಡಿತು. ಹಿಂದೊಮ್ಮೆ, ಗಾಂಧಿಯ ಪ್ರತಿಯೊಂದು ಆಶ್ರಮದಲ್ಲೂ ತ್ಯಾಜ್ಯವಸ್ತು ನಿರ್ವಹಣೆಯ ಹೊಸಹೊಸ ವಿಧಾನಗಳನ್ನು ಶೋಧಿಸುತ್ತಿದ್ದ ಘಟಕಗಳಿದುದ, ಜನತೆ ಅವುಗಳನ್ನು ವಿಷಿಷ್ಟ ರೀತಿಯ ಪ್ರಯೋಗಾಲಯಗಳೆಂದೂ ಅವುಗಳ ಕಾಯಕವನ್ನು ವಿಷಿಷ್ಟವಾದ ವೈಜ್ಞಾನಿಕ ಕ್ರಮಗಳೆಂದೂ ಪರಿಗಣಿಸುತ್ತಿದ್ದ ಕಾಲ ಈಗ ಕಣ್ಮರೆಯಾಗತೊಡಗಿತು.

ಇಷ್ಟಕ್ಕೆ, ಇನ್ನು ಮುಂದೆ ಪ್ರಾಬಳ್ಯ ಗಳಿಸಿಕೊಂಡ ಫಸಿಕ್ಸ್‌ನ ಪ್ರತಿಭೆ ಅಲ್ಪವಾದುದಾಗಿತ್ತು ಎಂದೇನಲ್ಲ. ಅದು ನಿಜಕ್ಕೂ ಅದ್ಭುತವಾದೊಂದು ಕಲ್ಪನಾಪ್ರತಿಭೆಯಾಗಿತ್ತು. ಸಾವಿರದ ಒಂಬತ್ತುನೂರಾ ನಲವತ್ತರ ದಶಕದಲ್ಲಿ ಪ್ರವರ್ಧಮಾನಕ್ಕೆ ಬಂದ ಆ ಚಿಂದನಾಮಾದರಿ, ೧೯೪೭ರ ಭಾರತ ಸ್ವಾತಂತ್ರ್ಯ ಪ್ರಾಪ್ತಿಯಿಂದಾರಂಭಸಿ ಅಭಿವೃದ್ಧಿ ಯೋಜನೆಗಳ ಮಾದರಿಯೊಂದಿಗೆ ಬೆಸೆದುಕೊಂಡು ದೇಶದ ಭವಷ್ಯವನ್ನು ರೂಪಿಸುವ ಬಹುಮುಖ್ಯ ಶಕ್ತಿಯಾಯಿತು.

ಈ ಪ್ರಕ್ರಿಯೆಯ ಮುಖ್ಯ ಪ್ರತೀಕಗಳಲ್ಲಿ ಮೇಘನಾದ ಸಹಾ ಒಬ್ಬಹಾಗಿದ್ದರು. ಅಸಾಧಾರಣ ಭೌತಶಾಸ್ತ್ರಜ್ಞರಾಗಿದ್ದ ಸಹಾರವರನ್ನು ನಾವು, ಅವರಂಥವರನ್ನು



ಸೃಷ್ಟಿಸಿದ ಅಂದಿನ ಬಂಗಾಳದ ಹಿನ್ನೆಲೆಯಲ್ಲಿಯೆ ಅರ್ಥೈಸಿಕೊಳ್ಳಲು ಪ್ರಯತ್ನಿಸಬೇಕು. ಆ ಬಂಗಾಳ ವೈಚಾರಿಕ ಮತ್ತು ಸಾಂಸ್ಕೃತಿಕ ಪುರರುಜ್ಜೀವನದ ಚೈತನ್ಯದಿಂದ ತುಂಬಿತುಳುಕುತ್ತಿದ್ದು, ಅಲ್ಲಿ ಆಧುನಿಕತೆ ಬಹುದೊಡ್ಡ ಮೌಲ್ಯವೊಂದಾಗಿತ್ತು. ಇದು ಎಂಥ ಅತಿಶಯದ ಪ್ರಸಂಗಗಳಿಗೆ ಕಾರಣವಾಗುತ್ತಿತ್ತೆಂದರೆ, ೧೯೨೦ರ ದಶಕದಲ್ಲಿ ಬಂಗಾಳದಲ್ಲಿ ಮೊತ್ತಮೊದಲ ದೇಹಚ್ಛೇದ-ಡಿಸೆಕ್ಷನ್-ವನ್ನು ಮಾಡಿದಾಗ, ಅದು ಆಧುನಿಕತೆಗೆ ದೊರೆತ ಮಹತ್ತರ ವಿಜಯವೆಂಬ ಸಂಭ್ರಮಾಚರಣೆಯಲ್ಲಿ ಕಲಕತ್ತೆಯಲ್ಲಿ ಫರಂಗಿಗಳನ್ನು ಸಿಡಿಸಿದ್ದರಂತೆ. ಅದೆ ಕಾಲದಲ್ಲಿ, ಹೊಸದಾಗಿ ತಯಾರಾದ ನೂರಾರು ಬಂಗಾಳಿ ವಿಜ್ಞಾನಿಗಳು 'ಸಲ್‌ಫ್ಯೂರಿಕ್ ಆ್ಯಸಿಡ್ಡು, ಬರಿಯೆ ರಾಸಾಯನಿಕವಲ್ಲ; ಅದು ನಾಗರಿಕತೆಯ ಸೂಚಿ' ಯೆಂದು ಹೋದಲ್ಲೆಲ್ಲ ಸಾರುತ್ತಿದ್ದರಂತೆ.

ಭೌತವಿಜ್ಞಾನಿ ಸಹಾ ಮೇಲ್ಕಂಡ ರಸಾಯನಶಾಸ್ತ್ರೀಯ ಸಂಕೇತಕ್ಕೆ ಭೌತಶಾಸ್ತ್ರೀಯನಾದ ಸಂವಾದಿರೂಪವೊಂದನ್ನು ಕೊಡಲು ಯೋಚಿಸಿದರು. ಆ ಪ್ರಯತ್ನದಲ್ಲಿ ಸಲ್‌ಫ್ಯೂರಿಕ್‌ಆ್ಯಸಿಡ್ಡಿಗೆ ಪರ್ಯಾಯವಾಗಿ ಅವರಿಗೆ ಕಂಡಿದ್ದು ಎನರ್ಜಿ-ಶಕ್ತಿ. ಆಧುನಿಕ ರಾಷ್ಟ್ರಗಳು ಕೆಲವು ತಾವು ಬಳಸುವ ಶಕ್ತಿಯ ಪ್ರಮಾಣವನ್ನು ತಮ್ಮ ಜೀವನಶೈಲಿಯ ಹಾಗೂ ಆ ಮೂಲಕ ತಮ್ಮ ನಾಕರಿಕತೆಯ ಹಿರಿಮೆಯ ಪ್ರಮಾಣವನ್ನಾಗಿ ಬಳಸುವ ಸೂತ್ರವನ್ನು ಆಗಷ್ಟೆ ಪ್ರತಿಪಾದಿಸಲಾರಂಭಿಸಿದ್ದವು. ಈ ಸಮೀಕರಣವನ್ನು ಸಮರ್ಥನೀಯವೆಂದೆ ತಿಳಿದ ಸಹಾ ಭಾರತವನ್ನು ಶಕ್ತಿ-ಆಧಾರಿತ ಆಧುನಿಕ ರಾಷ್ಟ್ರವಾಗಿ ಕಟ್ಟುವ ಕನಸು ಕಂಡರು. ಅವರ ಕಾಲದ ಭಾರತ, ಆಗಿನ ಅಭಿವೃದ್ಧಿ ದೇಶಗಳ ಹೋಲಿಕೆಯಲ್ಲಿ, ಅತಿ ಕನಿಷ್ಠ ಪ್ರಮಾಣದ ಶಕ್ತಿಯನ್ನು ಬಳಸುತ್ತಿದ್ದು, ಈ ಅಂತರವನ್ನು ಕಡಿಮೆಮಾಡುವುದೆ ಸಹಾರವರಿಗೆ ಮುಖ್ಯ ಸವಾಲಾಗಿ ತೋರಿತು. ಆ ಸನ್ನಿವೇಶದಲ್ಲಿಯೆ ಅವರ ಮನಸ್ಸಿನಲ್ಲಿ ಯೋಜನಾ-ಮಾದಲಿ ತಲೆದೋರಿದ್ದು.

ವಾಸ್ತವದಲ್ಲಿ, ಈ ಮಾದರಿ ಅವರಿಗೇ ಮೋದಲು ಹೊಳೆದದ್ದೇನಲ್ಲ. ಅಲು ಕಮ್ಯುನಿಸ್ಟ್ ರಷಿಯಾದಲ್ಲಿ ಅದಾಗಲೆ ಜಾರಿಯಲ್ಲಿತ್ತು. ಆಧುನಿಕ ರಷಿಯಾದ ಮೊದಲ ಮಹಾನಾಯಕ ಲೆನಿನ್‌ಗೆ ಪರಮಾಪ್ತನಾಗಿದ್ದ ಕ್ರಿಜಾನೋಜಾವ್‌ಸ್ಕಿಯೆಂಬ ಎಂಜಿನಿಯರ್. ಆ ಮಾದರಿಯ ಹರಿಕಾರನಾಗಿದ್ದ. ಸೋವಿಯತ್ ಅಕಾಡೆಮಿ ಆಫ್ ಸೈನ್ಸಸ್‌ನ ಪ್ರಥಮ ನೇತಾರನಾಗಿ, ಅಸಾಧಾರಣ ತಂತ್ರಜ್ಞಾನಿಯಾಗಿ ಖ್ಯಾತಿ ಗಳಿಸಿದ್ದ ಆತ ಕೆಲಕಾಲ ಟ್ರಾಟ್‌ಸ್ಕಿಯಂತಹ ಇನ್ನೊಬ್ಬ ಧೀಮಂತನ ಜೊತೆ ಕ್ರಾಂತ್ಯೋತ್ತರ ರಷಿಯಾ ಅನುಸರಿಸಬೇಕಾದ ಜೀವನಮಾರ್ಗದ ಕುರಿತು ಘನ ಚರ್ಚೆಯೊಂದನ್ನು

ನಡೆಸಿದ್ದು, ಆ ಚರ್ಚೆಯ ಮುಖ್ಯ ಕೇಂದ್ರ ಮತ್ತೆ 'ಶಕ್ತಿ'ಯೆ ಆಗಿತ್ತು.  ಅದರ ಸಂಬಂಧದಲ್ಲಿ 'ಎನರ್ಜೆಟಿಕಾ' ಎಂಬ ಹೊಸ ಶಬ್ದವನ್ನು ಸೃಷ್ಟಿಸಿದ ಆ ಮಹಾನ್ ತಂತ್ರಜ್ಞ ತನ್ನ ಕೆನೆಯ ದಿನಗಳಲ್ಲಿ ಅನುಭಾವದ ಕಡೆಡೆ ಹೊರಳಿಕೊಂಡ.  ಈ ಪರಿವರ್ತನೆ ರಷಿಯನ್ನ ಪ್ರಭುತ್ವಕ್ಕೆ ಎಷ್ಟು ಅಪಥ್ಯವಾಗಿತ್ತೆಂದರೆ ಆತ ತನ್ನ ಅಂತಿಮ ಭಾಗದಲ್ಲಿ ಬರೆದ ಕೆಲವು ಪುಸ್ತಕಗಳನ್ನು ಸರ್ವಾಧಿಕಾರಿ ಸ್ಟಾಲಿನ್ ನಿಷೇಧಿಸುವ ಅತಿಗೆ ಹೋದ.  ಆಧುನಿಕ ರಷಿಯಾವನ್ನು ಯೋಜನಾಬದ್ಧವಾಗಿ ಅಭಿವೃದ್ಧಿಗೊಳಿಸುವಲ್ಲಿ ಪ್ರಮುಖಪಾತ್ರ ವಹಿಸಿದ ರಾಜಕಾರಣಿ-ಮತ್ತು- ವಿಜ್ಞಾನಿಯ ಜೋಡಿಯಾದ ಲೆನಿನ್-ಮತ್ತು-ಕ್ರಿಜಾನೊಬಾವ್‌ಸ್ಕಿಯವರ ಜೋಡಿ ಮೇಘಾನಾದ ಸಹಾರವರಿಗೆ ಅತ್ಯಂತ ಆಕರ್ಷಕವೂ ಅನುಕರಣಾಯೋಗ್ಯವೂ ಆಗಿ ಕಂಡುಬಂದು, ಅವರು ತಾನು ಭಾರತದ ಕ್ರಿಜಾನೊಜಾವ್‌ಸ್ಕಿಯಾಗಬಲ್ಲೆನೆಂದು ತಿಳಿದು, ಅದಕ್ಕಾಗಿ ಅತ್ಯಗತ್ಯವಾಗಿದ್ದ ಭಾರತೀಯ ಲೇನಿನ್‌ನ ಹುಡುಕಾಟದಲ್ಲಿ ತೊಡಗಿದರು.  ಆ ಕಾಲದ ಜಗತ್ತಿನ ಯಾವುದೆ ಶ್ರೇಷ್ಠ ವಿಜ್ಞಾನ ನೀತಿನಿರೂಪಣೆಯ ಕೃತಿಗೂ ಸರಿಸಾಟಿಯಾಗಬಲ್ಲಂಥ ' ಸೈನ್ಸ್ ಅ್ಯಂಡ್ ಕಲ್ಚರ್' ಎನ್ನುವ ನಿಯತಕಾಲಿಕವನ್ನು  ನಡೆಸುತ್ತಿದ್ದ ಸಹಾ ಈಗ ಹೊಸ ಉಸಿರು ಪಡೆದಿದ್ದ ತಮ್ಮ ದೇಶಕ್ಕೆ ಪ್ರಕತಿಯ ಹೊಸ ಯೋಜನಾ ಮಾದರಿಯೊಂದನ್ನು ನೀಡಬೇಕೆಂಬ ಹಂಬಲದಲ್ಲಿ ಭೌತಶಾಸ್ತ್ರಜ್ಞನಾಗಿದ್ದವರು ಅರ್ಥಶಾಸ್ತ್ರಜ್ಞರಾಗಲು ಬಯಸಿದರು.

ತಮ್ಮ ಲೆನಿನ್‌ನನ್ನು ಕಂಡುಕೊಳ್ಳಲು ಸಹಾ ಹೆಚ್ಚು ಕಾಲ ಕಾಯಬೇಕಾಗಲಿಲ್ಲ. ಇತಿಹಾಸದ ಕೆಲವು ಆಕಸ್ಮಿಕ ತಿರುವುಗಳು ಅವರನ್ನು ಜವಾಹರಲಾಲ್ ಹೆಹರೂರವರ ಜೊತೆ ತಂದು ಸೇರಿಸಿದವು.  ಅಲ್ಲಿಗೆ ಭಾರತಕ್ಕೂ ಒಂದು ರಾಜಕಾರಣಿ-ವಿಜ್ಞಾನಿ ಜೋಡಿ ಸಿಕ್ಕಿದಂತಾಯಿತು; ದೇಶದ ಅಭಿವೃದ್ಧಿಯನ್ನು ವೈಜ್ಞಾನಿಕವಾದ ಯೋಜನೆಗಳ ಪ್ರಕಾರ ಸಾಧಿಸುವ ಕಾರ್ಯಕ್ರಮಕ್ಕೆ ಅಸ್ತಿಭಾರವೊಂದನ್ನು ಹಾಕಿದಂತಾಯಿತು.  ಸಹಾರಂತೆ ನೆಹರೂ ಕೂಡ ಸೋವಿಯತ್ ರಷಿಯಾದ ಕುರಿತು ವಿಶೇಷ ಒಲವು ಉಳ್ಳವರಾಗಿದ್ದರು.  ಹಾಗೆಯೆ, ಆಧುನಿಕ ವಿಜ್ಞಾನ-ತಂತ್ರಜ್ಞಾನಗಳ ಬಗೆಗೆಗ ಅವರಿಗೆ ಮುಗ್ಧ ಬಾಲಸಮಾನ ಆಕರ್ಷಣೆಯಿತ್ತು.  ಅವರು ಸಹಾ,ಮಹಾಲನೊಬಸ್, ಭಾಭಾ, ಭಟ್ನಾಗರರಂತಹ ಪ್ರತಿಭಾವಂತ ವಿಜ್ಞಾನಿಗಳನ್ನು ಅತ್ಯಂತ ಆತ್ಮೀಯರಾಗಿ ಮಾಡಿಕೊಂಡಿದ್ದರು ಮಾತ್ರವಲ್ಲ ಪದೇಪದೇ ಅವರೊಂದಿಗೆ ಸಾರ್ವಜನಿಕವಾಗಿ ಕಾಣಿಸಿಕೊಳ್ಳುವದರಲ್ಲೂ ಅವರನ್ನು ಅಕ್ಕಪಕ್ಕದಲ್ಲಿಟ್ಟುಕೊಂಡು ಫೋಟೊ ತೆಗೆಸಿಕೊಳ್ಳುವುದರಲ್ಲೂ ಖುಷಿ ಕಾಣುತ್ತಿದ್ದರು.  ಅಧಿಕೃತ ಔಪಚಾರಿಕತೆಗಳನ್ನೆಲ್ಲ ಗಾಳಿಗೆ ತೂರಿ ಅವರು ವಿಜ್ಞಾನ ಸಂಸ್ಥೆಗಳಿಗೆನುಗುಗುತ್ತಿದ್ದುದು, ಕುರ್ಚಿಯ



ಕಂದಾಬಾರವನ್ನು ಧಿಕ್ಕರಿಸಿ ಮೇಜಿನ ಮೇಲೆಯೆ ಕುಳಿತೊ ಇಲ್ಲ ನೆಲದ ಮೇಲೆ ನಿಂತೊ ವಿಜ್ಞಾನಿಗಳೊಡನೆ ಅತ್ಯುತ್ಸಾಹದಲ್ಲಿ ಮಾತುಕತೆ ನಡೆಸುತ್ತಿದ್ದುದು, ಹೊಸ ಯಂತ್ರೋಪಕರಣಗಳನ್ನು ಸಣ್ಣ ಮಗುವಿನಂತೆ ಕಣ್ಣಾಲಿಸಿ ನೋಡುತ್ತ ಬೇರಗು ಪಡುತ್ತಿದ್ದುದು, ಇತ್ಯಾದಿಗಳ ಕುರಿತಾದ ಕಥೆಗಳಿಗಂತೂ ಕೊನೆಯೆ ಇಲ್ಲ. ನೆಹರೂ-ಸಹಾ ಜೋಡಿ ಕೆನೆಗೆ ಬೇರ್ಪಟ್ಟುದೇನೊ ಹೌದು; ಆದರೆ ಒಟ್ಟಿಗಿದ್ದ ಅವಧಿಯಲ್ಲಿ ಅವರು ಆಧುನಿಕ ಭಾರದತ ಅಭಿವೃದ್ಧಿಯ ಮಾದರಿಯನ್ನು ಆಳವಾಗಿ ಪ್ರಭಾವಿಸಿದರು;  ಆ ಪ್ರಭಾವ ಅವರಿಬ್ಬರು ಕಣ್ಣರೆಯಾದ ಅನಂತರದ ಎಷ್ಟೊ ದಶಕಗಳ ಉದ್ದಕ್ಕೂ ಮುಂದುವರೆದುಬಂದಿದೆ.  ಲೆನಿನ್‌ನ 'ಸೋವಿಯತ್ ಜನತೆ ವಿದ್ಯುಚ್ಛಕ್ತೀಕರಣ  ಕಮ್ಯುನಿಸಮ್' ಎಂಬ ಸಮೀಕರಣದಿಂದ ಸಹಾ ತುಂಬ ಸಂಮೋಹಿತರಾಗಿದ್ದರೆ, ನೊಹರೂ ಅದನ್ನೆ ತುಸು ಮೆದುಗೊಳಿಸಿ 'ಆಧುನಿಕ ಇಂಡಿಯಾಕ್ಕೆ ಕಾರಖಾನೆ ಹಾಗೂ ಅಣೆಕಟ್ಟುಗಳೆ ದೇವಸ್ಥಾನಗಳು' ಎಂದು ಉದ್ಘೋಷಸಿದರು.  ದೇಶವನ್ನು ಆಧುನಿಕ ಪಶ್ಚಿಮದ ರೀತಿಯಲ್ಲಿ ಮುನ್ನಡೆಸಿ, ವೈಜ್ಞಾನಿಕತೆ ಮತ್ತು ಸಮ್ಮತೆಗಳ ಆಧಾರದ ಮೇಲೆ ಹೊಸ ಸಮಾಜವೊಂದನ್ನು ಕಟ್ಟುವ ಕನಸನ್ನು ಅವರು ಕಂಡರು.

ಇಷ್ಟೆಲ್ಲ ಬವ್ಯ ಭವಿಷ್ಯಕಲ್ಪನೆಯಿದ್ದ ಅವರಿಗೆ ತಮ್ಮ ಅಭಿವೃದ್ಧಿ ಯೋಜನೆಗಳ ದೂರಗಾಮಿ ಪರಿಣಾಮಗಳು ಎಷ್ಟು ದಾರುಣವಾಗಬಲ್ಲವು ಎನ್ನುವುದನ್ನು ತಿಳಿಯುವ ಭವಿಷ್ಯಜ್ಞಾನವಿಲ್ಲದಿದ್ದುದ ಇತಿಹಾಸದ ವಿಷಾದಪೂರಿತ ವ್ಯಂಗ್ಯವೇ ಹೌದು.  ಅವರು ಕನಸಿದ ಭವಿಷ್ಯವನ್ನು ನಮ್ಮ ವರ್ತಮಾನ-ಭೂತಗಳನ್ನಾಗಿ ಪಡೆದು ಬದುಕಿಗ, ಬದುಕುತ್ತಿರುವ ನಮಗೆ ಇಂದು ಆ ಪರಿಣಾಮಗಳು ದಟ್ಟವಾಗಿ ಕಾಣುತ್ತಿವೆ.  ಹಿಂದೆ ನೆಹರೂ ಯೂವುವನ್ನು ದೇವಸ್ಥಾನಗಳೆಂದು ಗಣಿಸಿದರೋ ಆ ಕಾರಖಾನೆ, ಆಣೆಕಟ್ಟುಗಳು ಇಂದು ಕೋಟಿಗಟ್ಟಲೆ ಜನರನ್ನು ಅವರ ಮೂರಸ್ಥೀದಿಂದ ಬೇರುಸಹಿತ ಕಿತ್ತು ಬಟಾಬಯಲಿಗೆ ಬಿಸುಟಿವೆ; ಅಂದು ತತ್‌ಕ್ಷಣಸಿದ್ಧ ಪರಿಹಾರಗಳನ್ನು ಕೊಟ್ಟ ಬೃಹತ್ ಯೋಜನೆಗಳು ಇಂದು ದೀರ್ಘಕಾಲೀನ ಆರ್ಥಿಕ ಹಾಗೂ ಪಾರಿಸರಿಕ ಸಮಸ್ಯೆಗಳನ್ನು ಹುಟ್ಟಿಹಾಕಿವೆ.  ದೇಶ ಅತ್ತ ಪಶ್ಚಿಮಕ್ಕೆ ಸರಿಸಾಟಿಯಾಗಬಾರದೆ ಇತ್ತ ಸ್ವಂತಿಕೆಯನ್ನು ಕಂಡುಕೊಳ್ಳಲಾಗದೆ ವಿಚಿತ್ರವಾದೊಂದು ಸಂದಿಗ್ಧದಲ್ಲಿ ಸಿಲುಕಿ ಕೊಂಡಿದೆ.

ಆದರೆ, ಮೇಲಿನ ಹಿರಿಯರನ್ನು ಹೀಗೆ ವಿಮರ್ಶೆಗೆ ಒಳಪಡಿಸಿದಮೇಲೇಯೂ ನಾವು ಅವರಿಗೆ ವಂದಿಸದಿರಲು ಸಾಧ್ಯವಿಲ್ಲ.  ಹಿನ್ನೋಟದ ಅನುಕೂರವಿರುವ ನಾನು ಇಂದು ಅವರನ್ನು ಸಲೀಸಾಗಿ ಟೀಕಿಸಬಹುದು, ಅವರ ಲೋಪದೋಷಗಳನ್ನು

ನಿರ್ದಾಕ್ಷಿಣ್ಯವಾಗಿ ಚರ್ಚಿಸಬಹುದು ಆದರೆ ಅದೆಲ್ಲದರ ನಡುವೆ, ನಾವೆಲ್ಲ ಅವರು ಸೃಷ್ಟಿಸಿದ ವ್ಯವಸ್ಥೆಯದೆ ವರಗಳನ್ನು ಪಡಿದವರು, ಹಾಗೂ ಅದರ ಸಹಾಯದಿಂದಲೆ ಹೀಗೆ ಅವರನ್ನು ಪರಿಶೀಲನೆಗೆ ಒಟ್ಟುವ ಶಕ್ತಿಯನ್ನು ಗಳಿಸಿಕೊಂಡವರು ಎನ್ನುವುದನ್ನು ಮರೆಯಲಾಗದು. ಕಾಲಾನುಕ್ರದಲ್ಲಿ ತಲೆದೋರಿದ ಅವರ ಪ್ರಗತಿಯೋಜನೆಗಳ ಅನಪೇಕ್ಷಣೀಯ ದುಷ್ಪರಿಣಾಮಗಳನ್ನು ಗೌಣವೆಂದು ಗುಡಿಸಿಹಾಕಬೇಕಾದ್ದೇನಿಲ್ಲ. ಹಾಗೆಯೆ, ಆ ಧೀಮಂತರ ಚಿಂತನೆ ಮತ್ತು ಕಲ್ಪನೆಗಳ ಘನತೆಯನ್ನು ಗೌರವಿಸದಿರುವುದೂ ಸಲ್ಲ.

••• ••• •••

ನೆಹರೂರವರ ಸ್ವರ್ಗಸ್ವಪ್ನ ಕರಗುತ್ತಿದ್ದಂತೆಯೆ, ಅವರು ಪ್ರತಿಪಾದಿಸಿದ್ದ ಯೋಜನಾಮಾದರಿಯಲ್ಲೂ ಅದಕ್ಕೆ ತಳಹದಿಯಾಗಿದ್ದ ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಗಳಲ್ಲೂ ಆಳವಾದ ಬಿಕ್ಕಟ್ಟುಗಳು ಮೂಡಲಾರಂಭಿಸಿದವು. ಅವು ಅಲಕ್ಷ್ಯ ಮಾಡಲು ಅಸಾಧ್ಯವಾದಂಥ ಸ್ಪಷ್ಟ ರೂಪವನ್ನು ಪಡೆದದು ನೆಹರೂರವರ ಮಗಳ ಆಳ್ವಿಕೆಯ ಕಾಲದಲ್ಲಿ, ಬಹು ಪ್ರಾತಿನಿಧಿಕವಾಗಿ ಎರಡು ಘಟನೆಗಳಲ್ಲಿ. ಒಂದು ಘಟನೆ ಸಂಭವಿಸಿದ್ದು ಆಕೆಯ ಕಾರಣದಿಂದ ಹಾಗೂ ಇನ್ನೋಂದು ಸಂಭವಿಸಿದ್ದು ಆಕೆಯ ಸಾವಿ ಕೆಲವೆ ದಿನಗಳ ಅನೆಂತರ; ಆದರೆ ಏರಡೂ ಪರಸ್ಪರ ಗಾಢವಾದ ಹೋಲಿಕೆಯುಳ್ಳರು ಮತ್ತು ಎರಡೂ ವಿಜ್ಞಾನ-ವೈಜ್ಞಾನಿಕತೆಗಳನ್ನೆ ಕೇಂದ್ರವಾಗಿ ಉಳ್ಳಂಥವು.

ಮೊದಲನೆಯ ಘಟನೆಯಾದ ೧೯೭೫-೭೭ರ ಎಮರ್ಜನ್ಸಿಯನ್ನಂತೂ ಕೆಲವರು ವೈಜ್ಞಾನಿಕವಾದ ವಿದ್ಯಮಾನವೆಂದೆ ಭಾವಿಸಿದರು. ಹಾಗೆಂದು ಅದನ್ನು ಸಾರ್ವಜನಿಕವಾಗಿ ಸಮರ್ಥಿಸಿದ ವಿಜ್ಞಾನಿಗಳು ಹೇರಳ ಸಂಖ್ಯೆಯಲ್ಲಿದ್ದರು. ಆಗಿನ್ನೂ ನೊಬಲೆ ಪ್ರಶಸ್ತಿಯನ್ನು ಪಡೆಯದಿದ್ದರೂ ಅದಾಗಲೆ ಆ ಮನ್ನಣೆಯನ್ನು ಪಡೆದಂಥ ಯುವ ಶಿಷ್ಯರನ್ನು ತಯಾರೂ ಮಾಡಿದ್ದವರೆಂದೂ ಆ ಕಾಲಕ್ಕಾಗಲೆ ಪ್ರಖ್ಯಾತರಾಗಿದ್ದ ಖಭೌತಶಾಸ್ತ್ರಜ್ಞ ಡಾ।। ಸುಬ್ರಹ್ಮಣ್ಯಂ ಚಂದ್ರಶೇಖರ ಇಂದಿರಾ ಗಾಂಧಿಯವರ ಬಾಡಿಗೆ ಬಂಟರಾಗಿ 'ಹೌದು, ಇಂಡಿಯಾಕ್ಕೀಗ ಶಿಸ್ತಿನ ಅಗತ್ಯವಿದೆ. ಇಂದಿರಾ ಗಾಂಧಿ ಪ್ರಖರ ವೈಜ್ಞಾನಿಕ ಮನೋಧರ್ಮದ ನಾಯಕಿ. ಆಕೆ ದೇಶಕ್ಕೆ ಹೊಸ ದಿಕ್ಕೊಂದನ್ನು ತೋರಬಲ್ಲಳು' ಎನುವಂತಹ ಮಾತುಗಳನ್ನಾಡಿ ಆಪತ್ಕಾಲವನ್ನು ಬೆಂಬಲಿಸಿದರು. ಶ್ರೀಮತಿ ಗಾಂಧಿಯವರ ಬಗೆಗೆ ಅವರಿಗಿದ್ದ ನಂಬುಗೆಯಲ್ಲಿ ಒಂದಿಷ್ಟು ಮುಗ್ಧತೆಯೂ ಎಮರ್ಜೆನ್ಸಿಯ ಕುರಿತಾದ ಅವರ ನಿಲುವಿನಲ್ಲಿ ಎಂದಿಷ್ಟು ರಾಷ್ಟ್ರನಿಷ್ಠೆಯೂ ಇರಲಿಲ್ಲವೆನುವಂತಿಲ್ಲ. ಆದರೆ ರಾಷ್ಟ್ರ ಒಟ್ಟಾರೆಯಾಗಿ, ಅದರಲ್ಲೂ ರಾಷ್ಟ್ರದಜ ಉತ್ತರ



ಭಾಗಿ ವಿಶೇಷವಾ್, ಆಪತ್‌ಸ್ಥಿತಿಯನ್ನು ಭೀಕರವಾದೊಂದು ವಿದ್ಯಮಾನವಾಗಯೆ ಅನುಭವಸಿತು, ಪರಿಭಾವಿಸಿತು. ವಿಜ್ಞಾನಿವರ್ಗ ಒಂದೆಡೆ ಅದನ್ನು ವೈಜ್ಞಾನಿಕತಾ ಪ್ರೇರಿತವೂ ವೈಜ್ಞಾನಿಕತಾ ಪೋಷಕವೂ ಆದೊಂದು ಸಂಗತಿಯೆಂದು ಕೀರ್ತಿಸುತ್ತಿದ್ದರೆ, ಇನ್ನೊಂದೆಡೆ ಸ್ವತಃ ಅಂದಿರಾ ಗಾಂಧಿ ಅದು ಅದೆಷ್ಟೇ ಅಲ್ಲದೆ ಪರಿಸರ ಕಾಳಜಿಯ ಕ್ರಮವೂ ಹೌದೆಂದು ಬಿಂಬಿಸಲು ಯತ್ನಿಸುತ್ತಿದ್ದರು. ಈ ಚುರುಕು ಚರ್ಚಾಪಡುವನ ಅಂಶವನ್ನು ತಲೆಯಲ್ಲಟ್ಟುಕೊಂಡೆ ಆಕೆ ಸ್ಟಾಕ್‌ಹೋಮ್ ಸಮಾವೇಶದಲ್ಲಿ ಘೋಷಿಸಿದ್ದು: ಪರಿಸರ ಮಾಲಿನ್ಯವೆ ದಾರಿದ್ರ್ಯದ ಅತಿಕೆಟ್ಟ ರೂಪ; ದಾರಿದ್ರ್ಯವನ್ನು ನಿವಾರಿಸುವಲ್ಲಿ ಪರಿಸರಮಾಲಿನ್ಯವನ್ನು ನಿವಾರಿಸುವುದು ಅತ್ಯನಿವಾರ್ಯ.

ಇಂಥ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಆಕೆಯ ಸಹಾಯಕ್ಕಿದ್ದ ಇಬ್ಬರು ಪರಿಸರ ಶುದ್ಧೀಕರಣ ತಜ್ಞರೆಂದರೆ ಸಂಜಯ ಗಾಂಧಿ ಮತ್ತು ಜಗಮೋಹನ್. ಅವರಿಬ್ಬರ ಸೂತ್ರ ಅತ್ಯಂತ ಸರಳರಾಗಿತ್ತು – ಬಡವರ ಸಂಖ್ಯೆಯನ್ನು ತಗ್ಗಿಸುವ ಮೂಲಕ ಬಡತನದ ನಿರ್ಮೂಲನ ಸಾಧಿಸಬಹಯದು. ಪರಿಸರವನ್ನು ಮಲಿನಗೊಳಿಸುವ ದರಿದ್ರ ಜನಗಳನ್ನು ಸ್ಥಳಾಂತರಿಸುವ ಮೂಲಕ ಪರಿಸರ ನೈರ್ಮಲ್ಯವನ್ನು ಸಾಧಿಸಬಹುದು. ಸಂಜಯ ಗಾಂಧಿ ಮತ್ತು ಜಗಮೋಹನ್ ತಮ್ಮ ಅಭಿವೃದ್ಧಿಕ್ರಮದ ಆಳದಲ್ಲಿ ಹುದುಗಿದ್ದ ಅಮಾನವೀಯವೂ ಅಸಹನೀಯವೂ ಆದ ಹಿಂಸೆಗೆ ವೈಜ್ಞಾನಿಕ ಮುಖವಾಡವೊಂದನ್ನು ತೊಡಿಸಿ ಅದನ್ನು ಸಹ್ಯವೂ ಸಮರ್ಥನೀಯವೂ ಆಗಿ ಕಾಣಿಸಲು, ಅದಕ್ಕೆ ಜನಸಮ್ಮತಿಯನ್ನು ಪಡೆಯಲು ಪ್ರಯತ್ನಿಸಿದರು. ಅವರು ರೂಪಿಸಿದ ನಗರಾಭಿವೃದ್ಧಿ ಯೋಜನೆ, ಸ್ವಾಸ್ಥ್ಯರಕ್ಷಣಾ ಯೋಜನೆ, ಕುಟುಂಬ ನಿಯಂತ್ರಣ ಯೋಜನೆಗಳಂತಹ ಎಲ್ಲ ಕಾರ್ಯಕ್ರಮಗಳಲ್ಲೂ ತಂತ್ರಜ್ಞಕೇಂದ್ರಿತ ವೈಜ್ಞಾನಿಕತೆಯ ಜನರಂಜಕ ವ್ಯಾಖ್ಯಾನವೆ ಎದ್ದು ಕಾಣುತ್ತಿತ್ತು. ಆ ಮಾದರಿಗೆ ಮೂರ್ತ ಜನತೆಗಿಂತ ಅಮೂರ್ತ ಪ್ರಗತಿಯೆ ಹೆಚ್ಚು ಮುಖ್ಯವಾದುದಾಗಿತ್ತು. ಆ ದೃಷ್ಟಿಕೋನಕ್ಕೆ ಬಡಜನರು ಮನುಷ್ಯವ್ಯಕ್ತಿಗಳಾಗದೆ ರೋಗಕಾರಕ ಜೀವಾಣುಗಳಾಗಿ, ರಾಷ್ಟ್ರದ ಆರೋಗ್ಯವೆನ್ನುವುದು ಅಂಥವರನ್ನೆಲ್ಲ ಹೊರಗಟ್ಟಿಯೊ ಇಲ್ಲ ಹೂತುಹಾಕಿಯೊ ಸಾಧಿತವಾಗುವಂತಹ ಸ್ಥಿತಿಯಾಗಿ ತೋರತೊಡಗಿತು. ಕೊನೆಕೊನೆಗೆ, ರಾಜ್ಯಸರ್ಕಾರಗಳು ಒಂದಾದಮೇಲೊಂದರಂತೆ, ಕುಟುಂಬನಿಯಂತ್ರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡವರಿಗೆ ವಿಶೇಷ ಭತ್ಯೆ, ಸವಲತ್ತುಗಳನ್ನು ನೀಡತೊಡಗಿದಾಗ ಎಮರ್ಜೆನ್ಸಿಯೆನ್ನುವುದು ಬರಿಯೆ ರಾಜಕೀಯ-ವೈಜ್ಞಾನಿಕ-ಪಾರಿಸರಿಕ ಸಂಗತಿಯಷ್ಟೆ ಅಲ್ಲದೆ ಆರ್ಥಿಕ ಸಂಗತಿಯೂ ಹೌದು ಎನ್ನುವಂಥ ಸಂದರ್ಭ ನಿರ್ಮ್ಣಗೊಂಡಿತು. ಈ ಒಟ್ಟೂ ಪಸಂಗದ ಇಬ್ಬರು ಕರ್ತೃಗಳಲ್ಲಿ ಸಂಜಯ ಗಾಂಧಿ ಅಕಾಲಿಕ ಮರಣಕ್ಕೆ

ತುತ್ತಾದರೆ, ಜಗಮೋಹನ್ ಇಂದಿಗೂ ಪ್ರಭಾವಿವಲಯದಲ್ಲಿ ಮುಂದಿವರಿದೆ ಬಂದಿದ್ದಾರೆ, ಉಗ್ರಪ ತಂತ್ರಜ್ಞತೆಯನ್ನು ಆರಾಧಿಸುತ್ತದ್ದ ಅಧಿಕಾರಿಯಾಗಿದ್ದವರು ಇಂದು ರಾಜಕಾರಣಿಯಾಗಿದ್ದಾರೆ; ಇತ್ತೀಚೆಗೆ ಒಂದು ಕವನ ಸಂಕಲನವನ್ನು ಪ್ರಕಟಿಸಿದ್ದಾರೆ. ಆದರೆ ಅವರ ನಿಲುವಿನಲ್ಲೇನೂ ಬದಲಾವಣೆಯಾತಂತೆ ತೊರುವುದಿಲ್ಲ. ಅವರ ಕವನಗಳು ಅವರ ಮೂಲ ತತ್ವವಾದ ನಿರ್ದಯಿ ವೈಜ್ಞಾನಿಕತೆಗೆ ಸಹೃದಯ ಕಲಾತ್ಮಕತೆಯ ಲೇಪವನ್ನು ಕೊಡುವ ವಿಫಲ ಭಾವಪ್ರಯೋಗಗಳಾಗಿವೆ ಅಷ್ಟೆ.

ಚರ್ಚೆಯ ಎರಡನೆಯ ಪ್ರಮುಖ ಪ್ರಾತಿನಿಧಿಕ ೧೯೮೪ರ ಭೂಪಾಲ್ ವಿಷಾನಿಲ ದುರಂತ, ಸಂಭವಿಸಿದ್ದು ಮೂಲತಃ ತಾಂತ್ರಿಕ ವೈಫಲ್ಯದಿಂದಾದರೂ ಅದು ಉಂಟುಮಾಡಿದ ಅನಾಹುತವನ್ನು ಅಡಗಿಸಿಡಲು ರಾಜಕೀಯ ವ್ಯವಸ್ಥೆಗಳು ಹಾಗೂ ವೆಜ್ಞಾನಿಕ ಸಂಸ್ಥೆಗಳು ಕೈಗೊಂಡ ಕ್ರಮಗಳು ಮಾತ್ರ ಅತ್ಯಂತ ಸಫಲವಾದವು. ಆಪತ್ಕಾಲದ ಕಾರಣಕರ್ತರಾಗಿದ್ದ ಶ್ರೀಮತಿ ಗಾಂಧಿ ಹತ್ಯೆಯಾದ ಕೆಲವೇ ದಿನಗಳಲಲಿ ನಡೆದ ಈ ದುರ್ಘಟನೆ ಕೆಲವು ಅಂಶಗಳ ಮಟ್ಟಿಗೆ ಮತ್ತೆ ಆ ಕರಾಳ ಕಾಲದ ನೆನಪುಗಳನ್ನೆ ತಂದಿತು. ಇದು ಇಡಿಯ ರಾಷ್ಟ್ರದ ವಿಜ್ಞಾನ ಪ್ರತಿಭೆಗೆ ವಿಹ್ವಲಗೊಳಿಸುವ ಕೆಲವು ಪ್ರಶ್ನೆಗಳನ್ನು ಕೇಳುವಂಥ ಅವಘಡವಾಗಿತ್ತಾದರೂ ನಮ್ಮ ವಿಜ್ಞಾನಗಳು ಆ ಸವಾಲನ್ನು ಸ್ವೀಕರಿಸದೆ ಉಳಿದರು ಮಾತ್ರವಲ್ಲ ಅದರ ದನಿಯನ್ನೆ ದಮನಿಸಲು ಯತ್ನಿಸಿದರು. ಉದಾಹರಣೆಗೆ, ಆ ಸನ್ನಿವೇಶದಲ್ಲಿ ಅಖಿಲ ಭಾರತ ವೈದ್ಯಕೀಯ ಸಂಶೋಧನಾ ಸಂಸ್ಥೆ ತೆಗೆದುಕೊಂಡ ಮೊತ್ತಮೊದಲ ಕ್ರಮವೆಂದರೆ ಆ ದುರಂತಕ್ಕೆ ಸಂಬಂಧಿಸಿದ ಯಾವುದೆ ವೈದ್ಯಕೀಯ ಮಾಹಿತಿಯನ್ನು ಯಾರೆ ಪ್ರಕಟಿಸುವುದರ ಮೇಲೆ ನಿಷೇಧ ಹೇರಿದ್ದು. ಅದರ ಹಿಂದೆಯೆ, ಭಾರತೀಯ ಹವಾಮಾನ ಸಂಸ್ಥೆ ದುರ್ಘಟನೆ ನಡೆದ ದಿನಗಳ ಹವಾಮಾನ ಸ್ಥಿತಿಯ ಕುರಿತಾದ ಎಲ್ಲ ಅಂಕಿ-ಅಂಶಗಳನ್ನು ಸರ್ಕಾರಿ ರಹಸ್ಯವೆಂದು ಘೋಷಿಸಿತು. ಮುರನೆಯದಾಗಿ, ಆಡಳಿತ ವ್ಯವಸ್ಥೆ ಇಡೀ ಭೂಪಾಲನ್ನು ವೈಜ್ಞಾನಿಕ ಪ್ರಯೋಗಶಾಲೆಯಾಗಿ ಪರಿವರ್ತಿಸಿತು. ಆ ಮೂಲಕ ಅಲ್ಲಿಯ ಜನರನ್ನು ತಜ್ಞ ವಿಜ್ಞಾನಿಗಳ ವೀಕ್ಷಣೆಯ ವಸ್ತುಗಳನ್ನಾಗಿ ಮಾರ್ಪಟಿಸಿತು.

ವಿಷಾನಿಲದಂತಹ ಮಾರಕ ಪದಾರ್ಥದ ಪ್ರಭಾವಕ್ಕೆ ಈಡಾದವರನ್ನು ರೋಗಿಗಳೆಂದು ಪರಿಗಣಿಸುವುದರಲ್ಲಿ ಅಸಹಜತೆಯೇನಿಲ್ಲ. ಆದರೆ ಭೂಪಾಲ್ ದುರಂತದ ಅನಂತರ ನಡೆದ ಘಟನಾವಳಿ ಈ ಕ್ರಿಯೆಗೆ ಸಂಬಂಧಿಸಿದಂತೆ ಕೆಲವು ವೈಪರೀತ್ಯಗಳನ್ನು ಹುಟ್ಟಿಹಾಕಿತು. ಈ ಪ್ರಕ್ರಿಯೆ ಅಂತಿಮವಾಗಿ ಒಟ್ಟೂ ಆಧುನಿಕ ವಿಜ್ಞಾನ ವ್ಯವಸ್ಥೆಯ ಅಂತರ್ಗತ ದೋಷಗಳ ಪ್ರತೀಕವಾಗಿತ್ತು. ಭೂಪಾಲಿನ ಜನ



ಮೊದಲು ಬಲಿಗಳೆನಿಸಿಕೊಂಡು, ಹಾಗಾಗದೆ ಬಚಾವಾದವರು ಅನಂತರ ಸಂತ್ರಸ್ತರೆನಿಸಿಕೊಂಡರು, ಸಂತ್ರಸ್ತರು ಮುಂದೆ ರೋಗಿಗಳಾದರು, ರೋಗಿಗಳು ಮುಂದೆ ರೋಗಭ್ರಾಂತಿ ಪೀಡಿತರೆಂದು ಪರಿಗಣಿತರಾದರು, ಭ್ರಾಂತಿಪೀಡಿತರು ಮುಂದೆ ಬೀದಿಭಿಕಾರಿಗಳೆಂದನಿಸಿಕೊಂಡರು. ವಿಲಕ್ಷಣ ಸಂಗತಿಯೆಂದರೆ, ಒಬ್ಬನೆ ವ್ಯಕ್ತಿಗೆ ಇದಿಷ್ಟೂ ಹಣೆಪಟ್ಟಿಗಳನ್ನು ಹಚ್ಚಿ ಕಿತ್ತುಹಚ್ಚುವಲ್ಲಿ ವಿಜ್ಞಾನಿಗಳು ಸಕ್ರಿಯವಾಗಿ ಭಾಗಿಗಳಾಗಿದ್ದರು.

ಈ ಪ್ರಕ್ರಿಯೆಯ ಅಮಾನುಷತೆಯನ್ನು ಅರ್ಥಮಾಡಿಕೊಳ್ಳಲು ಮೊದಲು ಆಧುನಿಕ ವಿಜ್ಞಾನ 'ರೋಗಿ'ಯನ್ನು ನಿರ್ವಚಿಸುವ ಬಗೆಯನ್ನು ಅರಿತುಕೊಳ್ಳಬ್ಬು. ನಮ್ಮ ಯುಗದ ಆಡಳಿತಯಂತ್ರ ಹಾಗೂ ವಿಜ್ಞಾನವ್ಯವಸ್ಥೆಗಳೆರಡೂ 'ರೋಗಿ'ಯನ್ನು ತುಂಬಾ ವೈಜ್ಞಾನಿಕವಾಗೆಯ ವ್ಯಾಖ್ಯಾನಿಸುತ್ತವೆ. ಅವುಗಳ ಪರಿಭಾಷೆಯಲ್ಲಿ, ಅವು ಯಾವುದನ್ನು ಅನಾರೋಗ್ಯವೆಂದು ಅಧಿಕೃತವಾಗಿ ಗುರುತಿಸುತ್ತವೊ ಅದರಿಂದ ಬಾಧಿತನಾಗಿ, ಅವು ಯಾವುದನ್ನು ಅಧಿಕೃತವಾಗಿ ಕೆಲಸಕಾರ್ಯಗಳೆಂದು ಗಣಿಸುತ್ತವೆಯೊ ಅವುಗಳನ್ನು ನಿರ್ವಹಿಸಲು ಅಸಮರ್ಥನಾಗುವ ಪ್ರಜೆಯೆ ರೋಗಿ. ಆತ ರೋಗಿಯೆಂದೆನಿಸಿಕೊಳ್ಳಲು, ಹಾಗೆಯೆ ನಿರೋಗಿಯೆಂದಿನಿಸಿಕೊಳ್ಳಲೂ ಆಧುನಿಕ ವೈದ್ಯಕೀಯ ವ್ಯವಸ್ಥೆಯಿಂದ ಒಂದೊಂದು ಪ್ರಮಾಣಪತ್ರವನ್ನು ಪಡೆದುಕೊಳ್ಳಬೇಕು; ಅನಾರೋಗ್ಯದ ಕಾರಣ ಆಡಳಿತಯಂತ್ರದ ಸೇವೆಗೆ ಗೈರುಹಾಜರಾಗಲು, ಹಾಗೆಯೆ ಚೇತರಿಸಿಕೊಂಡ ಅನಂತರ ಆ ಸೇವೆಗೆ ಮರುಹಾಜರಾಗಲೂ ಆರೋಗ್ಯ ವಿಜ್ಞಾನಯಂತ್ರದ ರುಜುವಾತನ್ನು ಆಧರಿಸಬೇಕು. ಒಂದು ಪಕ್ಷ ಆತ ವೈದ್ಯರ ಪ್ರಮಾಣವನ್ನು ಒಪ್ಪದೆ ಅವರ ಅಭಿಪ್ರಾಯದ ವಿರುದ್ಧವಾಗಿ ತನ್ನನ್ನು ರೋಗಿಯೆಂದೊ ಇಲ್ಲ ನಿರೋಗಿಯೆಂದೊ ಗಣಿಸಿಕೊಂಡಲ್ಲಿ, ವ್ಯವಸ್ಥೆ ಆತನನ್ನು ಮೊದಲು ವಿಲಕ್ಷಣ ಮತಿಯೆಂದೂ, ಆತ ಅದೇ ನಡವಳಿಕೆಯನ್ನು ಮುಂದುವರೆಸಿದಲ್ಲಿ ವಿಕಲಮತಿ ಯೆಂದೂ ಗುರುತಿಸಲೀರಂಭಿಸುತ್ತದೆ. ಭೂಪಾಲಿನ ಬಹುಪಾಲು ಸಂತ್ರಸ್ತರಿಗಾದದ್ದು ಇದೇ ಗತಿ. ಅವರು ತಪಾಸಣೆ-ಮರುತಪಾಸಣೆಗಳಿಗೆಂದು ಆಸ್ಪತ್ರೆಗಳಿಗೆ ಅನೇಕ ವರ್ಷಗಳ ಕಾಲ ಅಲೆದಾಡುತ್ತಿದ್ದಂತೆ, ಅವರ ಕುರಿತಾದ ಆರೋಗ್ಯತಜ್ಞರ ಅಭಿಮತ ಬದಲಾಗುತ್ತಬಂದಿತು. ಅದರ ಪ್ರಕಾರ ಮೊದಲು ಭೂಪಾಲ್ ದುರಂತ ನಿಜಕ್ಕೂ ದುರಂತವಾಗಿತ್ತು; ಅದರಿಂದ ರೋಗಿಗಳಾದವರು ನಿಡಕ್ಕೂ ರೋಗಿಗಳಾಗಿದ್ದರು. ಮುಂದೆ, ಕಾಲ ಸರಿದಂತೆ, ನೆನಪು ಮಸುಕಾದಂತೆ, ಆ ದುರಂತ ದೂರಭೂತದ ಸಂಗತಿಯಾಯಿತು; ರೋಗಿಗಳೆಲ್ಲ ಬರಿಯೆ ರೋಗಭ್ರಾಂತಿ ಪೀಡಿತರಾದರು. ಮೊದಲು ಆ ಅವಘಡವನ್ನು ದೊಡ್ಡ ಸಂಕಷ್ಟವೆ ಹೌದು ಎಂದು ಕರೆದಿದ್ದ ಡಾಕ್ಟರುಗಳು

ಈಗ ಆ ರೋಗಿಗಳಿಗೆ 'ಇಲ್ಲ' ನಿಮ್ಮಲ್ಲಿ ಯಾವುದೆ ಅಸಹಜವಾದ ಆರೋಗ್ಯ ಸಮಸ್ಯೆಯಿಲ್ಲವಲ್ಲ. ಶಂಖ್ಯಾಶಾಸ್ತ್ರೀಯ ಸರ್ವೆಗಳ ಪ್ರಕಾರ ನೀವು ಹೇಳಿಕೊಳ್ಳುತ್ತಿರುವ ರೋಗಗಳು ನಿಮ್ಮ ಸ್ಲಮ್ಮುಗಳಲ್ಲಿ ಅತ್ಯಂತ ಸಹಜವೂ ಸರ್ವಸಾಮಾನ್ಯವೂ ಆದ ರೋಗಗಳೆ ಹೋದಲ್ಲ. ಅವುಗಳಿಗಿಂತ ಭೀಕರವಾದೊಂದು ಅಸ್ವಾಸ್ಥ್ಯವಿದೆಯೆಂದು ನೀವೇ ಕಲ್ಪಿಸಿಕೊಂಡಿದ್ದೀರಿ; ಅದು ನಿಮ್ಮ ಭ್ರಮೆ ಅಷ್ಟೆ ' ಎಂದು ಹೆಳತೊಡಗಿತರು. ರೋಗಿಗಳು ಆಗಲೂ ತಜ್ಞರ ಅಭಿಪ್ರಾಯವನ್ನು ಒಪ್ಪದೆ, ತಾವು ನಿಜವಾದ ಸಮಸ್ಯೆಗಳಿಂದ ನರಳುತ್ತಿದ್ದೇವೆಂದು ವಾದಿಸತೊಡಗಿದಲ್ಲಿ ವ್ಯವಸ್ಥೆ ಅಂಥವರನ್ನು ಕೊನೆಗೆ ಸೋಮಾರಿಗಳೆಂದೊ ಪುಕ್ಕಟೆ ಪರಿಹಾರಕ್ಕಾಗಿ ಬಂದ ಬೀದಿಭಿಕಾರಿಗಳೆಂದೊ ವರ್ಗೀಕರಿಸಿತು. ವಿಜ್ಞಾನದ ಪರಿಭಾಷೆಯ ಮೂಲಭೂತ ಸರ್ವಾಧಿಕಾರಿ ಗುಣಕ್ಕೆ ಭೂಪಾಲು ಸ್ಥಳೀಕವೂ ತೀರಾ ಸಮಕಾಲೀನವೂ ಆದ ಒಂದು ನಿದರ್ಶನವಷ್ಟೆ. ಆಲ್‌ಫ್ರೆಡ್ ವಾಲೇಸ್ ಬಹಳ ಹಿಂದೆಯೆ ಗುರುತಿಸಿದಂತೆ, ಆಮೇಲೆ ಬೇರೆ ಅನೇಕರು ವಿಸ್ತರಿಸಿ ತೋರಿಸಿದಂತೆ, ಆಧುನಿಕ ವಿಜ್ಞಾನ ತನ್ನಷ್ಟಕ್ಕೆ ತಾನಾಗಿ ಬಿಡುಗಡೆಯ ದೊಡ್ಡ ಶಕ್ತಿಯಾಗಿರಬಹುದು; ಆದರೆ ಅದರ ಭಾಷೆ ಅಷ್ಟೆ ಪ್ರಬಲವಾಗಿ ಇನ್ನೊಬ್ಬನ್ನು ದಾಸ್ಯಕ್ಕೆ ತಳ್ಳುವಂಥದ್ದಾಗಿದೆ.

ಹೀಗೆ, ಭಾರತದಲ್ಲಿ ಆಧುನಿಕ ಪಾಶ್ಚಿಮಾತ್ಯ ವಿಜ್ಞಾನ ಸಾಗಿಬಂದ ಚರಿತ್ರೆಯ ಮೊದಲ ಘಟ್ಟ, ಸ್ವಾತಂತ್ರಪೂರ್ವ ಕಾಲದ ಘಟ್ಟ, ಬಹುತ್ವವನ್ನೂ ಬಿಡುಗಡೆಯ ಭರವಸೆಯನ್ನೂ ಹೊಂದಿತ್ತಾದರೆ, ಸ್ವಾತಂತ್ರ್ಯ ಬಂದಾದನಂತರದ ಮೊದಲ ಅವಧಿಯಾದ ನೊಹರೂ ಯುಗದಲ್ಲಿ ಮೊದಲ ಆದಶವನ್ನು ಪ್ರತಿಭಾ ಶಕ್ತಿಯನ್ನು ತುಸು ಉಳಿಸಿಕೊಂಡಿದ್ದೂ ಯೋಜಿತ ಅಭಿವೃದ್ಧಿಗೆ ಕೊಟ್ಟ ಅತಿಯಾದ ಒತ್ತಿನಿಂದ ತುಸು ಸಂಕುಚಿತವೂ ತಂತ್ರಜ್ಞಪರವೂ ಆದ ವ್ಯವಸ್ಥೆಯಾಗಿ ಜಿಡ್ಡುಗಟ್ಟಲಾರಂಭಿಸಿತು. ಇನ್ನೂ ಮುಂದೆ, ಇಂದಿರಾ ಗಾಂಧಿಯವರ ಕಾಲಘಟ್ಟದಿಂದಾರಂಭಿಸಿ ಇಂದಿನವರೆಗೂ, ಅದು ಯಜಮಾನಿಕೆಯ ಸಾಧನವಾಗಿ, ಜನಸಾಮಾನ್ಯರನ್ನು ದಾಸ್ಯಕ್ಕೆ ದೂಡುವ ಯಂತ್ರವಾಗಿ ಮಾರ್ಪಡುತ್ತ ಬಂದಿದೆ; ತನ್ನ ಮೂಲಮಾದಲಿಯ ಭೀಕರ ಅಣಕವೊಂದಾಗಿ ನಿಂತಿದೆ. ನೊಬೆಲ್ ಪ್ರಶಿಶ್ತಿ ಪುರಸ್ಕೃತ ವಿಜ್ಞಾನಿ ಸರ್ ಸಿ.ವಿ. ರಾಮನ್ ಬಹಳ ಹಿಂದೆಯೆ ಬೇರೊಂದು ಸಂದರ್ಭದಲ್ಲಿ ನೀಡಿದ ಎಚ್ಚರಿಕೆಯನ್ನು ಪ್ರಸ್ತುತಕ್ಕೆ ಅನ್ವಯಿಸಿ ಹೇಳುವುದಾದರೆ, ಇಂದಿನ ವಿಜ್ಞಾನಿ ಸಂಸ್ಥೆಗಳು ವೈಜ್ಞಾನಿಕ ಯಂತ್ರೋಪಕರಣಗಳನ್ನು ಹೂಳಿಡುವ ಗೋರಿಗಳಾಗಿಹೋಗಿವೆ; ಇಂದಿನ ವಿಜ್ಞಾನಿಗಳು ಹೊಸ ಸವಾಲುಗಳನ್ನು ಸ್ವೀಕರಿಸುವ ಸ್ಥೈರ್ಯವೆ ಇಲ್ಲದ, ಹೊಸ ಸತ್ಯಗಳನ್ನು ಶೋಧಿಸುವ ಸೃಜನಾತ್ಮಕತೆಯೆ ಇಲ್ಲದ ಜಡಯಂತ್ರ ಜೀವಿಗಳಾಗಿಹೋಗಿದ್ದಾರೆ.



••• ••• •••

ಇನ್ನು ನಾವು ಈ ಚರ್ಚೆಯ ಕೊನೆಯ ಭಾಗಕ್ಕೆ ಬರಬಹುದು. ಭಾರತದ ಮಟ್ಟಿಗೆ ಮಾತ್ರವಲ್ಲದೆ ಒಟ್ಟೂ ಜಗತ್ತಿನ ಮಟ್ಟಿಗೂ ವಿಜ್ಞಾನ ಭವಿಷ್ಯದಲ್ಲಿ ಯಾವ ರೂಪ-ಸ್ವರೂಪಗಳನ್ನು ತಳೆಯಬಹಯದೆಂಬುದರ ಕುರಿತಾಗಿ ಚಿಂತಿಸಬಹುದು. ಈ ಬಗೆಗೆ ಈಗಷ್ಟೆ ಸಂದುಹೋದ ಸತಮಾನವೆ ಕೆಲವು ಹೊಳಹುಗಳನ್ನು ಕೊಟ್ಟಿದೆ. ಈ ಗತಶತಮಾನ-ಇಪ್ಪತ್ತನೆಯ ಶತಮಾನ - ದ ಒಂದು ವೈಚಿತ್ರ್ಯವೆಂದರೆ ಅದು ಒಂದು ರೀತಿಯಲ್ಲಿ ತನ್ನ ಕ್ಯಾಲೆಂಡರ್ ಕಾಲಾವಧಿ ಮುಗಿಯುವ ಮುನ್ನವೆ ಮುಗಿದು ಹೋಯಿತು. ಇದನ್ನು ತುಸು ವಿಶದೀಕರಿಸಬೇಕೆಂದರೆ, ಆ ಶತಮಾನಕ್ಕೆ ಹಿರಿಮೆಯನ್ನು ಸ್ವಂತಿಕೆಯನ್ನು ತಂದುಕೊಟ್ಟಿದ್ದ ಎಲ್ಲ ದೊಡ್ಡ ಆದರ್ಶಗಳೂ ಆಂದೋಲನಗಳೂ ೧೯೯೦ರ ಹೊತ್ತಿಗೆಯ ತಮ್ಮ ಕೊನೆಯುಸಿರನ್ನು ಎಳೆದವು; ರಷಿಯಾ-ಚೀನಾ-ಕ್ಯೂಬಾಗಳ ಕ್ರಾಂತಿಗಳು, ವಿವಿಧ ದೇಶಗಳ ವಸಾಹತು ವಿರೋಧಿ ಚಳವಳಿಗಳು ಮತ್ತು ನವಸಾಮ್ರಾಜ್ಯಶಾಹಿ ವಿರೋಧ ಹೋರಾಟಗಳೆಲ್ಲವೂ ತಮ್ಮ ಕಸುವನ್ನು ಕಲೆದುಕೊಂಡವು; ದಕ್ಷಿಣ ಆಫ್ರಿಕೆಯ ಚಳವಳಿಯೊಂದು ಮಾತ್ರ ಹೇಗೊ ಪರದಾಟಪಟ್ಟು ಗುಟುಕು ಉಸಿರನ್ನು ಉಳಿಸಿಕೊಂಡು, ಇಪ್ಪತ್ತೊಂದನೆಯ ಶತಮಾನಕ್ಕೆ ದಾಟಿಕೊಂಡಿತು. ಇವೆಲ್ಲ ಕನಸುಗಳು ಮತ್ತು ಹೋರಾಟಗಳು, ಒಂದು ಸ್ತರದಲ್ಲಿ, ವಿಜ್ಞಾನದಿಂದ ಸ್ಫೂರ್ತಿ ಪಡೆದವಂಥವಾಗಿದ್ದವು, ವೈಜ್ಞಾನಿಕತೆಯನ್ನು ಮಾದರಿಯಾಗಿಟ್ಟುಕೊಂಡವಾಗಿದ್ದವು.

ಈ ನಡುವೆ, ವಿಜ್ಞಾನವೂ ತನ್ನ ಸ್ವರೂಪವನ್ನು ಸಾಕಷ್ಟು ಬದಲಿಸಿಕೊಳ್ಳಬೇಕಾದ ಸನ್ನಿವೇಷ ಉದ್ಭವವಾಯಿತು. ಇಪ್ಪತ್ತನೆಯ ಶತಮಾನದ ಮೊದಲು ವಿಜ್ಞಾನ ಸುನಿಶ್ಚಿತತೆ, ವ್ಯವಸ್ಥೆ, ವಸ್ತುನಿಷ್ಠತೆ, ಭವಿಷ್ಯಗ್ರಹಣ - ಸಾಧ್ಯತೆ (            ) ಗಳು ತನ್ನ ಘನಲಕ್ಷಣಗಳೆಂದು ಬೀಗುತ್ತಿದ್ದರೆ, ಆ ಶತಮಾನದ ಪ್ರಾರಂಭಿಕ ದಶಕಗಳಲ್ಲಿ, ವಿಶೇಷವಾಗಿ ಭೌತಶಾಸ್ತ್ರದಲ್ಲಿ ಆದ ಕೆಲವು ಕ್ರಾಂತಿಕಾರಗ ಬದಲಾವಣೆಗಳು ಸಂಪೂರ್ಣ ವ್ಯತಿರಿಕ್ತ ಲಕ್ಷಣಗಳಾದ ಅನಿಶ್ಚಿತತೆ, ವ್ಯಕ್ತಿಸಾಪೇಕ್ಷತೆ, ಅವ್ಯವಸ್ಥೆ ಭವಿಷ್ಯಗ್ರಹಣ - ಅಸಾಧ್ಯತೆಗಳನ್ನು ವಿಜ್ಞಾನದ ಕೇಂದ್ರತತ್ವಗಳನ್ನಾಗಿ ಸ್ಥಾಪಿಸಿ, ಆ ಹಮ್ಮನ್ನು ತಗ್ಗಿಸಿದವು. ಆ ಮೋದಲು ವಿಜ್ಞಾನ ಮೌಲ್ಯಾತೀತವಾದದು ಮೌಲ್ಯಮುಕ್ತವಾದದು ಎನ್ನುವ ನಂಬಿಕೆಯಿದ್ದರೆ ಈಗ ಅದು ಹಾಗಾಗಬೇಕೆಂದು ಎಷ್ಟು ಪ್ರಯತ್ನಿಸಿದರೂ ಅದು ಕೆನೆಗು ಮೌಲ್ಯನಿಯಂತ್ರಿತವೂ ಮೌಲ್ಯಯುಕ್ತವೂ ಅದುದು ಎಂಬುದು ದೃಢಪಟ್ಟಿತು. ಇಂಥೆಲ್ಲ ಬೆಳವಣಿಗೆಗಳಿಂದ ಸೃಷ್ಟಿಯಾದ ವಿರೋಧಾಭಾಸ ವೆಂದರೆ, ಭೌತಿಕ ವಿಜ್ಞಾನ ಹಿಂದೆ ಯಾವ ಗುಣಗಳನ್ನು ಅವಗುಣಗಳೆಂದು ಪರಿಗಣಿಸಿ,

ಅವುಗಳನ್ನು ಹೊಂದಿರುವ ಕಾರಣಕ್ಕಾಗಿಯೆ ಸಮಾಜ ವಿಜ್ಞಾನಗಳನ್ನು ತನಗಿಂತ ಕೆಳಗಿನವುವೆಂದು ಜರಿಯುತ್ತಿತ್ತೊ ಅವುಗಳನ್ನೆ ಈಗ ತನ್ನ ಸದ್ಗುಣಗಳೆಂದು ಮೆರೆಸಲಾರಂಭಿಸಿತು. ಇನ್ನೊಂದೆಡೆ, ಸಮಾಜ ವಿಜ್ಞಾನಿಗಳು ಸ್ವತಃ ಭೌತಿಕ ವಿಜ್ಞಾನಗಳ ನಿಸ್ಸಂದಿಗ್ಧತೆಯ ಶಿಖರಸಮಾನಸ್ಥಿತಿಯನ್ನು ತಾವೂ ಮುಟ್ಟಿಕೊಳ್ಳಬೇಕೆಂಬ ವಿವೇಚನಾಹೀನ ಸ್ಪರ್ಧೆಯಲ್ಲಿ, ಸ್ವಂತಿಕೆಯನ್ನು ಬಿಟ್ಟುಕೊಟ್ಟು ಹಳೆಯ ವಿಜ್ಞಾನದ ಪಡಿಯಚ್ಚುಗಳಾಗತೊಡಗಿದವು.

ಇಂಥದೊಂದು ದ್ವಂದ್ವ ಸಂದಿಗ್ಧಮಯ ಸನ್ನಿವೇಷದಲ್ಲಿ ವಿಜ್ಞಾನ ತನ್ನ ಭವಿಷ್ಯದ ಕುರಿತಾಗಿ ಎದುರಿಸಬೇಕಾದ ಕೆಲವು ಸವಾಲುಗಳು ಹೀಗಿವೆ —

ಮೊದಲನೆಯದಾಗಿ, ಜ್ಞಾನ ಮತ್ತು ಮಾಹಿತಿಗಳ ನಡುವಿನ ಸಂಬಂಧ ಹಾಗೂ ಅಂತರಗಳ ಬಗೆಗಿನ ಸಮಸ್ಯೆಗಳನ್ನು ನಾವು ಬೇಗ ಪರಿಹರಿಸಿಕೊಳ್ಳಬೇಕಾಗಿದೆ. ಇಲ್ಲದಿದ್ದಲ್ಲಿ ಅಂಕಿ-ಅಂಶಗಳ ಸಂಗ್ರಸ ಹಾಗೂ ಸಂಯೋಜನೆಗಳೆ ಅತಿಶ್ರೇಷ್ಠ ಜ್ಞಾನಸಾಧನೆಗಳೆಂದು ಬಿಂಬಿಸುತ್ತಿರುವ ಪ್ರಸಕ್ತ ವಾಣಿಜ್ಯ ವ್ಯವಸ್ಥೆ ಮಾಹಿತಿ ತಂತ್ರಜ್ಞಾನದ ವೇದಿಕೆಯಲ್ಲಿ ಜ್ಞಾನವನ್ನು ಬಲಿಕೊಡುವ ಪಾಯವುಂಟು. ಮಾಹಿತಿತಂತ್ರಜ್ಞಾನ ಕೆನೆಗೂ ಎಷ್ಟು ಸಂಕುಚಿತವಾದದು ಹಾಗೂ ಆಧುನಿಕ ವಿಜ್ಞಾನದ ಏಕತಳಿಕೃಷಿಯ ಕಾರ್ಯಕ್ರಮವನ್ನೆ ಮುಂದುವರೆಸುವಂಥದು ಎನ್ನುವುದನ್ನು ಇಂದು ಪಾಶ್ಚಿಮಾತ್ಯರೆ ಗುರುತಿಸುತ್ತಿದ್ದಾರೆ. ಜಾಗತಿಕ ಕೃಷಿ ಸಮ್ಮೇಳನವೊಂದರಲ್ಲಿ, ಅಮೇರಿಕಾ ಮತ್ತು ಭಾರತಗಳ ನಡುವೆ ಅಮೇರಕಾವೆ ಹೆಚ್ಚು ಮಾಹಿತಿಸಮೃದ್ಧವಾದಿ ದೇಶವಲ್ಲರೆ ಎಂಬ ಮಾತು ಬಂದಾಗ, ಖ್ಯಾತ ಅಮೆರಿಕನ್ ಕೃಷಿ ವಿಜ್ಞಾನಿ ವೆಸ್ಟ್ ಜ್ಯಾಕ್‌ಸನ್ ಥಟ್ಟನೆ ಹೇಳಿದಃ ಎಂಥ ಮೂರ್ಖ ಮಾತದು! ನಿಜ ಹೇಳಬೇಕೆಂದರೆ, ಅಮೇರಿಕಾಕ್ಕಿಂತ ನಿಮ್ಮ ಭಾರತರೆ ಎಷ್ಟೋ ಪಟ್ಟು ಹೆಚ್ಚು ಮಾಹಿತಿ ಸಂಪತ್ತನ್ನು ಹೊಂದಿರುವ ದೇಶವಾಗಿದೆ. ನಿಮ್ಮಲ್ಲಿ ೪೦,೦೦೦ ಬತ್ತದ ತಳಿಗಳಿವೆ. ೧,೦೦೦ ಮಾವಿನ ಜಾತಿಗಳಿವೆ... ಅವೆಲ್ಲವುಗಳಿಗೆಸಂಬಂಧಿಸಿದ ಅಗಾಧ ಮಾಹಿತಿಯನ್ನು ನೀವಿನ್ನೂ ಉಳಿಸಿಕೊಂಡಿದ್ದೀರಿ. ನಿಮ್ಮಲ್ಲಿ ಪ್ರತಿಯೊಬ್ಬ ಸಾಮಾನ್ಯ ರೈತನಿಗೂ ಹತ್ತಿಪ್ಪತ್ತು ಭತ್ತದ ತಳಿ ಹತ್ತಿಪ್ಪತ್ತು ಮಾವಿನ ಜಾತಿ... ಗಳ ಜ್ಞಾನವಿರುತ್ತದೆ. ಅದೇ ನಮ್ಮ ಅಮೇರಿಕನ್ ಕೃಷಿ ಕ್ರಾಂತಿ ಸಾಧಿಸಿದ್ದೇನು? ಮೊದಲಿದ್ದ ನೂರಾಆರು ಸೇಬಿನ ತಳಿಗಳನನ್ನು ಅದು ಆರು ತಳಿಗಳಿಗೆ ಇಳಿಸಿತಷ್ಟೆ. ನೂರು ತಳಿಗಳನ್ನು ನಿರ್ನಾಮ ಗೈದದ್ದಷ್ಟೆ ಅಲ್ಲದೆ ಅವುಗಳ ಕುರಿತಾಗಿ ನಮ್ಮ ಕೃಷಿಕರಲ್ಲಿದ್ದ ಜ್ಞಾನವನ್ನೂ ನಾಶಗೊಳಿಸಿತು. ಇಂದು ನಮ್ಮ ಬೆಳೆಗಾರರಿಗೆ ಗೊತ್ತಿರುವುದು ಆರೇ ಆರು ಸೇಬು ತಳಿಗಳು ಮಾತ್ರ. ಈಗ ನೀವೇ ಹೇಳಿ, ಯಾರು ಮಾಹಿತಿಸಂಪತ್ತು ಜಾಸ್ತಿ? ಭಾರತೀಯ



ರೈತರದೊ, ಅಮೇರಿಕನ್ ರೈತರದೊ? ಇನ್ನು ಕಂಪ್ಯೂಟರ್, ಐ.ಟಿ., ಇತ್ಯಾದಿಯೆಂದು ಅಡ್ಡಬಾಯಿ ಹಾಕುತ್ತೀರೊ? ಮಾಹಿತಿಯೆ ಇಲ್ಲದ ಮೇಲೆ ಮಾಹಿತಿತಂತ್ರಜ್ಞಾನ ಇಟ್ಟುಕೊಂಡು ಏನು ಮಾಡುತ್ತೀರಿ, ಬಹುರುಚಿ ಬೇಳೆಕಾಳು ಹಣ್ಣುಹಂಪಲುಗಳೆ ಇಲ್ಲದ ಮೇಲೆ ಫ್ಲಾಪ-ಸಿ.ಡಿ.ಗಳನ್ನು ಇಟ್ಟುಕೊಂಡು ಏನು ತಿನ್ನುತ್ತೀರ್ರಿ, ಮಣ್ಣು?

ವ್ಯಗ್ರತೆ, ವಿನೋದ, ವಿಷಾದ, ವಿವೇಕಗಳೆಲ್ಲ ತುಂಬಿಕೊಂಡ, ಜ್ಞಾನ ಮತ್ತು ಮಾಹಿತಿಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವ ಈ ಮಾತುಗಳು ನಮ್ಮನ್ನು ಎರಡನೆಯ ಪ್ರಶ್ನೆಯತ್ತ ತರುತ್ತವೆ. ಇದು ಜ್ಞಾನ ಸಂಬಂಧಿ ನ್ಯಾಯ ಹಾಗೂ ಪ್ರಜಾಪ್ರಭುತ್ವಗಳ ಕುರಿತಾದ ಪ್ರಶ್ನೆ. ಎಂದೆಡೆ ರಾಜಕಾರಣ ಕ್ಷೇತ್ರದಲ್ಲಿ ಸರ್ವಸಮಾನತೆಯ ತತ್ವವನ್ನು ನೆಲೆಗೊಳಿಸುತ್ತಿರುವಂತೆಯೆ ನಮ್ಮ ಸಮಾಜ ಇನ್ನೊಂದೆಡೆ ಜ್ಞಾನ ಶಾಸ್ತ್ರಕ್ಷೇತ್ರದಲ್ಲಿ ತಾರತಮ್ಯವನ್ನು ಗಟ್ಟಿಗೊಳಿಸುತ್ತಿದೆ. ಇಲ್ಲಿ ಒಂದು ಜ್ಞಾನರೂಪ ಮತ್ತೊಂದಕ್ಕಿಂತ ಮೇಲಾದುದು ಮಹತ್ತರವಾದದು ಎನ್ನುವ ಕೃತ್ರಿಮ ಪರಿಭಾವನೆ ಬೇರೂರುತ್ತಿದೆ. ಜ್ಞಾನವಲಯದಲ್ಲಿ ಹೀಗೆ ಅಧಿಕೃತತೆಯನ್ನೂ ಅಧಿಕಾರವನ್ನೂ ಕೇಂದ್ರೀಕರಿಸುವ ಈ ಪ್ರಕ್ರಿಯೆ ಅಂತಿಮವಾಗಿ ಜ್ಞಾನ-ಜೀವ-ಜನಗಳೆಲ್ಲದರ ವಿರೋಧಿಯಾದದ್ದು. ಒಂದು ಸರ್ವಸಾಮಾನ್ಯ ಲೆಕ್ಕದ ಪ್ರಕಾರ ಆಧುನಿಕ ಸಸ್ಯಶಾಸ್ತ್ರ ಇಂದಿಗೂ ಜಗತ್ತಿನ ಒಟ್ಟೂ ಸಸ್ಯರಾಶಿಯಲ್ಲಿ ಒಂಬತ್ತು ಶತಾಂಶದಷ್ಟನ್ನು ಮಾತ್ರ ಅಭ್ಯಸಿಸಿ ವರ್ಗೀಕರಿಸಿದೆ. ಉಳಿದ ತೊಂಬತೊಂದು ಶತಾಂಶಭಾಗವನ್ನು ಬುಡಕಟ್ಟು ಜನಾಂಗಗಳವರು ಇತ್ಯಾದಿ ಎಷ್ಟೋ ಶತಮಾನಗಳಿಂದ ಬಳಸುತ್ತಾ ಬೆಳೆಸುತ್ತಾ ಬಂದಿದ್ದಾರೆ. ಇಷ್ಟಾಗಿಯೂ ಆಧುನಿಕ ಜ್ಞಾನರಾಜಕಾರಣ ಆಧುನಿಕ ಸಸ್ಯಶಾಸ್ತ್ರಕ್ಕೆ ಮಾತ್ರ ಅಧಿಕೃತ ಶಿಷ್ಟ ಸಸ್ಯಶಾಸ್ತ್ರವೆಂಬ ಮಾನ್ಯತೆ ನೀಡುತ್ತದೆ, ಅನಾಧುನಿಕರ ಸಸ್ಯಜ್ಞಾನಕ್ಕೆ ಪರಿಶಿಷ್ಟ ಸಸ್ಯಶಾಸ್ತ್ರ-( ) ಯೆಂಬ ಮುದ್ರೆಯನ್ನೊತ್ತಿ ಸರ್ವಸಮಾನತೆ ಮತ್ತು ಸಹಾನುಭೂತಿ ಮೆರೆದೆನೆಂದು ಸೊಕ್ಕುತ್ತದೆ.

ಇಂಥ ವಿಷಮ ವ್ಯವಸ್ಥೆಯೆ ನಮ್ಮ ಚರ್ಚೆಯ ಮೂರನೆಯ ಸಮಸ್ಯೆಯಾದ ವಿಜ್ಞಾನದ ಹಿಂಸಾತ್ಮಕತೆಯ ಮೂಲವಾಗಿರುವುದು. ಒಮ್ಮೆ ತರತಮ ಶ್ರೇಣೀಕರಣವನ್ನು ಒಪ್ಪಿಕೊಂಡಾದ ಮೇಲೆ ಆಧುನಿಕ ವಿಜ್ಞಾನ ತನ್ನ 'ಉನ್ನತ' ಪ್ಯಗಗಳಿಗೆಂದು ತನಗಿಂದ 'ನಿಮ್ಮ' ವ್ಯಕ್ತಿ-ವಸ್ತು-ಪ್ರಾಣಿಗಳನ್ನು ಪ್ರಯೋಗಪಶುಗಳಾಗಿ ಯಾವುದೆ ತಳಮಳವಿಲ್ಲದೆಯೆ ಸಲೀಸಾಗಿ ಬಳಸಿಕೊಳ್ಳುತ್ತ ಬಂದಿದೆ. ಆ ಪ್ರಯೋಗವಸ್ತುಗಳ ಸರಳುವಕೆ ಪ್ರತಿಯಾಗಿ ತನ್ನಲ್ಲಿ ಯಾವುದೆ ನೋವನ್ನು ಉಂಟುಮಾಡದಿರುವಂತೆ ಅದು ಬಹಳ ಹಿಂದೆಯೆ ನಿರ್ವಾತಸ್ಥಿತಿಯನ್ನೆ ಹೋಲು ವಂತಹ ನಿರ್ನೀತಿಯ ಪ್ರಯೋಗಾವರಣವೊಂದನ್ನು ಸೃಷ್ಟಿಸಿಕೊಂಡಿತು ಮಾತ್ರವಲ್ಲ

ಮುಂದೆ ತನ್ನನ್ನು ಬಿಟ್ಟು ಉಳಿದೆಲ್ಲ ಜಗತ್ತನ್ನೂ ಅಂಥದೊಂದು ಆವರಣವಾಗಿ ಪರಿವರ್ತಿಸಿಕೊಂಡಿತು. ವಿಜ್ಞಾನದ ಇಂಥ ಮೌಲ್ಯಾತೀತವೂ ನೀತ್ಯತೀತವೂ ಆದ ನಿಲುವನ್ನು ಸ್ವತಃ ವಿಜ್ಞಾನಿಗಳೆ ಆದ ಕೆಲವರು ಬಹಳ ಹಿಂದೆಯೇ ಪ್ರಶ್ನೆಗೊಡ್ಡಿದ್ದರು. ಉದಾಹರಣೆಗೆಗ, ಶಾಂತಿತತ್ವ ಪ್ರತಿಪಾದನೆಗಾಗಿ ನೊಬೆಲ್ ಪ್ರಶಸ್ತಿಯನ್ನು ಪಡೆದ ಶ್ರೇಷ್ಠ ರಸಾಯನಶಾಸ್ತ್ರಜ್ಞ ಲಿನಸ್ ಪಾಲಿಂಗ್, ವಿಜ್ಞಾನಕ್ಕೆ ನೈತಿಕ ಬಾಧೆಯ ತತ್ವವೊಂದರ ತ್ಯಂತ ತುರ್ತು ಅಗತ್ಯವಿದೆಯೆಂದು ವಾದಿಸಿದ. ಪ್ರಯೋಗ ಪಶುಗಳನ್ನಾಗಿ ಬಳಸಿಕೊಳ್ಳುವ ಜೀವಿಗಳ ಮೇಲೆ ತಾನು ನಡೆಸುವ ಹಿಂಸಾಪ್ರಯೋಗ ವಿಜ್ಞಾನದ ಪ್ರಜ್ಞೆಯಲ್ಲಿ ಪಾಪಭೀತಿಯನ್ನೂ ಪಶ್ಚಾತ್ತಾಪಭಾವವನ್ನೂ ಉಂಟು ಮಾಡದಿದ್ದಲ್ಲಿ, ವಿಜ್ಞಾನ ಅಂಥ ಹಿಂಸಾತ್ಮಕತೆಯನ್ನು ತ್ಯಜಿಸದಿದ್ದಲ್ಲಿ, ಪ್ರಾಯಶ್ಚಿತ್ತ ಮಾಡಿಕೊಳ್ಳದಿದ್ದಲ್ಲಿ, ಅದು ಅತ್ಯಂತ ರಾಕ್ಷಸೀಯವಾಗುವುದೆಂದು ಆತ ಎಚ್ಚರಿಸಿದ. ಕಳೆದ ಶತಮಾನದ ಇನ್ನೋರ್ವ ಮಹಾನ್ ವಿಜ್ಞಾನಿ ಜೆ.ಬಿ.ಸ್. ಹಾಲ್‌ಡೇನ್‌ನ ಜೀವಿತದ ಕೊನೆಯ ಅವಧಿಯ ಚಿಂತನೆ ಮತ್ತು ಕ್ರಿಯೆಗಳು ಇದೇ ವಾದವನ್ನು ಇನ್ನೊಂದು ದಿಕ್ಕಿನ್‌ಂದ ಪುಷ್ಟೀಕರಿಸುವಂತಿದ್ದವು. ಭಾರತೀಯ ಜೀವನ ದರ್ಶನದಿಂದಲೂ ಮೋಹನದಾಸ ಕರಮಚಂದ ಗಾಂಧಿಯಿಂದಲೂ ತೀವ್ರವಾಗಿ ಪ್ರಭಾವಿತನಾದ ಈ ಮೇರು ಪ್ರತಿಭೆಯ ಬ್ರಿಟಿಷ್ ಜೀವಶಾಸ್ತ್ರಜ್ಞ ಅರ್ಧಾಯುಷ್ಯದ ಅನಂತರ ಭಾರತಕ್ಕೆ ಬಂದು ನೆಲೆಸಿ ಇಲ್ಲಿಯೆ ತನ್ನ ಕೊನೆಯುಸಿರನ್ನು ಎಳೆದು, ವಿಜ್ಞಾನಿಗಳು ತಾವು ತಯಾರಿಸಿದ ಹೊಸ ಔಷಧಿಗಳನ್ನು ಪಾಪದ ಪ್ರಾಣಿಗಳ ಮೇಲಲ್ಲದೆ ತಮ್ಮ ಮೇಲೆಯೇ ಮೊದಲುಪ್ರಯೋಗಿಸಿಕೊಳ್ಳಬೇಕೆಂದೂ, ವಿಜ್ಞಾನದಲ್ಲಿ ಹಿಂಸೆ ಅನಿವಾರ್ಯರೆ ಅದಲ್ಲಿ ವಿಜ್ಞಾನಿಗಳು ಆ ಹಿಂಸೆಗೆ ಮೊದಲು ತಮ್ಮನ್ನೆ ಗುರಿಯಾಗಿಸಿಕೊಳ್ಳಬೇಕೆಂದೂ ನಂಬಿದ್ದ ಹಾಲ್‌ಡೇನ್ ಕೊನೆಗೆ ತನ್ನ ಪ್ರಾಣ ಕೆಳೆದುಕೊಂಡದ್ದೂ ಅದೇ ಆದರ್ಶಮೌಲ್ಯದ ಪರಿಪಾಲನೆಯಲ್ಲಿ. ಮಧ್ಯಭಾರತದ ಅರಣ್ಯಪ್ರದೇಶವೊಂದಲಲ್ಲಿ ಆದಿವಾಸಿಗಳೊಂದಿಗೆ ವರ್ಷಗಟ್ಟಲೆ ಕಾಲ ಬಾಳಿದ್ದ ಆತ, ಅಲ್ಲ ಯಾವತ್ತೂ ಜನರ ಸಾವಿಗೆ ಕಾರಣವಾಗುತ್ತದ್ದಿ ವಿಷದ ಹಾವುಗಳ ಕಡಿತಕ್ಕೆ ಚಿಕಿತ್ಸೆಯಾಗಿ ಪ್ರತಿವಿಷವೊಂದನ್ನು ಸಂಶೋಧಿಸಿದ; ಅದರ ಸರ್ವಪ್ರಥಮ ಪ್ರಯೋಗಕ್ಕೆಂದು ತನ್ನನ್ನೆ ಉಪಯೋಗಿಸಿಕೊಂಡು, ಪ್ರಯೋಗ ವಿಫಲವಾಗಿ, ಆತ ಬಲಿಯಾದ.

ಮಾನವನಷ್ಟೆ, ಮಾನವವಿಜ್ಞಾನಿಯಷ್ಟೆ ಸಮಸ್ತ ಅನ್ಯ ಜೀವರೂಪಗಳಿಗೂ ನ್ಯಾಯಬದ್ಧವಾದ ಬದುಕುವ ಹಕ್ಕಿದೆಯೆಂದು ತನ್ನ ಜೀವನಕ್ರಮದಲ್ಲಷ್ಟೆ ಅಲ್ಲದೆ ಮರಣಕ್ರಮದಲ್ಲೂ ತೋರಿಸಿಕೊಟ್ಟ ಹಾಲ್ಡೇನ್‌ನಂತವರು ವಿಜ್ಞಾನ ಕ್ಷೇತ್ರದೊಳಗೆಯೆ



ಆತ್ಮ ಪರೀಕ್ಷೆಯ ಅನಿವಾರ್ಯತೆಯನ್ನೂ ಸಾಧ್ಯತೆಗಳನ್ನೂ ತೋರಿಸಿಕೊಟ್ಟು ಹೋಗಿದ್ದಾರೆ. ಅವರಿಂದ ಪ್ರಭಾವಿತರಾದ ವಿಜ್ಞಾನಿಗಳ ವಲಯದೊಳಗಡೆಯೆ ಇತ್ತೀಚೆಗೆ ಬಹಳ ಮೂಲಶೋಧಕವಾದೊಂದು ಜಿಜ್ಞಾಸೆ ಆರಂಭವಾಗಿದೆ. ಒಂದೆಡೆ ಜ್ಞಾನಖಚಿತತೆಯ ತತ್ವವನ್ನು ಆಲಂಗಿಸುತ್ತಿದ್ದಂತೆಯೆ ಇನ್ನೊಂದೆಡೆ ಪ್ರಜ್ಞಾ ಸಂಕುಚಿತತೆ ತಲೆದೋರುವ ಸನ್ನಿವೇಶದ ಅಪಾಯವನ್ನು ಇಂದು ವಿಜ್ಞಾನಿಗಳೆ ಒಪ್ಪಿಕೊಳ್ಳುತ್ತಿದ್ದಾರೆ. ಈ ದ್ವಂದ್ವವನ್ನು ಬಗೆಹರಿಸಿಕೊಂಡು, ವೈಜ್ಞಾನಿಕ ಅನ್ವೇಷಣೆ - ಸಾಮುದಾಯಿಕ ಸಂವೇದನೆ - ವೈಯಕ್ತಿಕ ಸೃಜನಶೀಲತೆ - ಸಾಮಾಜಿಕ ನ್ಯಾಯಸ್ಥಾಪನೆ - ಭೌತಿಕ ಕ್ರಿಯಾಶೀಲತೆ - ಆಧ್ಯಾತ್ಮಿಕ ಧ್ಯಾನಶೀಲತೆಗಳೆಲ್ಲದರ ಸಮನ್ವಯ ಸಂಕೀರ್ಣರೂಪವೊಂದನ್ನು ಕಂಡುಕೊಳ್ಳುವುದೆ ವಿಜ್ಞಾನದ ಭವಿಷ್ಯದ ಬಹುದೊಡ್ಡ ಸವಾಲಾಗಿದೆ.

(ಸಂಗ್ರಹ - ಅನುವಾದಃ ಜಶವಂತ ಜಾಧವ)

**ನೀನಾಸಮ್ ರಂಗಶಿಕ್ಷಣ ಕೇಂದ್ರ — ಚಟುವಟಿಕೆಗಳು**

ಕಳೆದ ಮೂರು - ನಾಲ್ಕು ತಿಂಗಳ ಅವಧಿಯಲ್ಲಿ ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಗಾಗಿ ಹಲವು ರಂಗತಾಂತ್ರಿಕ ಶಿಬಿರಗಳು ನಡೆದವು. 'ಬಿರುದೆಂತೆಂಬರ ಗಂಡ' ವಾಚಿಕವಿನ್ಯಾಸ (ನಿಃ ಕೆ.ಜಿ. ಮಹಾಬಲೇಶ್ವರ), 'ಮಿಸ್ ಸದಾರಮೆ' (ನಿಃ ಸುರೇಶ ಆನಗಳ್ಳಿ), 'ಊರುಭಂಗ' (ನಿಃ ಅಭಿಲಾಶ್ ಪಿಳ್ಳೆ) ಮುಂತಾದ ನಾಟಕ ಪ್ರಯೋಗಗಳು ನಡೆದವು. ನೀನಾಸಮ್ ತಿರುಗಾಟದ 'ಶಾಕುಂತಲ' (ನಿಃ ರುಸ್ತುಂ ಭರೂಚ), ಕಿನ್ನರ ಮೇಳದ 'ಮಕ್ಕಳ ಮಾಯಾಲೋಕ' (ನಿಃ ಜೀವನರಾಮ್ ಸುಳ್ಯ), 'ದೊರೆ ಈಡಿಪಸ್' (ನಿಃ ಕೆ.ಜಿ. ಕೃಷ್ಣಮೂರ್ತಿ), ಚಿಣ್ಣಬಣ್ಣ ತಂಡದ 'ಅರಾಜಕನೊಬ್ಬನ ಆಕಸ್ಮಿಕ ಸಾವು' (ನಿಃ ನಟರಾಜ ಹೊನ್ನವಳ್ಳಿ), ಚಾಲಿ ಆಧುನಿಕ ನೃತ್ಯತಂಡದ 'ಜಲಂ' (ಸಮುದ್ರ, ತಿರುವನಂತಪುರಂ) ಮತ್ತು 'ಜಾತಕನಾಮ' (ಭೂಮಿರಂಗ್, ಬೆಂಗಳೂರು), ಹಾಗೂ ಗೌಹಾತಿಯ ಸೀಗಲ್ ಥಿಯೇಟರ್ ತಂಡದವರ 'ಜಾತ್ರಾ' (ನಿಃ ಬಹಾರುಲ್ ಇಸ್ಲಾಂ) ನಾಟಕಗಳನ್ನು ನೋಡಿ ವಿದ್ಯಾರ್ಥಿಗಳೆಲ್ಲ ಚರ್ಚೆ ನಡೆಸಿದರು. ವಚನಗಳ ಓದಿನ ಕಾರ್ಯಾಗಾರದಲ್ಲಿ ಭಾಗವಹಿಸಿದರು. ಸದ್ಯ, ಶ್ರೀ ಭರತ್ ಶರ್ಮ ಅವರ ನಿರ್ದೇಶನದಲ್ಲಿ ಜಾತಕ ಕಥೆಗಳನ್ನು ಆಧರಿಸಿದ ಆಧುನಿಕ ನೃತ್ಯಸಂಯೋಜನೆಗಳಿಂದ ಕೂಡಿದ ನಾಟಕವೊಂದರ ತಯಾರಿ ನಡೆಯುತ್ತಿದೆ.

# ಪ್ರಭುತ್ವ, ಹಿಂಸೆ ಮತ್ತು ಲೇಖಕ

ಜಿ. ರಾಜಶೇಖರ

ಇತ್ತೀಚೆಗೆ, ಬಿ.ಜೆ.ಪಿಯ ಅಧ್ಯಕ್ಷ ವೆಂಕಯ್ಯನಾಯ್ಡು, ಸಂಸ್ಕೃತಿ ಸಚಿವ ಜಗಮೋಹನ್‌ರಿಗೆ ಪತ್ರಿ ಬರೆದು, ಕೇಂದ್ರ ಸಾಹಿತ್ಯ, ಲಲಿತ ಕಲಾ ಮತ್ತು ಸಂಗೀತ ನಾಟಕ ಅಕಾಡೆಮಿಗಳಲ್ಲಿ ಎಡಪಂಥೀಯರೇ ತುಂಬಿ ಹೋಗಿದ್ದು ಅವರ ಹಿಡಿತದಿಂದ ಈ ಸಂಸ್ಥೆಗಳನ್ನು ಮುಕ್ತಗೊಳಿಸಬೇಕು ಎಂದು ತಿಳಿಸಿದ್ದಾರೆ. ಇದರ ಬೆನ್ನಿಗೇ, ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿ, ಸಚ್ಚಿದಾನಂದನ್, ಗುಜರಾತ್ ಹಿಂಸೆಯನ್ನು ಖಂಡಿಸಿ ಬರೆದ ಕಾರಣಕ್ಕೆ ಅವರ ಮೇಲೆ ಕ್ರಮತೆಗೆದುಕೊಳ್ಳಬೇಕು ಎಂದು ಆರ್.ಎಸ್.ಎಸ್. ಸರಕಾರವನ್ನು ಒತ್ತಾಯಪಡಿಸಿದೆ. ಈಗಾಗಲೇ ಇತಿಹಾಸ ಸಂಶೋಧನೆಯ ರಾಷ್ಟ್ರೀಯ ಮಂಡಳಿ ಮತ್ತು ಪಠ್ಯಪುಸ್ತಕಗಳ ಕೇಂದ್ರ ಸಮಿತಿಗಳನ್ನು ಸಂಘಪರಿವಾರ ವಶಪಡಿಸಿಕೊಂಡಿದ್ದು ಈಗ ಅದು ವಿವಿಧ ಅಕಾಡೆಮಿಗಳನ್ನು ನಿಯಂತ್ರಿಸಲು ಹೊರಟಿದೆ. ಈ ಅಕಾಡೆಮಿಗಳು ಸರಕಾರದ ಅನುದಾನವನ್ನು ಪಡೆಯುವ ಸಂಸ್ಥೆಗಳಾದರೂ ಸರಕಾರದ ಕೈಗೊಂಬೆಯ ಹಾಗೆ ಯೂವತ್ತೂ ವರ್ತಿಸಿಲ್ಲ. ಅವು ಯಾವುದೇ ಸಿದ್ಧಾಂತದ ಪ್ರಚಾರದಲ್ಲಿ ತೊಡಗಿಕೊಂಡಿದ್ದವು ಎಂದು ಈ ಅಕಾಡೆಮಿಗಳನ್ನು ಟೀಕಿಸುವವರು ಕೂಡ ಇದುವರೆಗೆ ಪಾಲಿಸಿದ್ದಿಲ್ಲ. ಈಗ ಆಳುವ ಪಕ್ಷದ ಅಧ್ಯಕ್ಷರೇ ಇಂತಹ ಆರೋಪ ಮಾಡಿರುವುದರ ಹಿಂದೆ ಯಾವ ಕುತಂತ್ರ ಅಡಗಿದೆ ಎಂದು ನಾವು ಯೋಚಿಸಬೇಕು. ದೇಶದ ಪ್ರಜಾಪ್ರಭುತ್ವವನ್ನೂ, ಸಂಸ್ಥೆಗಳ ಸಾಂವಿಧಾನಿಕ ಸ್ವಯುತ್ತತೆಯನ್ನೂ ನಾಶಪಡಿಸಿ, ತಮ್ಮ ಸಿದ್ಧಾಂತದ ಸರ್ವಾಧಿಕಾರವನ್ನು ಸ್ಥಾಪಿಸುವ ಬಿ.ಜೆ.ಪಿ.ಯ ಕಾರ್ಯಕ್ರಮಕ್ಕೆ, ಇದು ಇತ್ತೀಚೆಗಿನ ಉದಾಹರಣೆ ಎಂಬಂತಿದೆ.

ಇದೇ ಸಂದರ್ಭದಲ್ಲಿ ಯು.ಆರ್. ಅನಂತಮೂರ್ತಿ ಪೂನಾದ ಫಿಲಂ ಮತ್ತು ಟಿ.ವಿ. ತರಬೇತಿ ಸಂಸ್ಥೆಯ ಮಂಡಳಿಯ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಗುಜರಾತ್‌ನ ಘಟನೆಗಳ ಹಿನ್ನೆಲೆಯಲ್ಲಿ ಅನಂತಮೂರ್ತಿ ಈ ಹುದ್ದೆಯನ್ನು ಒಪ್ಪಿಕೊಡದ್ದು ಸರಿಯೆ ಎಂದು ಕೆಲವು ವಲಯಗಳಲ್ಲಿ ಈಗ ಪ್ರಶ್ನಿಸಲಾಗುತ್ತಿದೆ. ವೆಂಕಯ್ಯನಾಯ್ಡು ಅವರ ತರ್ಕವನ್ನು ಪೂನಾದ ಸಂಸ್ಥೆಗೂ ಅನ್ವಯಿಸಿ ಸರಕಾರ ಆ



ಹುದ್ದೆಗೆ ಒಬ್ಬ ಸಂಘ ಪರಿವಾರದ ವ್ಯಕ್ತಿಯನ್ನು ನೇಮಕ ಮಾಡಿದ್ದರೆ ಅದಕ್ಕೆ ನಮ್ಮ ಪ್ರತಿಕ್ರಿಯೆ ಯಾವಬಗೆಯದ್ದಾಗಿರುತ್ತಿದೆ? ನ್ಯಾಯಾಲಯ, ವಿಶ್ವವಿದ್ಯಾಲಯ, ಮತ್ತು ವಿವಿಧ ಅಕಾಡೆಮಿಗಳಂತಹ ಸಂಸ್ಥೆಗಳ ಸ್ವಾಯುತ್ತತೆಯನ್ನು ಕಾಪಾಡುವುದು ಪ್ರಜಾಪ್ರಭುತ್ವದ ಮೂಲಭೂತ ತತ್ವಗಳಲ್ಲಿ ಒಂದು ಈ ಸಂಸ್ಥೆಗಳು ಸ್ವಾಯತ್ತವಾಗಿ ಉಳಿಯುವುದು, ಅನಂತಮೂರ್ತಿಯಂತಹವರು, ಅವುಗಳಿಗೆ ನೇಮಕಗೊಳ್ಳುವ ಸಾಧ್ಯತೆ ಇದ್ದಾಗ ಮಾತ್ರ. ಈ ಹಿಂದೆ ಅನಂತಮೂರ್ತಿ ಕೇರಳದ ಮಹಾತ್ಮಾ ಗಾಂಧಿ ವಿಶ್ವವಿದ್ಯಾಲಯದ ಉಪಕುಲಪತಿಯಾಗಿದ್ದಾಗ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿದ್ದಾಗ, ಅವರು ಕೈಗೊಂಡ ಕ್ರಮಗಳೆಲ್ಲ ಆಸಂಸ್ಥೆಗಳ ಸ್ವಾಯುತ್ತತೆಯನ್ನು ಬಲಪಡಿಸುವಂತಹವಾಗಿದ್ದವು. ಈಗ ಈ ಹೊಸ ಹುದ್ದೆಯನ್ನು ಒಪ್ಪಿಕೊಂಡ ಮಾತ್ರಕ್ಕೆ ಅವರು ಸರಕಾರದ ಸಮರ್ಥಕರಾಗಿಬಿಡುವುದಿಲ್ಲ. ಇಂತಹಹುದ್ದೆಗಳಿಗೆ ಯೋಗ್ಯರನ್ನು ನೇಮಿಸುವ ಕರ್ತವ್ಯ ಪ್ರಜಾಪ್ರಭುತ್ವದಲ್ಲಿ ಸರಕಾರಕ್ಕೆ ಇದೆ; ಮತ್ತು ಅನಂತಮೂರ್ತಿ ಅದನ್ನು ತಮ್ಮ ಹಕ್ಕಿನಿಂದ ಪಡೆದುಕೊಂಡಿದ್ದಾರೆ. ಅಗ ರಾಜ ಮಹಾರಾಜರು ತಮ್ಮ ಆ ಸ್ಥಾನಪಂಡಿತರಿಗೆ ನೀಡುತ್ತಿದ್ದ ಬಿರುದುಗಳ ಹಾಗಲ್ಲ.

ಸರ್ವಾಧಿಕಾರೀ ವ್ಯವಸ್ಥೆಗಳಿಗಂತ ಪ್ರಜಾಪ್ರಭುತ್ವದಲ್ಲಿ, ಪ್ರಭುತ್ವ ಮತ್ತು ಲೇಖಕನ ಸಂಬಂಧ ಹೆಚ್ಚು ಸಮಸ್ಯಾತ್ಮಕವಾದದ್ದು. ಲೇಖಕರ ಪ್ರತಿಭಟನೆ ಕೂಟ ಈ ಎರಡು ವ್ಯವಸ್ಥೆಗಳಲ್ಲಿ ಒಂದೇ ಮಾದರಿಯದ್ದಾಗಿರುವುದಿಲ್ಲ. ಉದಾ: ಅಮೇರಿಕ ಮತ್ತು ಯೂರೋಪ್‌ನ ಲೇಖಕರ ಪ್ರತಿಭಟನೆಸ ಮಾಜಿ ಕಮ್ಯುನಿಸ್ಟ ದೇಶಗಳು ಮತ್ತು ಆಫ್ರಿಕ, ಲ್ಯಾಟಿನ್ ಅಮೆರಿಕಾ ದೇಶಗಳ ಮಿಲಿಟರ ಸರ್ವಾಧಿಕಾರಗಳ ವಿರುದ್ಧ ಲೇಖಕರು ನಡೆಸಿದ ಹೋರಾಟಗಳಿಗಿಂತ ಮೂಲಭೂತವಾಗಿ ಭಿನ್ನವಾಗಿವೆ. ಪ್ರಜಾಪ್ರಭುತ್ವ ಯಾರಿಂದಲೂ ಪರಿಪೂರ್ಣತೆಯನ್ನು ನಿರೀಕ್ಷಿಸುವುದಿಲ್ಲ. ಪರಿಪೂರ್ಣತೆ ಸರ್ವಾಧಿಕಾರಿಗಳ ವ್ಯಸನ. ಸ್ಟಾಲಿನ್, ಹಿಟ್ಲರ್, ಮಾವೋ ಎಲ್ಲರೂ ಪರಿಪೂರ್ಣತೆಯ ಸ್ವರ್ಗದ ಕಡೆ ಕಣ್ಣುನೆಟ್ಟು ತಮ್ಮ ದೇಶಗಳನ್ನು ಹಿಂಸೆಯ ನರಕವನ್ನಾಗಿಸಿದರು. ಪ್ರಜಾಪ್ರಭುತ್ವ, ಪ್ರತಿಭಟನೆಯಲ್ಲಿ ಕೂಡ ಪರಿಪೂರ್ಣತೆಯನ್ನು ಬಯಸುವುದಿಲ್ಲ. ವ್ಯವಸ್ಥೆಯ ಒಳಗಿನವನಾಗಯೇ, ಅನ್ಯಾಯವನ್ನು ಪ್ರತಿಭಸುವುದು ಪ್ರಜಾಪ್ರಭುತ್ವದಲ್ಲಿ ಮಾತ್ರ ಸಾಧ್ಯ. ಅಮೇರಿಕದಲ್ಲಿ ಎಡ್ವರ್ಡ್ ಸಯಾದ್, ನೋಮ್ ಚೇಮ್‌ಸ್ಕಿಯಂತಹವರು ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರಾಗಿದ್ದು ಕೊಂಡೇ, ಆದೇಶದ ಆಳುವ ವ್ಯವಸ್ಥೆಯನ್ನು ವಿರೋಧಿಸುತ್ತಿದ್ದಾರೆ. ತನ್ನ ಬದುಕಿನ ಉದ್ದಕ್ಕೂ ಅಧಿಕಾರದ ವಿರುದ್ಧ ಸೆಣೆಸಿದ್ದ ಬರ್ಟ್ರೆಂಡ್ ರಸೆಲ್ ಇಂಗ್ಲೆಂಡ್‌ನ ಅರಸೊತ್ತಿಗೆ ನೀಡಿದ್ದ ಪ್ರಶಸ್ತಿಗಳನ್ನು ಸ್ವೀಕರಿಸುದ್ದರು. ಸರ್ವಾಧಿಕಾರೀ

ದೇಶಗಳಲ್ಲಾದರೆ, ಇಂತಹವರು ಒಂದೋ ಭೂಗತರಾಗಿರುತ್ತಿದ್ದರು; ಅಥವಾ ಸೆರೆಮನೆಯಲ್ಲಿ ಇರುತ್ತಿದ್ದರು. ಪ್ರಜಾಪ್ರಭುತ್ವ ಅಷ್ಟೇನೂ ಪರಿಪೂರ್ಣ ವ್ಯವಸ್ಥೆಯಲ್ಲ ನಿಜ; ಆದರೆ ಅದರಲ್ಲಿ ಇರುವ ಸ್ವಾತಂತ್ರ್ಯಗಳನ್ನು ಇಲ್ಲ ಎಂದು ನಾವು ಹಠ ಹಿಡಿಯಕೂಡದು.

ಮಹಾಭಾರತದ ಒಂದು ಪ್ರಸಂಗದಲ್ಲಿ, ಬಾಣಗಳ ಮಂಚದಮೇಲೆ ಮಲಗಿ, ತನ್ನ ದೇಹಾಂತ್ಯಕ್ಕಾಗಿ ಕಾದಿದ್ದ ಭೀಷ್ಮರನ್ನು ಕೃಷ್ಣ ಕೇಳುತ್ತಾನೆ,''ಕೌರವ, ದ್ರೌಪದಿಯ ಮಾನಭಂಗ ಮಾಡಿದಾಗ, ನೀವು ಸಭೆಯಲ್ಲಿ ಇದ್ದಿರಿ; ಆಚಾರ್ಯ ದ್ರೋಣರೂ ಇದ್ದರು. ನೀವಿಬ್ಬರೂ ಧರ್ಮಸೂಕ್ಷ್ಮ ಬಲ್ಲವರು. ನೀವು ಆಗ ಏಕೆ ಸುಮ್ಮನಿದ್ದಿರಿ?'' ಭೀಷ್ಮ ಉತ್ತರಿಸುತ್ತಾರೆ,''ಅದು ಅಧರ್ಮವೆಂದು ನನಗೆ ಗೊತ್ತಿತ್ತು. ಆದರೆ ಕೌರವನ ಅನ್ನದ ಋಣ ನಮ್ಮ ಬಾಯಿ ಕಟ್ಟಿತು.'' ಭೀಷ್ಮರಿಗೆ ಸಂಸಾರವಿರಲಿಲ್ಲ. ಆದರೂ ದೊರೆಯ ಆಸ್ಥಾನದಲ್ಲಿ ಇದ್ದುದರಿಂದ ಆ ಋಣ ಅವನನ್ನೂ ಬಿಡಲಿಲ್ಲ. ಪ್ರಜಾಪ್ರಭುತ್ವದಲ್ಲಿ ಬುದ್ಧಿಜೀವಿ, ಪ್ರಭುತ್ವಕ್ಕೆ ಹೀಗೆ ಋಣಿಯಾಗಿರಬೇಕಾದ ಅಗತ್ಯವಿಲ್ಲ. 'ಅನ್ನದ ಋಣ,'' ಜೋಳದವಾಳಿ ( ಇದು ಬಸವನಿಗೆ ಇದ್ದ ಬಿಜ್ಜಳನ ಹಂಗು) ಮುಂತಾದ ಪರಿಕಲ್ಪನೆಗಳು ಪ್ರಜಾಪ್ರಭುತ್ವದಲ್ಲಿ ಅಸಂಗತ. ಹಾಗಾಗಿ ತನಗೆ ಕೊಡಲಾಗಿರುವ ಒಂದು ಹುದ್ದಗಾಗಿ ಅನಂತಮೂರ್ತಿ ಸರಕಾರಕ್ಕೆ ಕೃತಜ್ಞರಾಗಿರಬೇಕಾದ ಅಗತ್ಯ ಇಲ್ಲ; ಅದರ ಧೋರಣೆಗಳನ್ನು ಅನುಮೋದಿಸುವ ಜರೂರು ಸಹ ಅವರಿಗೆ ಇಲ್ಲ. ಗುಜರಾತ್‌ನ ಹಿಂಸೆ ಮತ್ತು ಅದಕ್ಕೆ ಕಾರಣವಾಗಿರುವ ಹಿಂದುತ್ವದ ಶಕ್ತಿಗಳನ್ನು ಅವರು ಹಲವಭಾರಿ ಖಂಡಿಸಿದ್ದಾರೆ. ಒಬ್ಬ ಲೇಖಕ ಇದಕ್ಕಿಂತ ಹೆಚ್ಚು ಏನು ಮಾಡಬಲ್ಲ? ಶಬ್ದಗಳನ್ನು ಬಿಟ್ಟರೆ ಆತನ ಬಳಿ ಏನಿದೆ?

ಇಷ್ಟಕ್ಕೂ, ಗುಜರಾತಿನಲ್ಲಿ ನಡೆದದ್ದು ನಾಝಿ ಜರ್ಮನಿಯ ನರಮೇಧದ ಹಾಗೆ ಸಂಪೂರ್ಣವಾಗಿ ಸರಕಾರವೇ ನಡೆಸಿದ,'' ಔದ್ಯಮಿಕೃತ ಹಿಂಸೆ''ಯಲ್ಲಿ. ಅದು ಜನಸಾಮಾನ್ಯರು ತಮ್ಮ ನೆರೆಹೊರೆಯವರ ಮೇಲೆ ನಡೆಸಿದ ಹಿಂಸೆ. ಅದಕ್ಕೆ ತಯಾರಿ, ಸರಕಾರದ ಪ್ರೋತ್ಸಾಹಗಳು ಇದ್ದದ್ದು ನಿಜ. ಆದರೆ ಮೋದಿಯನ್ನೋ ಅದ್ವಾನಿಯನ್ನೇ ಖಂಡಿಸಿ ಆ ಹಿಂಸೆಯ ಜವಾಬ್ದಾರಿಯಿಂದ ನಾವು ತಪ್ಪಿಸಿಕೊಳ್ಳಲಾರವು. ಹಿಂಸೆಯಲ್ಲಿ ತೊಡಗಿದ್ದವರ ಮುಖಗಳಲ್ಲಿ ನಮ್ಮದೇ ಚಹರೆಗಳು ಇರುವುದನ್ನು ಗುರುತಿಸದೆ ಹೋದರೆ ನಮಗೆ ಆ ಹಿಂಸೆಯ ಅರ್ಥವೇನು ಎಂದು ತಿಳಿಯುವುದಿಲ್ಲ. ಈ ಸನ್ನಿವೇಷದಲ್ಲಿ ಒಬ್ಬ ಲೇಖಕ ತನ್ನ ಕಾಲದ ಹಿಂಸೆಗೆ ಎಷ್ಟರಮಟ್ಟಿಗೆ ಜವಾಬ್ದಾರ? ಯಾವ ನೆಲೆಯಲ್ಲಿ ಆತ ಅದನ್ನು ಪ್ರತಿಭಟಿಸಬೇಕು? ೬೦ರ ದಶಕದಲ್ಲಿ ಫ್ರೆಂಚ್ ಸಾಹಿತ್ಯದ ಇಬ್ಬರು ಧೀಮಂತರು-ಜೀನ್ಪಾಲ್ ಸಾರ್ತ್ರೆ-ಮತ್ತು ಆಲ್ಬರ್ಟ್ ಕಮೂ ನಡವೆ



ಈ ಬಗ್ಗೆ ಒಂದು ದೊಡ್ಡ ವಾಗ್ಯುದ್ದೇ ನಡೆಯಿತು. ಸಾರ್ತ್ರೆ ನಾಝಿಗಳ ವಿರುದ್ಧ ಭೂಗತ ಹೋರಾಟದಲ್ಲಿ ಭಾಗಿಯಾಗಿದ್ದವನು. ಆದರೂ, 'ಹಿಟ್ಲರ್‌ನಿಗೆ ನಾನು ಜವಾಬ್ದಾರ' ಎಂದು ಹೇಳಿದ ಅಸ್ತಿತ್ವವಾದಿ; ಜೊತೆಗೆ ಎಡಪಂಥೀಯ. ಕಮೂ ಕೂಡ ನಾಝಿಗಳ ವಿರುದ್ಧ ಹೋರಾಟನಡೆಸಿದವ. ಆದರೆ ಅವನಿಗೆ ಸಿದ್ಧಾಂತಗಳಲ್ಲಿ ನಂಬಿಕೆ ಇರಲಿಲ್ಲ. ಎಲ್ಲ ಸಿದ್ಧಾಂತಗಳೂ ಹಿಂಸೆಯನ್ನು ತಮ್ಮ ಒಡಲಲ್ಲಿಯೇ ಕಟ್ಟಿಕೊಂಡು ಬರುತ್ತವೆ ಎಂದು ಅವನು ಭಾವಿಸಿದ್ದ. ಸಾರ್ತ್ರೆ ಯ ಕಮ್ಯೂನಿಸ್ಟ್ ಒಲವು ಅವನನ್ನು ರಷ್ಯದಲ್ಲಿ ಸ್ಟಾಲಿನ್ ನಡೆಸಿದ ಹಿಂಸೆಯ ಬಗ್ಗೆ ಕುರುಡನನ್ನಾಗಿ ಮಾಡಿದೆ ಎಂದು ಕಮೂ ಅಪಾದಿಸಿದ. ಅದಕ್ಕೆ ಪ್ರತಿಯಾಗಿ ಸಾರ್ತ್ರೆ, ''ಕಮೂ ನೈತಿಕ ಪ್ರಶ್ನೆಗಳನ್ನು ಸರಳಗೊಳಿಸುತ್ತಿದ್ದಾನೆ; ಕಮ್ಯೂನಿಸಂನ ಹಿಂಸೆಯ ಬಗ್ಗೆ ಮಾತಾಡುವ ಅವನು ಯುರೋಪ್‌ನ ವಸಾಹತುಶಾಹಿ ಮತ್ತು ಅಮೇರಿಕದ ಬಂಡವಾಳ ಶಾಹಿಯ ಕ್ರೌರ್ಯದ ಬಗ್ಗೆ ಏನೂ ಹೇಳುವುದಿಲ್ಲ. ಅಷ್ಟೇಯಾಕೆ, ಆಲ್ಜೀರಿಯಾದಲ್ಲಿ ಫ್ರೆಂಚ್ ವಸಹತುಶಾಹಿ ನಡೆಸಿದ ಹಿಂಸೆಯನ್ನು ಕಮೂ ಕಣ್ಣಾರೆ ಕಂಡವನು. ಆ ಬಗ್ಗೆ ಕೂಡ ಅವನು ಮೌನವಾಗಿದ್ದಾನೆ'' ಎಂದು ಜರಿದ. ಈ ವಾದ ಪ್ರತಿವಾದ ಮುಂದುವರಿದು ಅವರು ಸ್ನೇಹ ಕಡಿಯುವ ಹಂತದಲ್ಲಿ ಸಾರ್ತ್ರೆ ಕಮೂಗೆ ಬರೆದ ಒಂದು ಪತ್ರದಲ್ಲಿ ಹೇಳಿದ,''ನೀನು ಒಬ್ಬ ಬೂರ್ಜ್ವಾ ಲೇಖಕ, ಕಮೂ; ನಾನು ಕೂಡ ಅಷ್ಟೆ. ನಾವು ಇನ್ನು ಏನು ತಾನೆ ಆಗುವುದು ಸಾಧ್ಯ ಹೇಳು''.

**ನೀನಾಸಮ್ ಪ್ರತಿಷ್ಠಾನ: ಅಧ್ಯಯನ ಶಿಬಿರಗಳು ೨೦೦೨**

೨೦೦೨ರ ಡಿಸೆಂಬರ್ ೫ ಮತ್ತು ೬ರಂದು ಎಸ್.ಎಂ.ಎಸ್. ಕಾಲೇಜು, ಬ್ರಹ್ಮಾವರ ದಲ್ಲಿ ಯು.ಆರ್. ಅನಂತಮೂರ್ತಿ ಸಾಹಿತ್ಯ ಅಧ್ಯಯನ ಶಿಬಿರ ನಡೆಯಿತು. ೯೪ ಮಂದಿ ಶಿಬಿರಾರ್ಥಿಗಳು ಭಾಗವಸಿದ್ದರು. ಡಿಸೆಂಬರ್ ೭ ಮತ್ತು ೮ರಂದು ಎಸ್.ಡಿ.ಎಂ. ಕಾಲೇಜು, ಉಜಿರೆಯಲ್ಲಿ ಸಣ್ಣಕಥೆಗಳ ಅಧ್ಯಯನ ಶಿಬಿರ ನಡೆಯಿತು. ೯೭ ಮಂದಿ ಶಿಬಿರಾರ್ಥಿಗಳು ಭಾಗವಸಿದ್ದರು. ಡಿಸೆಂ. ೨೮-೨೯ರಂದು ಮೈಸೂರಿನ ಮಹಾಜನ ಕಾಲೇಜಿನಲ್ಲಿ ಕನ್ನಡ ನಾಟಕ ಅಧ್ಯಯನ ಶಿಬಿರ ನಡೆಯಿತು. ಭಾಗವಹಿಸಿದ ಅಭ್ಯರ್ಥಿಗಳು ೮೦ ಮಂದಿ.

ಈ ಎಲ್ಲ ಶಿಬಿರಗಳಲ್ಲಿ ಸಹಪನ್ಮೂಲ ವ್ಯಕ್ತಿಗಳಾಗಿ ಬಂದ ಅತಿಥಿಗಳು: ಟಿ.ಪಿ. ಅಶೋಕ, ಎಂ.ಎಸ್. ನಾಗರಾಜರಾವ್, ಜಿ.ಕೆ. ಶ್ರೀಕಂಠಮೂರ್ತಿ, ಎಲ್. ಜಿ. ಮೀರಾ, ಕಿ.ರಂ. ನಾಗರಾಜ್, ಅಕ್ಷರ ಕೆ.ವಿ.

# ವಚನಗಳಲ್ಲಿ ಜಾತಿ-ವರ್ಣ

## ವಚನಗಳ ಓದಿನ ಕಾರ್ಯಾಗಾರ

ಭಾರತೀಯ ಸಮುದಾಯ ರೂಪಿಸಿಕೊಂಡುಬಂದಿರುವ ಅನೇಕಾನೇಕ ವ್ಯವಸ್ಥೆಗಳಲ್ಲಿ ಜಾತಿ - ವರ್ಣಗಳ ವ್ಯವಸ್ಥೆಯಷ್ಟು ಸಂಕೀರ್ಣವಾದುದೂ, ಇತ್ತೀಚಿನ ವರ್ಷಗಳಲ್ಲಿ ಚರ್ಚೆ - ಅಧ್ಯಯನ - ವಾದ ವಿವಾದಗಳಿಗೆ ಗುರಿಯಾದುದೂ ಇನ್ಯಾವುದೂ ಇಲ್ಲವೆಂದೆ ಹೇಳಬಹುದು. ಒಂದೆಡೆ ಅದು ಭಾರತೀಯ ಸಮಾಜಕ್ಕೆ ಅತ್ಯಂತ ಸ್ಥಿರವೂ ಸಂತುಲಿತವೂ ಆದ ಸಂರಚನೆಯನ್ನು ಒದಗಿಸಿಕೊಟ್ಟಿತು ಎಂದು ಕೆಲವರು ವಾದಿಸಿದರೆ, ಇನ್ನು ಕೆಲವರು ಅದು ಸ್ಥಿರತೆಯ ಸೋಗಿನಲ್ಲಿ ಸ್ಥಗಿತತೆಯನ್ನೂ ಸಮತೋಲನದ ಸೋಗಿನಲ್ಲಿ ತಾರತಮ್ಯವನ್ನೂ ತಂದು, ಅಪಾರ ಅಮಾನವೀಯ ಶೋಷಣೆಗೂ ಜೀವವಿರೋಧಿ ಶ್ರೇಣೀಕರಣಕ್ಕೂ ಕಾರಣವಾಯಿತೆಂದು ವಾದಿಸಿದರು. ಜನ ಸಾಮಾನ್ಯರು, ಸಂತರು, ಸಮಾಜಸುಧಾರಕರು, ಸಮಾಜವಿಜ್ಞಾನಿಗಳು — ಹೀಗೆ ಯಾವ ವರ್ಗವೂ ಈ ಚರ್ಚೆಯಲ್ಲಿ ಭಾಗವಹಿಸಿಲ್ಲದಿಲ್ಲ. ಭಾರತೀಯ ಸಮುದಾಯದ ಒಳಗಿನಿಂದಲೆ ಹುಟ್ಟಿಬಂದ ವಿಮರ್ಶೆಗಳಂತೆಯೆ ಪರಪ್ರಭಾವದಿಂದಲೂ ಈ ಕುರಿತು ಅನೇಕ ವಿಮರ್ಶೆಗಳು ಮೂಡಿಬಂದಿವೆ. ನಮ್ಮ ಆಧುನಿಕ ಚರಿತ್ರೆಯಲ್ಲಂತೂ ವರ್ಣ - ಜಾತಿಗಳು ನಮ್ಮ ರಾಜಕೀಯ ಹಾಗೂ ಸಂಸ್ಕೃತಿ ಕ್ಷೇತ್ರಗಳ ಎಲ್ಲ ಜಿಜ್ಞಾಸೆ ಮತ್ತು ಚಟುವಟಿಕೆಗಳ ಬಹುಮುಖ್ಯ ಕೇಂದ್ರಗಳಾಗಿವೆ.

ಆದರೆ ಈ ವ್ಯವಸ್ಥೆಯ ಕುರಿತು ನಾವು ಪ್ರಸ್ತುತ ನಡೆಸುತ್ತಿರುವ ಚಿಂತನೆ ಎಷ್ಟರಮಟ್ಟಿಗೆ ಸ್ವಂತಿಕೆಯಿಂದ ಕೂಡಿದ್ದು, ಎಷ್ಟರಮಟ್ಟಿಗೆ ಅನ್ಯರಿಂದ, ವಿಶೇಷವಾಗಿ ಆಧುನಿಕ ಪಾಶ್ಚಿಮಾತ್ಯ ಪ್ರಜ್ಞಾಕ್ರಮದಿಂದ ಪ್ರಭಾವಿತವಾದದ್ದು? ಧರ್ಮ, ಸಂಸ್ಕೃತಿ, ಶಿಕ್ಷಣ, ವಿಜ್ಞಾನ ವಲಯಗಳೆಲ್ಲವುಗಳಲ್ಲಿ ನಾವಿಂದು ಎದುರಿಸುತ್ತಿರುವ ಸ್ವದೃಷ್ಟಿ - ಪರದೃಷ್ಟಿಗಳ ನಡುವಿನ ಸಮಸ್ಯಾತ್ಮಕತೆ ಮೇಲಿನ ಪ್ರಶ್ನೆಯೊಳಗೂ ನುಸುಳಿ ಉತ್ತರಗಳನ್ನು ಅಷ್ಟರಮಟ್ಟಿಗೆ ಜಟಿಲವೂ ಕಷ್ಟಗ್ರಾಹ್ಯವೂ ಆಗಿ ಮಾಡಿದೆ. ಉದಾಹರಣೆಗೆ, ಜಾತಿ - ವರ್ಣಗಳ ವ್ಯವಸ್ಥೆ ಹಿಂದೆ ನಾವಿಂದು ಪರಿಭಾವಿಸಿ ಕೊಂಡಿರುವಂತೆಯೆ ಇತ್ತೆ? ಅಥವಾ ಭೌತಿಕವಾಗಿಯಷ್ಟೆ ಅಲ್ಲದೆ ಬೌದ್ಧಿಕ ವಾಗಿಯೂ ವಸಾಹತೀಕರಣಗೊಂಡ ನಾವು, ಆ ವ್ಯವಸ್ಥೆಯನ್ನು ಕುರಿತು ಪಾಶ್ಚಿಮಾತ್ಯರು ನೀಡಿದ ನಿರೂಪಣೆಯನ್ನೆ ಅದರ ವಾಸ್ತವರೂಪವೆಂದು ಭ್ರಮಿಸಿದ್ದೇವೆಯೆ?

ಕನ್ನಡ ಸಂಸ್ಕೃತಿ ಚರಿತ್ರೆಯಲ್ಲಿ ವಚನಕಾರರ ಕಾಲ ಅಸಾಧಾರಣವಾದೊಂದು ಕ್ರಾಂತಿಸ್ಫೂರ್ತಿಯ ಕಾಲವೆಂದು ಪರಿಗಣಿತವಾಗಿದೆ. ಅಂದು ಸೃಷ್ಟಿಗೊಂಡ ವಚನವಾಙ್ಮಯ ಇಂದಿನವರೆಗೂ ವಿವಿಧ ವ್ಯಾಖ್ಯಾನಗಳಿಗೆ ಒಳಗಾಗುತ್ತ ಬಂದಿರುವುದು ಮಾತ್ರವಲ್ಲದೆ, ನಮ್ಮ



ಸಮಕಾಲೀನ ಸಂದರ್ಭದಲ್ಲಿ, ವಿಷಮ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಕನ್ನಡ ಸಂಸ್ಕೃತಿ ನಡೆಸಿದ ಮೊತ್ತಮೊದಲ ಹೋರಾಟದ ತತ್ವಪ್ರಣಾಳಿಕೆಯೆಂದೆ ಅದು ಬಿಂಬಿತವಾಗಿದೆ. ಇಂಥ ರಾಜಕಾರಣ ಪ್ರೇರಿತ ಒತ್ತಿನ ಓದು ನಮ್ಮ ಕಾಲದ ವೈಶಿಷ್ಟ್ಯವೆ? ಇಲ್ಲ, ರಾಜಕಾರಣದ ಎಳೆಯನ್ನು ಕಿತ್ತು ಬದಿಗಿಟ್ಟಲ್ಲಿ, ವಚನಗಳನ್ನು ಕೇವಲ ಚಂದದ ನುಡಿಗಟ್ಟುಗಳಾಗಿ, ಅನುಭಾವದ ಅಮೂರ್ತ ಭಾವಪ್ರತೀಕಗಳಾಗಿ ಅಪಮೌಲ್ಯಗೊಳಿಸಿದಂತಾಗುವುದಿಲ್ಲವೆ? ವಚನಗಳು ವರ್ಣ - ಜಾತಿಗಳ ಬಗೆಗೆ ನಿಜಕ್ಕೂ ಹೇಳುವುದು ಏನು? ಅವು ಆ ಪದ್ಧತಿಯನ್ನು ವ್ಯಾಖ್ಯಾನಿಸುವ, ವಿಮರ್ಶಿಸುವ ಕ್ರಮ ಯಾವುದು? ಇನ್ನೂ ಮೂಲಭೂತವಾಗಿ, ನಾವು ಭೂತವನ್ನು ಗ್ರಹಿಸುವಲ್ಲಿ ನಮ್ಮ ವರ್ತಮಾನದ ಒತ್ತಡಗಳು, ಆ ಗತ ವಿದ್ಯಮಾನಗಳನ್ನು ಪ್ರಸ್ತುತದ ಚೌಕಟ್ಟಿಗೆ ಸರಿಹೊಂದುವಂತೆ ಒತ್ತಿಕೂರಿಸುವುದಿಲ್ಲವೆ?

ಇದೇ ಜನವರಿ ೨೫, ೨೬ ರಂದು ನೀನಾಸಮ್ ಸಭಾಂಗಣದಲ್ಲಿ ನಡೆದ ವಚನಸಾಹಿತ್ಯದ ಓದಿನ ಕುರಿತಾದ ಕಾರ್ಯಾಗಾರವೊಂದು ಈಯೆಲ್ಲ ಪ್ರಶ್ನೆಗಳನ್ನು ಚರ್ಚಿಸಿತು. ಕನ್ನಡ ಪುಸ್ತಕ ಪ್ರಾಧಿಕಾರ ಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ನೀನಾಸಮ್ ಮತ್ತು ಬೆಂಗಳೂರಿನ ಸೆಂಟರ್ ಫಾರ್ ಸ್ಟಡಿ ಆಫ್ ಕಲ್ಚರ್ ಆ್ಯಂಡ್ ಸೊಸೈಟಿ ಸಹಭಾಗಿಗಳಾಗಿದ್ದವು. ಕಾರ್ಯಾಗಾರವನ್ನು ನಡೆಸಿಕೊಟ್ಟವರು ಶ್ರೀ ಎಸ್.ಎನ್. ಬಾಲಗಂಗಾಧರ. ಭಾಗವಹಿಸಿದವರು ಯು.ಆರ್. ಅನಂತಮೂರ್ತಿ, ವಿವೇಕ ಧಾರೇಶ್ವರ, ಕಿ.ರಂ. ನಾಗರಾಜ, ಮಲ್ಲೇಪುರಂ ವೆಂಕಟೇಶ, ಬಸವರಾಜ ಕಲ್ಗುಡಿ, ಓ.ಎಲ್. ನಾಗಭೂಷಣಸ್ವಾಮಿ, ಜೆ. ಶ್ರೀನಿವಾಸಮೂರ್ತಿ, ರಾಜೇಂದ್ರ ಚೆನ್ನಿ, ರಾಜಾರಾಮ ಹೆಗಡೆ, ಜೆ.ಎಸ್. ಸದಾನಂದ, ಇಂದಿರಾ ಚೌಧುರಿ, ಶಂಕರಪ್ರಸಾದ್, ಟಿ.ಪಿ. ಅಶೋಕ ಮುಂತಾದವರು.

**ನೀನಾಸಮ್ ಪ್ರತಿಷ್ಠಾನ: ಅಧ್ಯಯನ ಶಿಬಿರಗಳು ೨೦೦೩**

೨೦೦೩ರ ಜನವರಿ ೧೫ರಂದು ಹೆಗ್ಗೋಡಿನ ರೂಪಶ್ರೀ ಪದವಿ ಪೂರ್ವ ಕಾಲೇಜಿನಲ್ಲಿ ಕಾವ್ಯ ಸಹೃದಯತಾ ಶಿಬಿರ ನಡೆಯಿತು. ಈ ಶಿಬಿರದಲ್ಲಿ ೬೦ ಶಿಬಿರಾರ್ಥಿಗಳು ಭಾಗವಹಿಸಿದರು. ಇದರಲ್ಲಿ ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳು: ಟಿ.ಪಿ. ಅಶೋಕ, ಕೆ.ವಿ. ಸುಬ್ಬಣ್ಣ, ಜಿ.ಕೆ. ಶ್ರೀಕಂಠಮೂರ್ತಿ, ಎಲ್. ಸಿ. ಸುಮಿತ್ರಾ, ಅಕ್ಷರ ಕೆ.ವಿ.

ಇದೇ ಅಅಅಅಅಅದಂದು ಡಿ.ವಿ. ಎಸ್. ಸ್ವತಂತ್ರ ಪದವಿಪೂರ್ವ ಕಾಲೇಜು, ಶಿವಮೊಗ್ಗದಲ್ಲಿ ಬೇಂದ್ರೆ ಕಾವ್ಯ ಅಧ್ಯಯನ ಶಿಬಿರ ನಡೆಯಿತು. ಸುಮಾರು ೧೦೦ ಮಂದಿ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಇದರಲ್ಲಿ ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳು: ಟಿ.ಪಿ. ಅಶೋಕ, ರಾಜೇಂದ್ರ ಚೆನ್ನಿ, ಡಾ. ಎಂ.ಎಸ್. ಆಶಾದೇವಿ, ಎಸ್.ಆರ್. ವಿಜಯಶಂಕರ, ದಾಕ್ಷಾಯಣಿ, ಡಿ. ರಘುನಾಥ ರಾವ್.

**ಮಾತುಕತೆ ೬೫**

ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭

ದೂರವಾಣಿ: ೦೮೧೮-೩೬೫೬೪೬

ಖಾಸಗಿ ಪ್ರಸಾರದ ತ್ರೈಮಾಸಿಕ ಸಂಪರ್ಕಪತ್ರ

(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಜಸವಂತ ಜಾಧವ್

ಸಹ ಸಂಪಾದಕ: ವೆಂಕಟರಮಣ ಐತಾಳ ಬಿ. ಆರ್.

ವಾರ್ಷಿಕ ವರ್ಗಣಿ: ಇಪ್ಪತ್ತೈದು ರೂಪಾಯಿ

ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು, ಮುದ್ರಣ: ಅಚ್ಚುಮೆಚ್ಚು, ಹೆಗ್ಗೋಡು

---

**ಫೆಬ್ರವರಿ ೨೦೦೩ | ವರ್ಷ ಹದಿನೇಳು | ಸಂಚಿಕೆ ಒಂದು**

---

| | | |
|---|---|---|
| ೧. | ಶಾಪಗ್ರಸ್ತ ಗಂಧರ್ವ — ಬಿ.ವಿ. ಕಾರಂತ ಸಂಸ್ಮರಣೆ<br>ಕೀರ್ತಿನಾಥ ಕುರ್ತಕೋಟಿ | ಪುಟ ೨ |
| ೨. | ಜಾಗತೀಕರಣ ಮತ್ತು ಭಾರತ: ಸೈದ್ಧಾಂತಿಕ ನೆಲೆಗಳು<br>ಹಾಗೂ ಐತಿಹಾಸಿಕ ವಿಪರ್ಯಾಸಗಳು<br>ಎನ್. ಮನು ಚಕ್ರವರ್ತಿ | ಪುಟ ೭ |
| ೩. | ಜಾಗತೀಕರಣ: ಪರ್ಯಾಯ ಸಾಧ್ಯತೆಗಳು<br>ಡಾ| ನಿ. ಮುರಾರಿ ಬಲ್ಲಾಳ | ಪುಟ ೩೧ |
| ೪. | ಸಾವ ಸಮ್ಮುಖದಲ್ಲಿ ಜೀವನಾದ<br>ಬೇಂದ್ರೆಯವರ 'ನಾದಲೀಲೆ' : ಒಂದು ಅನುಭವ<br>ಎಸ್.ಆರ್. ವಿಜಯಶಂಕರ | ಪುಟ ೫೫ |
| ೫. | ನೀನಾಸಮ್ ಸಂಸ್ಕೃತಿ ಶಿಬಿರ ೨೦೦೨ - ವರದಿ | ಪುಟ ೭೯ |

---

**MAATHUKATHE** FEB. 2003 (YEAR 17 ISSUE 1)
NINASAM QUARTERLY NEWS LETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.25 (TWENTY FIVE ONLY)
FOR PRIVATE CIRCULATION
**NINASAM HEGGODU (SAGAR) KARNATAKA 577 417**

← second cover

third cover →

**ಅಕ್ಷರ ಪ್ರಕಾಶನ**

ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭

**ಈಚಿನ ಪ್ರಕಟಣೆಗಳು**

---

**ಕುಮಾರಿಲಭಟ್ಟ**
(ಅಕ್ಷರ ಚಿಂತನ ಮಾಲೆ - ಪರಿಚಯ ಮತ್ತು ಅನುವಾದಗಳು
- ಪ್ರಭಾಕರ ಜೋಷಿ, ಎಂ.ಎಂ. ಹೆಗಡೆ ಸಿದ್ದಾಪುರ) ರೂ. ೫೦

**ಸಾಹೇಬರು ಬರುತ್ತಾರೆ**
(ಗೊಗೋಲ್ ನಾಟಕ ರೂಪಾಂತರ -
ಕೆ.ವಿ. ಸುಬ್ಬಣ್ಣ ಮತ್ತು ಅಕ್ಷರ ಕೆ.ವಿ.) ರೂ. ೪೫

**ರಿಕ್ತ ರಂಗಭೂಮಿ**
(ಗ್ರೊಟೋವ್‌ಸ್ಕಿ ಪರಿಚಯ ಮತ್ತು ಅನುವಾದಗಳು -
ಟಿ.ಪಿ. ಅಶೋಕ) ರೂ. ೪೦

**ಈವರೆಗಿನ ಹೇಳತೇನ ಕೇಳ**
(ಚಂದ್ರಶೇಖರ ಕಂಬಾರ — ಸಮಗ್ರ ಕಾವ್ಯ) ರೂ.೧೫೦

**ಮಾವಿನಮರದಲ್ಲಿ ಬಾಳೆಯ ಹಣ್ಣು**
(ನಾಟಕ-ರಂಗಭೂಮಿ ಕುರಿತ ಬರಹಗಳು - ಅಕ್ಷರ ಕೆ.ವಿ.) ರೂ.೧೦೦

**ಶಕ್ತಿಶಾರದೆಯ ಮೇಳ**
(ಆಧುನಿಕ ಕನ್ನಡಕಾವ್ಯದ ಅಧ್ಯಯನ- ಡಿ.ಆರ್. ನಾಗರಾಜ್ ) ರೂ.೧೫೦

**ಸಂಸಾರದಲ್ಲಿ ಸನಿದಪ**
(ದಾರಿಯೋ ಫೋ ನಾಟಕ ಮರುರೂಪ - ಅಕ್ಷರ ಕೆ.ವಿ.) ರೂ. ೪೫

**ಸಮ್ಮುಖದಲ್ಲಿ ಸ್ವಗತ**
(ಸಮಾಜ-ಸಂಸ್ಕೃತಿ ಕುರಿತ ಕಿರು ಬರಹಗಳು - ಅಕ್ಷರ ಕೆ.ವಿ.) ರೂ. ೮೫

**ಹಸುಬೆ**
(ಜಾನಪದ ಅಧ್ಯಯನ - ಡಾ. ಶಾಲಿನಿ ರಘುನಾಥ) ರೂ. ೮೦

**ವಿಶ್ವಾತ್ಮಕ ದೇಶಭಾಷೆ**
(ಅಕ್ಷರ ಚಿಂತನ ಮಾಲೆ - ಕನ್ನಡವನ್ನು ಕುರಿತ ಚಿಂತನಬರಹಗಳು
- ಷೆಲ್ಡನ್ ಪೊಲಾಕ್, ಅನು: ಅಕ್ಷರ ಕೆ.ವಿ.) ರೂ. ೧೦೦

**ಕಿಟಕಿ ಕನ್ನಡಿಯಾದಾಗ**
(ಕನ್ನಡ-ತಮಿಳುಗಳ ಮಿಲನ-ಮುಖಾಮುಖಿ ಕುರಿತು -ಟಿಆರೆಸ್ ಶರ್ಮ) ರೂ. ೧೦೦

**ಬೆಳಕಾಯಿತು ಕರ್ನಾಟಕ**
(ಕರ್ನಾಟಕದಲ್ಲಿ ವಿದ್ಯುತ್ತಿನ ಇತಿಹಾಸ - ಗಜಾನನ ಶರ್ಮ) ರೂ. ೩೭೫